# ಯುಗರಶ್ಮಿ

★ ಸೃಷ್ಟಿಯ ಉದ್ದೇಶ

★ ಶಿಲುಬೆಯ ಮೇಲೆ ಯೇಸುಕ್ರಿಸ್ತರ ಅಸು ನೀಗಿತ್ತೇ?

★ ಹಜ್ ಕರ್ಮಾನುಷ್ಠಾನ

★ ಕಪಟವಾದಿ ನಾಶಹೊಂದುವನು

★ ಇಸ್ಲಾಮಿನಲ್ಲಿ ಪ್ರವಾದಿತ್ವ

★ ಹರಿಜನರ ಇಸ್ಲಾಂ ಮತ ಸ್ವೀಕಾರ

★ ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ

ಅಕ್ಟೋಬರ್ 1981

ಬೆಲೆ: ರೂ. 1-00

ನಿಮ್ಮ ಹೃದಯಗಳಲ್ಲಿರುವುದನ್ನು ನೀವು ಗುಪ್ತವಾಗಿರಿಸಿದರೂ ಬಹಿರಂಗಪಡಿಸಿದರೂ ದೇವನು ತಿಳಿಯುತ್ತಾನೆ; ಆಕಾಶ-ಭೂಮಿಗಳಲ್ಲಿರುವ ಎಲ್ಲವನ್ನೂ ಅವನು ಬಲ್ಲನು; ಅವನು ಸರ್ವಕಾರ್ಯಗಳಲ್ಲೂ ಸರ್ವಶಕ್ತನಾಗಿದ್ದಾನೆ.

—ಪವಿತ್ರ ಖುರ್‌ಆನ್ (3 : 30)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ: **7** ಸೆಪ್ಟಂಬರ್–ಅಕ್ಟೋಬರ್ 1981 / ತಬೂಕ್–ಇಖಾ 1360 ಸಂಚಿಕೆ: **2**

ಬಿಡಿಪ್ರತಿ: ರೂ. **1-00** ವಾರ್ಷಿಕ ಚಂದಾ: ರೂ. **4-00**


**ವಿಷಯ ಸೂಚಿಕೆ:**


| | ಪುಟ |
|---|---|
| * ಮೋಕ್ಷ ಮಾರ್ಗ ... ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... | 2 |
| * ಸೃಷ್ಟಿಯ ಉದ್ದೇಶ ... ... | 3 |
| * ಶಿಲುಬೆಯ ಮೇಲೆ ಯೇಸುಕ್ರಿಸ್ತರ ಅಸು ನೀಗಿತ್ತೇ ? ... | 5 |
| * ಹಜ್ ಕರ್ಮಾನುಷ್ಠಾನ ... ... | 9 |
| * ಕಪಟವಾದಿ ಬೇಗನೇ ನಾಶ ಹೊಂದುವನು ... ... | 11 |
| * ಇಸ್ಲಾಮಿನಲ್ಲಿ ಪ್ರವಾದಿತ್ವ ... ... | 14 |
| * ತಮಿಳುನಾಡಿನಲ್ಲಿ ಹರಿಜನರ ಇಸ್ಲಾಂ ಮತ ಸ್ವೀಕಾರ . ... | 19 |
| * ಸಂಪಾದಕರಿಗೆ ಪತ್ರ ... ... | 24 |
| * ಒಂದು ದಿವ್ಯದರ್ಶನ ಮತ್ತು ಅದರ ವ್ಯಾಖ್ಯಾನ ... ... | 25 |
| * ಅಹ್ಮದಿಯಾ ವಾರ್ತೆಗಳು ... ... | 26 |
| * ಪುಸ್ತಕ ವಿಭಾಗ – ಇಸ್ಲಾಂ ಮತ ತತ್ತ್ವಜ್ಞಾನ | |



# AHMADIYYA URDU LITERATURE

1 Ahmadiyyat Ka Paigham
2 Imam Mahdi Ka Zuhoor
3 Sadakat Hazrat Masih Mauwood
4 Silsila Nubuwwat Allah Ka Abdi Ahd Hai
5 Khatamunnabiyyeen

**WILL BE SENT FREE**

Apply with 25 paise Stamp for each book to :

**The Editor : "YUGARASHMI" Kannada Quarterly,**

10-23/1008, Ansari Road, Bunder, Mangalore-575 001

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ : 7 | ಸೆಪ್ಟಂಬರ್-ಅಕ್ಟೋಬರ್ 1981 / ತಬೂಕ್-ಇಖಾ 1360 | ಸಂಚಿಕೆ : 2 |
|---|---|---|


## ಮೋಕ್ಷಮಾರ್ಗ

"ದೇವನಿದ್ದಾನೆಂದು ತಿಳಿದು ಅವನ ಅಸ್ತಿತ್ವವನ್ನು ನಂಬಿ ಅವನಿಗೆ ತನ್ನನ್ನು ಅರ್ಪಿಸುವುದಕ್ಕೆ ಇಸ್ಲಾಂ ಎಂದು ಹೇಳಲಾಗುತ್ತದೆ. ದೇವನೊಡನಿರುವ ಭಯ ಭಕ್ತಿಯಿಂದ ಯಾರ ಹೃದಯ ಪ್ರಭಾವಿತವಾಗುತ್ತದೋ ಅವರು ಈ ಮಾರ್ಗದಲ್ಲಿ ಚಲಿಸುವರೆ ಬದ್ಧರಾಗುತ್ತಾರೆ. ಅಧಿಕಾಂಶ ಜನರು ಫಲಶೂನ್ಯವಾದ ಮಾರ್ಗಗಳಲ್ಲಿ ಚಲಿಸಿಕೊಂಡು ಮೋಕ್ಷ ಪಡೆಯಲು ಆಶಿಸುತ್ತಾರೆ. ಆದರೆ ದೇವನು ನಿಶ್ಚಯಿಸಿದ ಸನಾತನ ದಾರಿಯನ್ನೇ ಇಸ್ಲಾಂ ಧರ್ಮ ಮೋಕ್ಷಮಾರ್ಗವೆಂದು ತೋರಿಸಿ ಕೊಡುತ್ತದೆ. ಸತ್ಯವಾದ ನಂಬಿಕೆಗಳಲ್ಲೂ ವಿಶುದ್ಧವಾದ ಕರ್ಮಗಳಲ್ಲೂ ದೈವಸಂತುಷ್ಟಿಯಲ್ಲೂ ಲೀನನಾಗಿದ್ದುಕೊಂಡು ದೈವಸಾಮೀಪ್ಯವೆಂಬ ಮಂದಿರವನ್ನು ಕಂಡು ಹಿಡಿದು ದೇವನ ಸಾಮೀಪ್ಯವನ್ನೂ ಸಂತೃಪ್ತಿಯನ್ನೂ ಸಂಪಾದಿಸುವರೆ ಪರಿಶ್ರಮಿಸುವುದೇ ಆ ಮಾರ್ಗ. ದೇವನಿಂದ ದೂರವಾಗುವುದರಿಂದಲೂ ದೈವಕೋಪದಿಂದಲೂ ಎಲ್ಲಾ ಬಗೆ ಶಿಕ್ಷೆಗಳು ಬಂದೆರಗುತ್ತವೆ. ಯಥಾರ್ಥವಾಗಿ ಪಶ್ಚಾತ್ತಾಪಪಟ್ಟು, ಸತ್ಯಮಾರ್ಗವನ್ನು ಸ್ವೀಕರಿಸುತ್ತಾ, ದೇವನಿಗೆ ಶರಣಾಗಿ ಪರಿಶುದ್ಧವಾದ ಏಕದೇವ ಸಿದ್ಧಾಂತವನ್ನು ಕೈಗೊಳ್ಳುವುದರ ಮುಖಾಂತರ ಮನುಷ್ಯನು ದೇವನ ಸಾಮೀಪ್ಯವನ್ನು ಪಡೆಯುವಂತಾಗಿ ದೇವನು ತೃಪ್ತನಾಗುತ್ತಾನೆ. ಆಗ ಶಿಕ್ಷೆಗಳು ಅವನಿಂದ ದೂರೀಕರಿಸಲ್ಪಡುತ್ತವೆ." (ಸತ್ ಬಚನ್)

—ಹಜ಼್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

"ನೆರೆಕರೆಯವನ ಹಕ್ಕು ಏನೆಂದು ನಿಮಗೆ ಗೊತ್ತಿದೆಯೇ ? ಅವನು ನಿಮ್ಮೊಡನೆ ಸಹಾಯ ಕೇಳಿ ನಿಮ್ಮಿಂದ ಸಹಾಯ ಪಡೆಯುವುದು ಅವನ ಹಕ್ಕಾಗಿದೆ. ಅವನು ಸಾಲ ಕೇಳಿದರೆ ನೀವು ಸಾಲ ನೀಡಬೇಕು. ಅವನು ಕಷ್ಟದಲ್ಲಿ ಸಿಲುಕಿದರೆ ನೀವು ಆವನಿಗೆ ನೆರವೀಯಬೇಕು. ಅವನಿಗೆ ಅಸೌಖ್ಯವಾದರೆ ನೀವು ಅವನಿಗೆ ಶುಶ್ರೂಷೆ ನೀಡಬೇಕು. ನೆರೆಕರೆಯವನು ಮರಣಪಟ್ಟರೆ ಅಂತ್ಯ ಸಂಸ್ಕಾರದಲ್ಲಿ ಪಾಲುಗೊಳ್ಳಬೇಕು. ಅವನಿಗೆ ಒಳಿತುಂಟಾಗುವಾಗ ಶುಭ ಕೋರಬೇಕು. ಅವನು ಆಪತ್ತಿನಲ್ಲಿ ಸಿಲುಕುವಾಗ ಸಾಂತ್ವನ ಪಡಿಸಬೇಕು. ನಿಮ್ಮ ಕಟ್ಟಡವನ್ನು ನೆರೆಯವನ ಮನೆಯ ವಾತಾಯನಕ್ಕೆ ತಡೆಯುಂಟಾಗುವ ರೀತಿಯಲ್ಲಿ ಎತ್ತರಗೊಳಿಸಬಾರದು–ಅವನ ಸಮ್ಮತಿ ವಿನಾ. ನಿಮ್ಮ ಮನೆಗೆ ಹಣ್ಣು ಹಂಪಲು ಇತ್ಯಾದಿ ತಂದರೆ ಒಂದು ಪಾಲನ್ನು ಪಾರಿತೋಷಕವಾಗಿ ನೆರೆಯವನಿಗೆ ನೀಡಬೇಕು. ಅದು ಅಸಾಧ್ಯವೆಂದಾದರೆ, ಅದನ್ನು ರಹಸ್ಯವಾಗಿ ಮನೆಯೊಳಗೆ ಕೊಂಡುಹೋಗಿರಿ; ನೆರೆಮನೆಯ ಮಕ್ಕಳಿಗೆ ತೊಂದರೆಯಾಗುವ ರೀತಿಯಲ್ಲಿ ನಿಮ್ಮ ಮಕ್ಕಳನ್ನು ಆ ಹಣ್ಣುಗಳ ಸಹಿತ ಹೊರಗೆ ಬಿಡಬಾರದು. ನಿಮ್ಮ ಅಡುಗೆಯ ಪಾತ್ರೆಯಿಂದ ಏಳುವ ಭಕ್ಷ್ಯ ವಸ್ತುಗಳ ಪರಿಮಳ–ಅದರ ಒಂದಂಶವನ್ನು ನೆರೆಯವನಿಗೆ ಕೊಡಲಿಕ್ಕೆ ನೀವು ತಯಾರಿಲ್ಲವಾದರೆ–ಅವನಿಗೆ ತೊಂದರೆಯುಂಟಾಗದಿರಲಿಕ್ಕೆ, ಹೊರಗೆ ಹೋಗದಂತೆ ಜಾಗ್ರತೆವಹಿಸಿರಿ."

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)


**AHMADIYYA ENGLISH LITERATURE**

1. Ahmadiyya Movement — 2-00
   By Hazrat Mirza Bashiruddin Mahmud Ahmad
2. Ahmadiyya Movement in India — 1-00
   By Barakat Ahmad Rajeke B. A.
3. The Tomb of Jesus — 1-00
   By Sufi M. R. Bengali
4. A Review of Christianity — 1-00
   By Hazrat Mirza Ghulam Ahmad
5. The Christian Doctrine of Atonement — 1-00
   By Dr. Mufti Muhammad Sadiq, D D., LL. D., S. S. P. (Lond)

Write to:

The Editor, "Yugarashmi" Kannada Quarterly,
10-23/1008, Ansari Road, Bunder, Mangalore-575 001.

# ಸೃಷ್ಟಿಯ ಉದ್ದೇಶ

ಮೌಲವಿ ಬಿ. ಅಬ್ದುಲ್ಲಾ, H.A.

□□

ಸಾಕ್ಷಾತ್ ದೇವನು ಈ ಲೋಕವನ್ನೂ ಸಕಲ ಚರಾಚರಗಳನ್ನೂ ಸೃಷ್ಟಿಸಿದುದರ ನಿಜವಾದ ಉದ್ದೇಶವೇನೆಂದು ಆ ಸೃಷ್ಟಿಕರ್ತನೇ ಬಹಿರಂಗಪಡಿಸುವುದರ ಹೊರತು ಮನುಷ್ಯರಿಗೆ ಸ್ವಯಂ ತಿಳಿದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ವೈಜ್ಞಾನಿಕವಾಗಿ ಬಹಳ ಪ್ರಗತಿ ಸಿದ್ಧಿಸಿರುವ ಈ ಕಾಲದಲ್ಲಿ ಸಹ ಮನುಷ್ಯರಿಗೆ ಈ ಪ್ರಪಂಚದ ಉದ್ಭವದ ಕುರಿತು ಮತ್ತು ವಿವಿಧ ವಸ್ತುಗಳ ಗುಣಗಳ ಕುರಿತು ಪೂರ್ಣ ತಿಳುವಳಿಕೆ ಲಭಿಸದಿರುವಾಗ ಪ್ರಪಂಚದ ನಿರ್ಮಾಣೋದ್ದೇಶವೇನೆಂದು ಸ್ವಯಂ ನಿರ್ಣಯಿಸಲಿಕ್ಕೆ ಸಾಧ್ಯವಾಗುವುದು ಹೇಗೆ ? ವಿಜ್ಞಾನಿಗಳು ಲೋಕದ ಉದ್ಭವಕ್ಕೆ ಸಂಬಂಧಿಸಿದ ಪರಿಶೋಧನೆಯಲ್ಲಿ ಅಂಧಕಾರದಲ್ಲಿ ಮುಳುಗಿರುವ ವಸ್ತುಗಳನ್ನು ಹುಡುಕಾಡುವರೆ ಶ್ರಮಿಸುವೋಪಾದಿಯ ಸ್ಥಿತಿಯಲ್ಲಿರುವಾಗ, ಈ ಪ್ರಪಂಚದ ಸೃಷ್ಟಿಯ ಉದ್ದೇಶವೇನೆಂದು ಮನುಷ್ಯರಿಗೆ ಸ್ವಯಂ ತಿಳಿದುಕೊಳ್ಳುವರೆ ಸಾಧ್ಯವಾಗುವುದೆಂದು ಊಹಿಸುವುದು ಸರಿಯೆನಿಸದು. ನಾಸ್ತಿಕವಾದಿಗಳು ಹೇಳುವ ಪ್ರಕಾರ ಈ ಪ್ರಪಂಚ ತನ್ನಷ್ಟಕ್ಕೆ ಉಂಟಾದುದೆಂದೂ ಇದನ್ನೆಲ್ಲಾ ಕ್ರಮಬದ್ಧವಾಗಿ ನಡೆಸಿಕೊಂಡು ಹೋಗುವ ಒಬ್ಬ ನಿಯಾಮಕನೂ ಸೃಷ್ಟಿಕರ್ತನೂ ಇಲ್ಲವೆಂದೂ ಭಾವಿಸುವುದಾದರೆ ಈ ಪ್ರಪಂಚಸೃಷ್ಟಿಗೆ ಒಂದು ಉದ್ದೇಶವಿರಬೇಕೆಂದು ಹೇಳಲು ನಿರ್ವಾಹವಿಲ್ಲ. ಏಕೆಂದರೆ ಸೃಷ್ಟಿಕರ್ತನಿಲ್ಲವೆಂದು ಹೇಳುವಾಗ ಈ ಪ್ರಪಂಚ ಸಕಲವೂ ಯದೃಚ್ಛಿಕವಾಗಿ ಉಂಟಾದುದೆಂದೂ ಉದ್ದೇಶರಹಿತವಾಗಿ ಅದು ಚಲಿಸುತ್ತಿದೆಯೆಂದೂ ಹೇಳಬೇಕಾದೀತು. ಪ್ರಪಂಚ ತನ್ನಷ್ಟಕ್ಕೆ ಉಂಟಾದುದಲ್ಲವೆಂದೂ ಅದನ್ನು ಸೃಷ್ಟಿಸಿ ಸಂಪೂರ್ಣ ವ್ಯವಸ್ಥೆಯಿಂದೊಡಗೂಡಿ ನಡೆಸಿಕೊಂಡು ಹೋಗುವ ಒಬ್ಬ ಕರ್ತ ಮತ್ತು ನಿಯಾಮಕನಿದ್ದಾನೆಂದೂ ನಂಬುವುದಾದರೆ ಸೃಷ್ಟಿಯ ಉದ್ದೇಶವೇನೆಂದು ಆ ಸೃಷ್ಟಿಕರ್ತನಿಂದಲೇ ತಿಳಿಯಬೇಕಾಗಿದೆ. ನಮ್ಮ ಸೃಷ್ಟಿಗೆ ಒಂದು ನಿರ್ದಿಷ್ಟ ಉದ್ದೇಶವಿಲ್ಲವೆಂದೂ ಕ್ಷಣಭಂಗುರವಾದ ಐಹಿಕ ಜೀವಿತದೊಂದಿಗೆ ನಾವು ನಾಸ್ತಿಯಾಗುತ್ತೇವೆಂದೂ ಭಾವಿಸುವುದಾದರೆ, ಮನುಷ್ಯರಿಗೆ ಈ ಲೋಕದಲ್ಲಿ ಮೃಗಗಳಿಗಿಂತ ಉನ್ನತವಾದ ಒಂದು ಸ್ಥಾನವುಂಟೆಂದು ಹೇಳುವುದು ಸರಿಯೆನಿಸದು. ಮಾತ್ರವಲ್ಲ, ಸ್ವಲ್ಪ ಕಾಲದ ಸುಖ ಅನುಭವಿಸಿ ಅಂತ್ಯಗೊಳ್ಳುವ ವಿಷಯದಲ್ಲಿ ಮೃಗಗಳ ಸ್ಥಾನ ಮನುಷ್ಯರಿಗಿಂತ ಮಿಗಿಲೆಂದು ಹೇಳಬೇಕಾದೀತು. ಹೀಗೆ ವಿವೇಕ ಬುದ್ಧಿಯಿಂದಲೂ ಉನ್ನತ ಪ್ರಜ್ಞೆಯಿಂದಲೂ ಸತ್ಯಾನ್ವೇಷಣ ತೃಷ್ಣೆಯಿಂದಲೂ ಲೋಕವನ್ನು ಸ್ವಾಧೀನಪಡಿಸುವ ಸಾಮರ್ಥ್ಯದಿಂದಲೂ ಸೃಷ್ಟಿಸಲ್ಪಟ್ಟಿರುವ ಮನುಷ್ಯನ ಜೀವಿತಕ್ಕೆ ಮೃಗಗಳ ಜೀವಿತಕ್ಕಿಂತ ಮಿಗಿಲಾದ ಯಾವ ಉದ್ದೇಶವೂ ಇಲ್ಲವೆಂದು ಹೇಳುವುದು ಮನುಷ್ಯತ್ವದ ಹೆಸರಿಗೆ ಕಳಂಕ ಹಚ್ಚುವ ವಿಚಾರವಾಗಿದೆ. ಹಾಗಿರುವಾಗ ಮನುಷ್ಯ ಜೀವಿತದ ಉದ್ದೇಶ ಕ್ಷಣಭಂಗುರವಾದ ಐಹಿಕ ಸುಖ ಗಳಿಕೆ ಮಾತ್ರವಲ್ಲ; ಅದಕ್ಕಿಂತ ಎಷ್ಟೋ ಶ್ರೇಷ್ಠವೂ, ಅನಂತವೂ ಆಗಿರುವ ಒಂದು ಉದ್ದೇಶವಿರಬೇಕಾಗಿದೆ. ಅದು ತನ್ನ ಸೃಷ್ಟಿಕರ್ತನನ್ನು ಅರಿತುಕೊಂಡು ಅನಂತವಾದ ಆನಂದವನ್ನು ಅನುಭವಿಸಲಿಕ್ಕೆ ಪರಿಶ್ರಮಿಸುವುದಾಗಿದೆ. ಇಸ್ಲಾಂ ಧರ್ಮದ ಮೂಲಾಧಾರವಾದ ಪವಿತ್ರ ಖುರ್‌ಆನಿನಲ್ಲಿ ಬಹಳ ಸಂಕ್ಷಿಪ್ತವಾಗಿ ಈ ಉದ್ದೇಶವನ್ನು ಬಹಿರಂಗಪಡಿಸಲಾಗಿದೆ. ದೇವನು ಹೀಗೆ ಹೇಳುತ್ತಾನೆ : "ದೊಡ್ಡವರನ್ನೂ ಸಣ್ಣವರನ್ನೂ ನನ್ನ ಸೇವೆಗಾಗಿಯಲ್ಲದೆ ನಾನು ಸೃಷ್ಟಿಸಲಿಲ್ಲ" (51 : 57)

ಈ ವಾಕ್ಯದಿಂದ ತಿಳಿಯುವುದೇನೆಂದರೆ ಯಜಮಾನನ ಗುಣವಿಶೇಷಗಳನ್ನು ಅರಿತುಕೊಂಡು ಆ ಗುಣಗಳನ್ನು ತಮ್ಮಲ್ಲಿ ಪ್ರತಿಬಿಂಬಿಸಲಿಕ್ಕೆ ಉತ್ಸುಕರಾಗಿರಬೇಕಾದುದು ಸೇವಕರ ಧರ್ಮವಾಗಿರುವಂತೆ ಸೃಷ್ಟಿಕರ್ತನ ಗುಣಮಹಿಮೆಗಳನ್ನು ಅರಿತುಕೊಂಡು ಅವನನ್ನು ಆರಾಧಿಸುತ್ತಲೂ ಆವನ ಗುಣಗಳನ್ನು ಸಾಧ್ಯವಿರುವಷ್ಟರ ಮಟ್ಟಿಗೆ ತಮ್ಮ ಜೀವಿತದಲ್ಲಿ ಪ್ರತಿಬಿಂಬಿಸುತ್ತಲೂ ಇರಬೇಕಾದುದು ಮನುಷ್ಯರ ಧರ್ಮವಾಗಿದೆ. "ನೀವು ದೇವನ

ಗುಣಗಳನ್ನು ನಿಮ್ಮಲ್ಲಿ ಉಂಟುಮಾಡಿರಿ" ಎಂದು ಮುಹಮ್ಮದ್ ಪೈಗಂಬರರು ಉಪದೇಶಿಸಿದುದರ ತಾತ್ಪರ್ಯ ಸಹ ಮೇಲಿನ ಖುರ್‌ಆನ್ ವಾಕ್ಯದಿಂದ ತಿಳಿದುಬರುವ ಪ್ರಕಾರ ಧಾರ್ಮಿಕ ಜೀವಿತವನ್ನು ನಡೆಸುತ್ತಲೂ ದೈವೇಚ್ಛೆಗೆ ವಿಧೇಯವಾಗಿಯೂ ಇರಬೇಕೆಂದೇ ಆಗಿದೆ. ಸಂಕ್ಷಿಪ್ತವಾಗಿ, ಮನುಷ್ಯಸೃಷ್ಟಿಯ ಉದ್ದೇಶ ಸೃಷ್ಟಿಕರ್ತನನ್ನು ಅರಿತುಕೊಂಡು ಅವನ ಸಾಮಿಪ್ಯವನ್ನೂ ಅನುಗ್ರಹವನ್ನೂ ಸಂಪಾದಿಸಲಿಕ್ಕೆ ಅವನ ಸೇವೆಗೈಯುತ್ತಾ ಇರಬೇಕೆಂದಾಗಿದೆ. ಆ ಸರ್ವವಲ್ಲಭನನ್ನು ಅರಿತುಕೊಂಡು ಅವನ ಇಷ್ಟಾನುಸಾರ ವರ್ತಿಸಿ ಅವನ ಅನುಗ್ರಹ ದಾನಗಳಿಗೆ ಪಾತ್ರರಾಗುವ ಶಕ್ತಿ ಮನುಷ್ಯರಿಗೆ ಮಾತ್ರವುಳ್ಳದ್ದಾದುದರಿಂದ ಅವರು ದೇವನ ಪ್ರತಿನಿಧಿಗಳೆಂದು ಹೇಳಲ್ಪಡುತ್ತಾರೆ. ದೇವನು ಆದಮನನ್ನು ತನ್ನ ರೂಪದಲ್ಲಿ ಸೃಷ್ಟಿಸಿದನೆಂದು ಕ್ರೈಸ್ತ ಧರ್ಮಗ್ರಂಥದಲ್ಲೂ ಪೈಗಂಬರರ ವಚನಗಳಲ್ಲೂ ಉಲ್ಲೇಖಿಸಿರುವುದರ ಅಂತರಾರ್ಥವೂ ಇದೇ ಆಗಿದೆ. ಒಟ್ಟಾರೆ ಹೇಳುವುದಾದರೆ, ಮನುಷ್ಯರನ್ನು ದೇವನು ಸೃಷ್ಟಿಸಿರುವುದು ಅವರು ಅವನ ಬಗ್ಗೆ ತಿಳಿಯಲಿಕ್ಕೂ ಇತರ ವಸ್ತುಗಳನ್ನು ಸೃಷ್ಟಿಸಿದ್ದು ಮನುಷ್ಯರಿಗೂ ಆಗಿದೆ. ಸೃಷ್ಟಿಗಳಲ್ಲಿ ಶ್ರೇಷ್ಠ ಸ್ಥಾನಕ್ಕೆ ಅರ್ಹವಾದ ಹಾಗೂ ವಿಶೇಷ ಬುದ್ಧಿಯಿಂದ ಕೂಡಿದ ಮನುಷ್ಯಸೃಷ್ಟಿಯ ಉದ್ದೇಶ ಈ ಪ್ರಕಾರವಾಗಿರುವಾಗ ಮನುಷ್ಯರಿಗೆ ಅಧೀನವಾಗಿ ಹಾಗೂ ಅವರ ಕ್ಷೇಮಕ್ಕಾಗಿ ವರ್ತಿಸುತ್ತಿರುವ ಇತರ ವಸ್ತುಗಳ ಸೃಷ್ಟಿಯ ಉದ್ದೇಶ ಮನುಷ್ಯರ ಸೃಷ್ಟಿಯ ಉದ್ದೇಶಕ್ಕಿಂತ ಕೀಳಾಗಿಯೂ ಅದಕ್ಕೆ ಆಸ್ಪದವಾಗಿಯೂ ಮಾತ್ರವಾಗಿರಬೇಕಾಗಿದೆ. ಇತರ ವಸ್ತುಗಳು ಮನುಷ್ಯರಿಗಾಗಿ ಸೃಷ್ಟಿಸಲ್ಪಟ್ಟಿವೆಯೆಂದು ಅವುಗಳ ಮೇಲೆ ಅವರಿಗಿರುವ ಮೇಲಧಿಕಾರದಿಂದಲೇ ತಿಳಿದು ಬರುತ್ತದೆ. ಈ ವಿಚಾರದಲ್ಲಿ ಖುರ್‌ಆನ್ ಹೇಳುವುದು ಈ ರೀತಿಯಾಗಿದೆ : "ಅವನು ನಿಮಗಾಗಿ ಭೂಮಿಯಲ್ಲಿರುವ ಸರ್ವವನ್ನೂ ಸೃಷ್ಟಿಸಿರುವನು" (2 : 30). "ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿರುವವನು ಹಾಗೂ ಮೋಡದಿಂದ ಮಳೆ ಸುರಿಸಿ ಆ ಮೂಲಕ ನಿಮಗೆ ಆಹಾರಕ್ಕಾಗಿ ಫಲವರ್ಗಗಳನ್ನು ಉತ್ಪಾದಿಸಿರುವವನು ದೇವನೇ ಆಗಿದ್ದಾನೆ. ಅವನ ವಿಧಿಯನುಸಾರ ಸಮುದ್ರದಲ್ಲಿ ಸಂಚರಿಸುತ್ತಿರುವ ಹಡಗುಗಳು ನಿಮಗೋಸ್ಕರ ಇವೆ. ನಿಮಗಾಗಿ ನದಿಗಳನ್ನೂ ಸೃಷ್ಟಿಸಿರುವನು. ಕ್ಲಪ್ತವಾಗಿ ಚಲಿಸುತ್ತಿರುವ ಸೂರ್ಯನನ್ನೂ ಚಂದ್ರನನ್ನೂ ಅವನು ನಿಮಗೋಸ್ಕರ ಸೃಜಿಸಿರುವನು. ನಿಮಗೋಸ್ಕರ ಹಗಲು ರಾತ್ರಿಗಳನ್ನೂ ಸೃಷ್ಟಿರುವನು. ನಿಮಗೆ ದೇವನ ಅನುಗ್ರಹಗಳನ್ನು ಎಣಿಸಲಿಕ್ಕೆ ಸಾಧ್ಯವಿಲ್ಲ" (14:33-35). ಈ ವಾಕ್ಯಗಳಿಂದ ತಿಳಿದು ಬರುವುದೇನೆಂದರೆ ಭೂಮಿ ಮತ್ತು ಅದರಲ್ಲಿರುವ ಸಕಲ ವಸ್ತುಗಳೂ ಸೂರ್ಯ ಚಂದ್ರಾದಿ ಗೋಳಗಳೂ ಮನುಷ್ಯರ ಕ್ಷೇಮ ಮತ್ತು ಪ್ರಗತಿಗಾಗಿ ಪ್ರವರ್ತಿಸಲಿಕ್ಕೆ ಸೃಷ್ಟಿಸಲ್ಪಟ್ಟಿವೆ ಎಂದಾಗಿದೆ. ಭೂಮಿ ಹಲವಿಧ ಪರಿವರ್ತನ ದಶೆಯನ್ನು ದಾಟಿ ಮನುಷ್ಯವಾಸಕ್ಕೆ ಯೋಗ್ಯವಾಗಿ ಮಾರ್ಪಟ್ಟಾಗ ಮನುಷ್ಯಸೃಷ್ಟಿಯುಂಟಾಯಿತೆಂದು "ವಿಕಾಸವಾದ" ಸಿದ್ಧಾಂತ ಹೇಳುವುದು ಸಹ ಪ್ರಸ್ತುತ ಸಂಗತಿಯನ್ನೇ ಸಾಕ್ಷೀಕರಿಸುತ್ತದೆ. ವಿಕಾಸವಾದ ಪ್ರಕಾರದ ಈ ಪರಿವರ್ತನೆ ಮನುಷ್ಯನ ಉದ್ಭವದೊಂದಿಗೆ ಕೊನೆಗೊಂಡಿರುವುದರಿಂದ, ಈ ಪರಿವರ್ತನೆಯ ಎಲ್ಲಾ ಉದ್ದೇಶ ಮನುಷ್ಯನ ಸೃಷ್ಟಿಯೆಂದೂ ಅದಕ್ಕೆ ಬೇಕಾಗಿಯೇ ಈ ವಸ್ತುಗಳನ್ನೆಲ್ಲಾ ಪ್ರವರ್ತಿಸುವಂತೆ ಮಾಡಲಾಗಿದೆಯೆಂದೂ ತಿಳಿದು ಬರುತ್ತದೆ. ಹೀಗೆ ತನ್ನ ಯಥಾರ್ಥ ದಾಸರಾಗಲಿಕ್ಕಾಗಿ ದೇವನು ಮನುಷ್ಯರನ್ನು ಸೃಷ್ಟಿಸಿ ಅವರ ಅವಶ್ಯಕ್ಕಾಗಿ ಇತರ ಸೃಷ್ಟಿಗಳನ್ನು ಸೃಜಿಸಿರುವನೆಂದು ಖುರ್‌ಆನ್ ಕಲಿಸುತ್ತದೆ.

ಸೃಷ್ಟಿಸುವುದೆಂಬುದು ದೇವನ ಗುಣಗಳಲ್ಲಿ ಒಂದಾಗಿದೆ. ದೇವನು ಸೃಷ್ಟಿಕರ್ತನಲ್ಲದಿರುತ್ತಿದ್ದರೆ ಸರ್ವಜ್ಞ, ಸರ್ವಶಕ್ತ, ಸರ್ವಾಧಿಕಾರಿ ಎಂಬಿತ್ಯಾದಿ ಅವನ ದಿವ್ಯ ಗುಣಗಳು ಬಹಿರಂಗಗೊಳ್ಳುತ್ತಿರಲಿಲ್ಲ. ಆದ್ದರಿಂದ ಅವನು ಪ್ರಪಂಚವನ್ನೂ ತನ್ನ ಬಗ್ಗೆ ತಿಳಿಯುವರೆ ಶಕ್ತಿಯುಳ್ಳ, ವಿಶಿಷ್ಟವಾಗಿ ತನ್ನ ದಿವ್ಯಗುಣಗಳಲ್ಲಿ ಕೆಲವನ್ನು ಜೀವಿತದಲ್ಲಿ ಪ್ರತಿಬಿಂಬಿಸಿ ತನ್ನ ಪ್ರಾತಿನಿಧ್ಯ ವಹಿಸಲು ಶಕ್ತರಾದ ಮನುಷ್ಯರನ್ನೂ ಸೃಷ್ಟಿಸಿದನು. "ಗುಪ್ತ ನಿಧಿಯಾದ ನಾನು ಸ್ವಯಂ ತಿಳಿಯಲ್ಪಡಬೇಕೆಂದು ಇಚ್ಛಿಸಿದಾಗ ಆದಮ (ಮನುಷ್ಯ)ನನ್ನು ಸೃಷ್ಟಿಸಿದೆನು" ಎಂದು ಅಲ್ಲಾಹನು ಹೇಳಿದನೆಂಬ ಮುಹಮ್ಮದ್ ಪೈಗಂಬರರ ನುಡಿಯಿಂದ ಸ್ಪಷ್ಟಪಡುವುದು ಇದೇ ಸಂಗತಿಯಾಗಿದೆ. ಹಾಗೆ, ಸೃಷ್ಟಿಯ ಉದ್ದೇಶ ದೇವನ ಗುಣಮಹಿಮೆಗಳನ್ನು ಬಹಿರಂಗ ಪಡಿಸುವುದು ಹಾಗೂ ಆ ಮೂಲಕ ಅವನ ಬಗ್ಗೆ ತಿಳಿಯುವರೆ ಸಾಧ್ಯವಾಗುವಂತೆ ಮಾಡುವುದಾಗಿದೆಯೆಂದು ತಿಳಿದುಬರುತ್ತದೆ. ●

# *ಶಿಲುಬೆಯ ಮೇಲೆ ಯೇಸುಕ್ರಿಸ್ತರ ಅಸು ನೀಗಿತ್ತೇ?

## ಆಧುನಿಕ ಸಂಶೋಧನೆ

● ಇ. ಎಂ. ಅಶ್ರಫ್

ಯೇಸುಕ್ರಿಸ್ತರು ಶಿಲುಬೆಯ ಮೇಲೆ ಮೃತಿ ಹೊಂದಿರಲಿಲ್ಲವೆಂದು ಯುರೋಪಿನ ಸಂಶೋಧಕರು ವೈಜ್ಞಾನಿಕ ಪುರಾವೆಗಳ ಆಧಾರದಲ್ಲಿ ಘೋಷಿಸಲಿಕ್ಕೆ ತೊಡಗಿರುವರು. ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಅಹ್ಮದಿಯಾ ಸಂಘಟನೆಯ ಸಂಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ದೃಷ್ಟಾಂತಗಳ ಹಾಗೂ ವೈಜ್ಞಾನಿಕ ಪುರಾವೆಗಳ ಆಧಾರದಲ್ಲಿ ಯೇಸುಕ್ರಿಸ್ತರು ಶಿಲುಬೆಯ ಮೇಲೆ ಮೃತಪಟ್ಟಿರಲಿಲ್ಲವೆಂದು ಉದ್ಘೋಷಿಸಿದಾಗ ಲೋಕದ ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾದ ಕ್ರೈಸ್ತರು ಆ ಮಹಾತ್ಮರ ವಿರುದ್ಧವಾಗಿ ಸ್ವರವೆಬ್ಬಿಸಿದರು. ಕಾರಣವೇನೆಂದರೆ, ಯೇಸು ದೇವನ ಪುತ್ರನಲ್ಲವೆಂದೂ ಕೇವಲ ಒಬ್ಬ ಪ್ರವಾದಿಯೆಂದೂ ಬಹಿರಂಗವಾದರೆ ಅವರ ವಿಶ್ವಾಸದ ಅಡಿಪಾಯವೇ ಕುಸಿಯುವುದೆಂದು ಅವರಿಗೆ ತಿಳಿದಿತ್ತು. ವಾಸ್ತವಿಕತೆಗಳನ್ನು ಸದಾಕಾಲ ಗೋಪ್ಯವಾಗಿರಿಸಲಿಕ್ಕೆ ಸಾಧ್ಯವಿಲ್ಲವೆಂಬುದು ಐತಿಹಾಸಿಕ ಸತ್ಯವಾದುದರಿಂದ ಇಂದು ಶಿಲುಬೆಯ ದೇಶದಿಂದಲೂ ಮಾರ್ಪಾಟಿನ ಕಹಳೆ ಧ್ವನಿಗಳು ಮೊಳಗುತ್ತಿವೆ.

ವಿಜ್ಞಾನವು ಹೊಸ ವಲಯಗಳನ್ನು ಪ್ರವೇಶಿಸುವುದರೊಂದಿಗೆ ಐತಿಹಾಸಿಕ ಸತ್ಯಗಳನ್ನು ಮರೆಮಾಚಿದ್ದ ಪರದೆಗಳು ನೀಗಿಸಲ್ಪಡುತ್ತವೆ,

ಟೂರಿನ್ ವಸ್ತ್ರ (Turin shroud–ಯೇಸುವಿನ ಪವಿತ್ರ ಬಟ್ಟೆ) ದ ಬಗ್ಗೆ ಅಧ್ಯಯನ ಮಾಡುತ್ತಿರುವ British Society for the Turin shroud ಎಂಬ ಸಂಸ್ಥೆಯ ಜನರಲ್ ಸೆಕ್ರಟರಿ ರೆವರೆಂಡ್ ಎಚ್. ಡೇವಿಡ್ ಸೋಕ್ಸ್ (Rev. H. David Sox) ಬರೆದು 1978ರಲ್ಲಿ ಕೊರೊನೆಟ್ ಬುಕ್ಸ್ ಬ್ರಿಟನಿನಲ್ಲಿ ಪ್ರಕಾಶನಗೊಳಿಸಿದ File on the Shroud ಎಂಬ ಗ್ರಂಥ ಒಂದು ಕೋಲಾಹಲವನ್ನೇ ಸೃಷ್ಟಿಸಿತು. ಟ್ಯೂರಿನ್ ವಸ್ತ್ರಕ್ಕೆ ಸಂಬಂಧಿಸಿದ ರೆ| ಸೋಕ್ಸ್ ಅವರ ಸಂಶೋಧನೆ ಯೇಸುಕ್ರಿಸ್ತರು ಶಿಲುಬೆಯ ಮೇಲೆ ಮರಣಪಡಲಿಲ್ಲವೆಂಬ ಅಹ್ಮದಿಯಾ ವಿಶ್ವಾಸವನ್ನು ಸಮರ್ಥಿಸುತ್ತದೆ.

ರೆವರೆಂಡ್ ಸೋಕ್ಸ್‌ರವರು 1956ರಿಂದ ಟೂರಿನ್ ಪವಿತ್ರ ವಸ್ತ್ರದ ಕುರಿತಾದ ಅಧ್ಯಯನದಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸಿದರು. 1977ರಲ್ಲಿ ಬ್ರಿಟನಿನಲ್ಲಿ ಟೂರಿನ್ ಪವಿತ್ರ ಬಟ್ಟೆಯ ಕುರಿತು ಒಂದು ಕಾನ್ಫರೆನ್ಸ್ ಏರ್ಪಡಿಸಲಾಯಿತು. ಅಂಬಾಟ್ಯೋರ್ (ದ್ವಿತೀಯ) ರಾಜನ ನಿಕಟವರ್ತಿಯೂ ಓರ್ವ ಪುರೋಹಿತನೂ ಆಗಿದ್ದಾರೆ ರೆ| ಸೋಕ್ಸ್. ಪ್ರಸಿದ್ಧ ಯಹೂದ ಚರಿತ್ರೆಗಾರ ಫ್ಲೇವಿಯಸ್ ಜೋಸೆಫಸ್ ಯೇಸುಕ್ರಿಸ್ತರ ಶಿಲುಬಾಘಟನೆಗೆ ಸಮೀಪ ಕಾಲದಲ್ಲಿ ಬರೆದ ತನ್ನ ಆತ್ಮಕಥೆಯಲ್ಲಿ ಶಿಲುಬೆಯ ಮೇಲಿನ ಮರಣವನ್ನು "ಮರಣಗಳ ಪೈಕಿ ಅತ್ಯಂತ ಶೋಚನೀಯ" ಎಂದು ವರ್ಣಿಸಿ ಶಿಲುಬೆಯ ಮೇಲಿನ ಸಾವಿನಿಂದ ಒಬ್ಬ ಅಪರಾಧಿ ಪಾರಾದ ಬಗ್ಗೆ ಬರೆಯುತ್ತಾರೆ :

"ತೆಕ್ಯೋವ (Thecoa) ಎಂಬ ಒಂದು ಗ್ರಾಮಕ್ಕೆ ನನ್ನನ್ನು ಅವರು ಕಳುಹಿಸಿದರು. ಆ ಸ್ಥಳ ಶಿಬಿರ ಹೂಡಲು ತಕ್ಕದ್ದೇ ಎಂದು ತಿಳಿಯಬೇಕಾಗಿತ್ತು. ಹಿಂತಿರುಗಿ ಬಂದಾಗ ಅನೇಕ ಅಪರಾಧಿಗಳನ್ನು ಶಿಲುಬೆಗೇರಿಸಿದ ಸ್ಥಿತಿಯಲ್ಲಿ ಕಂಡೆನು. ಅವರ ಪೈಕಿ ಮೂವರು ನನ್ನ

*File on the Shroud ಎಂಬ ಪುಸ್ತಕದ ಐದನೆ ಅಧ್ಯಾಯದ ಒಂದು ಸಂಕ್ಷೇಪವಾಗಿದೆ ಈ ಲೇಖನ.

ಹಳೆಯ ಪರಿಚಯಸ್ಥರಾಗಿದ್ದರು. ಅವರನ್ನು ಆ ಸ್ಥಿತಿಯಲ್ಲಿ ಕಂಡಾಗ ನನಗೆ ಬೇಸರವಾಯಿತು. ನಾನು ಕೂಡಲೇ ಜನರಲ್ ಕಮಾಂಡರಾಗಿದ್ದ ಟೈಟಸನ ಹತ್ತಿರ ಹೋಗಿ ಆ ಮೂವರನ್ನೂ ನಿಶ್ಶರ್ತವಾಗಿ ಬಿಡುಗಡೆಗೊಳಿಸಬೇಕೆಂದು ಅಗತ್ಯಪಡಿಸಿದೆನು. ಆತನು ಅವರನ್ನು ಶಿಲುಬೆಯಿಂದ ಕೆಳಗಿಳಿಸಲಿಕ್ಕೂ ಬೇಕಾದ ಶುಶ್ರೂಷೆಗಳನ್ನು ಕೂಡಲೇ ನೀಡಲಿಕ್ಕೂ ಆದೇಶಿಸಿದನು. ಮೃತ್ಯುದಾಡೆಯಿಂದ ರಕ್ಷಿಸಲಿಕ್ಕೆ ಬೇಕಾದುದೆಲ್ಲಾ ಮಾಡಲಾಯಿತು. ಇಬ್ಬರು ಮೃತಿಹೊಂದಿದರೂ ಒಬ್ಬನು ಬದುಕಿದನು."

ಯೇಸುಕ್ರಿಸ್ತರು ಶಿಲುಬೆಯಿಂದ ರಕ್ಷಿಸಲ್ಪಟ್ಟಿರುವರೆಂದು ಸಮರ್ಥಿಸುವರೆ ಸಾಕ್ಷ್ಯವಾಗಿ ಸಂಶೋಧಕರು ಇದನ್ನು ಎತ್ತಿಹಿಡಿಯುತ್ತಾರೆ. ಇದಕ್ಕೆ ಆಧಾರವಾಗಿ ಅವರು ತೋರಿಸುವ ವಾಸ್ತವಾಂಶವೇನೆಂದರೆ. ಶಿಲುಬೆಯ ಮೇಲೆ ಮೃತ್ಯು ಶೀಘ್ರ ಗತಿಯಲ್ಲಿ ಉಂಟಾಗುವುದಿಲ್ಲವೆಂದಾಗಿದೆ. ಇನ್ನೊಂದು, ಈಟಿಯ ಮೊನೆಯಿಂದ ತಿವಿದುಂಟಾದ ಗಾಯ ಯೇಸುವಿನ ಶಿಲುಬೆಯ ಮೇಲಿನ ಮರಣದ ಬಗ್ಗೆ ಸಂಶಯಕ್ಕೆಡೆಗೊಡುತ್ತದೆ. ತೀವ್ರವಾದ ಮೂರ್ಛಾವಸ್ಥೆ ಮತ್ತು ಮರಣದ ವ್ಯತ್ಯಾಸವನ್ನು ಗುರುತಿಸುವರೆ ವೈದ್ಯಕೀಯ ಪ್ರಗತಿ ಯೇಸುಕ್ರಿಸ್ತರ ಕಾಲದಲ್ಲಿರಲಿಲ್ಲ.

**1960ರಲ್ಲಿ ಹ್ಯೂಶೋನ್ ಫೀಲ್ಡ್** (Hugh Schon Field) ಬರೆದ 'ದಿ ಪಾಸ್ಓವರ್ ಪ್ಲೋಟ್' ಎಂಬ ಗ್ರಂಥ ಷ್ಲಯರ್‌ಮಾಷರ್ (Schliermacher) ಮತ್ತು ವೆಂಟುರೆನಿ (Venturini) ಹದಿನೆಂಟನೆ ಶತಮಾನದಲ್ಲಿ ಘೋಷಿಸಿದ ಅಭಿಪ್ರಾಯಗಳನ್ನು ಅನುಮೋದಿಸುತ್ತದೆ. ಹದಿನೆಂಟನೆಯ ಶತಕದಲ್ಲಿ ಅವರು ತಮ್ಮ ವಿಚಾರಗತಿಗಳನ್ನು ಒಂದು ಸವಾಲೆಂಬಂತೆ ಲೋಕಕ್ಕೆ ಸಾರಿದರು :

"ಯೇಸು ಶಿಲುಬೆಯ ಮೇಲೆ ಪ್ರಾಣಬಿಟ್ಟಿರಲಿಲ್ಲ. ತೀವ್ರವಾದ ಮೂರ್ಛಾವಸ್ಥೆಯಿಂದಲೂ ಶವಕುಟೀರದ ಶೈತ್ಯಾವಸ್ಥೆಯಿಂದಲೂ ಯೇಸು ಪಾರಾಗಿದ್ದರು. ಹ್ಯೂಶೋನ್ ಫೀಲ್ಡ್ ತನ್ನ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ :

"ಶಿಲುಬೆಗೇರಿಸುವಿಕೆ ತನ್ನ ಅಂತ್ಯವಲ್ಲವೆಂದು ಯೇಸುವಿಗೆ ಭರವಸೆಯಿತ್ತು. ಮಸೀಹಾ ಆಗಿದ್ದ ತನ್ನ ಜವಾಬ್ದಾರಿಕೆಗಳ ಬಗ್ಗೆ ಯೇಸುವಿಗೆ ಪೂರ್ಣವಾದ ಪ್ರಜ್ಞೆಯಿತ್ತು...... ದೇವನೇ ತನ್ನನ್ನು ರಕ್ಷಿಸುವನೆಂದು ಅವರು ದೃಢಚಿತ್ತರಾಗಿದ್ದರು......"

ಒಂದನೇ ಪುಟದಲ್ಲಿ ಈ ಬಗ್ಗೆ ಸವಿವರವಾಗಿ ಬರೆಯಲಾಗಿದೆ :

"ಜೆರೂಸಲೇಂ : ಸೂರ್ಯಾಸ್ತಮಾನಕ್ಕೆ ಕೆಲವೇ ನಿಮಿಷಗಳು ಮಾತ್ರ ಬಾಕಿ ಇವೆ. ಗೊಲ್ಗೊಥ ಪರ್ವತದಲ್ಲಿ ಮೂರು ಶರೀರಗಳು ಶಿಲುಬೆಗೆ ಜಡಿಯಲ್ಪಟ್ಟಿವೆ. ಅವರಲ್ಲಿ ಇಬ್ಬರು–ಅವರು ಕಳ್ಳರಾಗಿದ್ದರು–ಸತ್ತಿರುವರು. ಮೂರನೆಯ ವ್ಯಕ್ತಿ ಸಹ ಮೃತಪಟ್ಟಿರುವಂತೆ ಗೋಚರವಾಗುತ್ತದೆ. ಅದು ನಜರೆತಿನ ಯೇಸು. ಇದೋ ಈಗ ಅರಿಮಥಾಯದ ಜೋಸೆಫ್ ಒಳ್ಳೆಯ ವಸ್ತ್ರಗಳನ್ನೂ ಸುಗಂಧ ದ್ರವ್ಯಗಳನ್ನೂ ತೆಗೆದುಕೊಂಡು ಯೇಸುವಿನ ಬಳಿಗೆ ಹೋಗುತ್ತಾನೆ. ನಂತರ ಯೇಸುವನ್ನು ರಕ್ಷಿಸುತ್ತಾನೆ. ಇವೆಲ್ಲಾ ಮೊದಲೇ ಮಾಡಿಟ್ಟ ಯೋಜನೆಯಾಗಿದೆ..."

**1780ರಲ್ಲಿ ಕಾರ್ಲ್ ಫ್ರೆಡರಿಕ್** (Carl Friedrich) ಇದೇ ರೀತಿ ಬರೆದನು: "ಯೇಸು ಶಿಲುಬೆಗೇರಿಸಲ್ಪಟ್ಟಾಗ ಮರಣ ಸಮೀಪಿಸಿದಂತೆ ನಟಿಸಿದನು. ತನ್ನ ಅನುಯಾಯಿಗಳು ಎಲ್ಲಾ ವ್ಯವಸ್ಥೆ ಮಾಡಿರುವರೆಂದೂ ಶೀಘ್ರವಾಗಿ ತನ್ನನ್ನು ರಕ್ಷಿಸಲಾಗುವುದೆಂದೂ ಆತನಿಗೆ ತಿಳಿದಿತ್ತು."

ಯೇಸುಕ್ರಿಸ್ತರ ಶಿಲುಬೆಯ ಮೇಲಿನ ಮರಣವನ್ನು ಖಂಡಿಸುವ ಸಂಶೋಧಕರು ಒತ್ತಿ ಹೇಳುವ ಸಂಗಗಳು: 1. ಅವರು ಶಿಲುಬೆಯ ಮೇಲೆ ಸ್ಮೃತಿಹೀನರಾದರು, ಗಾಢನಿದ್ರಾವಸ್ಥೆ ಪಡೆದರು 2. ಶರೀರದ ಉಷ್ಣ ಇಳಿದು ಬೂದಿ ಬಣ್ಣ ಪಡೆಯಿತು. 3. ಕಾಲುಗಳು ಬೀಗಿದವು, ಶ್ವಾಸೋಚ್ಛ್ವಾಸಕ್ಕೆ ತಡೆಯುಂಟಾಯಿತು.

ಇವು ಮರಣದ ಬಾಹ್ಯ ಲಕ್ಷಣಗಳೆಂದು ಆ ಕಾಲದಲ್ಲಿ ಎಣಿಸಲಾಗಿತ್ತು. ಆದ್ದರಿಂದಲೇ ಯೇಸುಕ್ರಿಸ್ತರು ಮೃತ್ಯುವನ್ನಪ್ಪಿದರೆಂದು ಅವರು ಗಣಿಸಿದರು. ಶವಕುಟೀರದಲ್ಲಿ ಮೂರು ದಿನಗಳ ಶುಶ್ರೂಷೆಯ ನಂತರ ಗುಣ ಹೊಂದಿ ಯೇಸು "ಪುನರುತ್ಥಾನ" ಪಡೆದರು. ಈ ಊಹೆಯಿಂದ ಇನ್ನೂ ಮುಂದೆ ಹೋಗಿ ಕೆಲವು ಸಂಶೋಧಕರು ಹೀಗೆ ಹೇಳುತ್ತಾರೆ :

"ಮೂರು ದಿನಗಳ ಶುಶ್ರೂಷೆಯಿಂದ ಸುಖ ಪಡೆದ ನಂತರ ಶವಕುಟೀರದಿಂದ ಹೊರಗೆ ಹೋಗಲಿಕ್ಕಾಗಿ ಯೇಸು ಸ್ವಯಂ ಪ್ರವೇಶ ದ್ವಾರದ ಕಲ್ಲುಗಳನ್ನು ನೀಗಿಸಿದನು. ಆತನು ಆಗ ನಗ್ನನಾಗಿದ್ದನು. ಆದರೆ, ಹೊರಗೆ ತೋಟಗಾರನ ವಸ್ತ್ರಗಳನ್ನು ಪಕ್ಕನೆ ಕಂಡು ಅದನ್ನೆತ್ತಿ ಶರೀರವನ್ನು ಮುಚ್ಚಿದನು. ಆದ್ದರಿಂದಲೇ ಮಗ್ದಲದ ಮೇರಿಯು ಮುಂದೆ ಯೇಸು ಬಂದಾಗ ತೋಟಗಾರನೆಂದು ಮೊದಲು ಆಕೆ ಸಂಶಯ ಪಟ್ಟದ್ದು."

ಪವಿತ್ರ ಬಟ್ಟೆ (Shroud) ಯನ್ನು ಯೇಸು ಶಿಲುಬೆಯ ಮೇಲೆ ಗತಿಸಲಿಲ್ಲವೆಂಬುದಕ್ಕೆ ಪುರಾವೆಯಾಗಿ ಎತ್ತಿ ತೋರಿಸುವ ಒಂದು ಪಂಗಡವಾಗಿದೆ, ಅಹ್ಮದಿಯಾ ಮುಸ್ಲಿಮ್. ಈ ಸಂಘಟನೆಯನ್ನು ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ *ಪಾಕಿಸ್ತಾನದಲ್ಲಿ ಸ್ಥಾಪಿಸಿದರು. ದೇವನು ತನ್ನನ್ನು ಮಸೀಹಾಗಿ ನಿಯೋಗಿಸಿರುವನೆಂದು ಅವರು ಘೋಷಿಸಿದರು.

"ದೈವಿಕ ಪ್ರಭಾವದ" ಪ್ರೇರಣೆಯಿಂದ ಪ್ರಥಮವಾಗಿ ಅವರು 1890ರಲ್ಲಿ ಲೋಕಕ್ಕೆ ಹೀಗೆ ಸಾರಿದರು: "ಯೇಸು ಶಿಲುಬೆಯ ಮೇಲೆ ಮೃತಿಹೊಂದಲಿಲ್ಲ !"

ಇಸ್ಲಾಮಿನ ಇತರ ಪಂಗಡಗಳಂತೆಯೇ ಯೇಸು ಕ್ರಿಸ್ತರನ್ನು ನಿಜವಾದ ಪ್ರವಾದಿಯೆಂದು ಅಹ್ಮದೀಯರು ಸಹ ನಂಬುತ್ತಾರೆ. ಆದರೆ ಯೇಸು ದೇವಪುತ್ರನಲ್ಲ.

"ಯೇಸು ಶಿಲುಬೆಯ ಮೇಲಿನ ಶಾಪಗ್ರಸ್ತ ಮರಣದಿಂದ ವಿಮುಕ್ತರಾಗಿದ್ದರು" ಎಂಬುದನ್ನು ರುಜುಪಡಿಸಲಿಕ್ಕೆ ಚಾರಿತ್ರಿಕ ಪುರಾವೆಗಳನ್ನು ಪ್ರದರ್ಶಿಸಿ ಈ ಪಂಗಡದವರು 'ಶಿಲುಬೆಯಿಂದ ಯೇಸುವಿನ ವಿಮೋಚನೆ' ಎಂಬ ಹೆಸರಿನಲ್ಲಿ ಲಂಡನಿನಲ್ಲಿ ಒಂದು ಅಂತಾರಾಷ್ಟ್ರೀಯ ಸಿಂಪೋಸಿಯಂ ಏರ್ಪಡಿಸಿದರು. ಬೈಬಲ್ ಮತ್ತು ಖುರ್‌ಆನಿನ ಬೆಳಕಿನಲ್ಲಿ 'ಟೂರಿನ್ ಪವಿತ್ರ ಬಟ್ಟೆ'ಯನ್ನು ಆಧಾರವಾಗಿರಿಸಿ ಅವರು ಈ ಸಿಂಪೋಸಿಯಮಿನಲ್ಲಿ ತಮ್ಮ ವೀಕ್ಷಣೆಗಳನ್ನು ಬಹಿರಂಗಪಡಿಸಿದರು. 1977 ಸೆಪ್ಟಂಬರಿನಲ್ಲಿ ಅಹ್ಮದಿಯಾ ಪಂಗಡದ ಲಂಡನ್ ಮಸೀದಿಯಿಂದಲೂ ಇಮಾಂ ಬಿ.ಎ. ರಫೀಕ್‌ರವರ ನಾಯಕತ್ವದಲ್ಲಿ ಕೆಲವರು ಒಂದು ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದರು. ಚರ್ಚಾ ವೇಳೆಯಲ್ಲಿ ಇಮಾಂ ರಫೀಕ್ ಅಹ್ಮದಿಯಾ ಸಂಘಟನೆಯ ವಿಶ್ವಾಸ ಪ್ರಮಾಣಗಳ ಆಧಾರದಿಂದ ಮಾತನಾಡಿದರು.

ಯೇಸುಕ್ರಿಸ್ತರು ಶಿಲುಬೆಯಿಂದ ರಕ್ಷಿಸಲ್ಪಟ್ಟಿದ್ದರು. ಮಾತ್ರವಲ್ಲ, ಅದರ ನಂತರ 'ಕಾಣೆಯಾದ ಇಸ್ರಾಯೇಲ್ ಗೋತ್ರ'ವನ್ನು ಹುಡುಕಲಿಕ್ಕಾಗಿ ಪೆಲಸ್ತೀನದಿಂದ ಹೊರಟರು. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದರ ಅಧ್ಯಯನ ವ್ಯಕ್ತಪಡಿಸುವುದೇನೆಂದರೆ, ಯೇಸುಕ್ರಿಸ್ತರು ಗಾಯಗೊಂಡು ತೀವ್ರ ಸ್ಮೃತಿಹೀನತೆಗೆ ಗುರಿಯಾದರೆಂದೂ ಶಿಲುಬೆಯಿಂದ ಕೆಳಗಿಳಿಸುವಾಗ ಅವರು ಬದುಕಿದ್ದರೆಂದೂ ಅನುಯಾಯಿಗಳು ಅವರಿಗೆ ಸಕಲ ವಿಧ ಶುಶ್ರೂಷೆ ಮಾಡಿದರೆಂದೂ ಆಗಿದೆ. ಶಿಷ್ಯರು ಆಗ ಉಪಯೋಗಿಸಿದ ಮದ್ದುಗಳನ್ನು ಕೂಡ ಅವರು ಸೂಚಿಸಿರುವರು. ಅವು ರಕ್ತಬೋಳ ಮತ್ತು ಲೋಳಿಸರ (Myrrh and aloes) ಆಗಿದ್ದವು. ಹೀಗೆ ಔಷಧಿಗಳನ್ನು ಸಹ ತಯಾರಿಸಿ ಯೇಸುವನ್ನು ರಕ್ಷಿಸುವ ಪ್ರಯತ್ನದಲ್ಲಿ ಮುಂಚಿತವಾಗಿ ಯೋಜನೆ ಮಾಡಲಾಗಿತ್ತೆಂದು ಹಝ್ರತ್ ಅಹ್ಮದ್ ಕಾಣುತ್ತಾರೆ. ಕಾರಣವೇನೆಂದರೆ, ನಮಗೆ ತಿಳಿದ ಮಟ್ಟಿಗೆ ಯಹೂದರ ಶವಸಂಸ್ಕಾರ ಕ್ರಿಯೆಗಳಲ್ಲಿ ಈ ರೀತಿ ಏರ್ಪಾಡುಗಳಿರುವುದಿಲ್ಲ. ಮಾತ್ರವಲ್ಲ, ಯೇಸುಕ್ರಿಸ್ತರನ್ನು ರಕ್ಷಿಸಲಿಕ್ಕಾಗಿ ಪಿಲಾತನು ಮುಂಚಿತವಾಗಿಯೇ ಉಪಾಯ ಹೂಡಿದ್ದನು.

'ಶಾಪಗ್ರಸ್ತ ಮರಣ'ದಿಂದ ಯೇಸು ರಕ್ಷಿಸಲ್ಪಟ್ಟಿದ್ದರೆಂಬ ಮುಸ್ಲಿಮರ ವಿಶ್ವಾಸಕ್ಕೆ ಧಾರ್ಮಿಕ ಕಾರಣಗಳು ಕೂಡ ಇವೆ. ದೇವನು ನಿಯೋಗಿಸಿದ ಯಾವ ಪ್ರವಾದಿಯೂ ಇಷ್ಟು ಶೋಚನೀಯಾವಸ್ಥೆಯಲ್ಲಿ ಮೃತಪಡಲಿಕ್ಕಿಲ್ಲವೆಂದು ಅವರು ದೃಢವಾಗಿ ನಂಬುತ್ತಾರೆ. ಯಹೂದರ ಹಾಗೂ ಕ್ರೈಸ್ತರ ಬಗ್ಗೆ ಮುಸ್ಲಿಮರ ಮನೋಗತಿಯನ್ನು ಅಹ್ಮದಿಯಾ ಸಂಘಟನೆಯ ಲೇಖನಗಳು ವ್ಯಕ್ತಪಡಿಸುತ್ತವೆ :

"ಯಹೂದರು ಯೇಸು ಶಿಲುಬೆಯ ಮೇಲೆ ಮೃತಿಹೊಂದಿದರೆಂದು ನಂಬುತ್ತಾರೆ. ಕಾರಣವೇನೆಂದರೆ ಅವರ ದೃಷ್ಟಿಯಲ್ಲಿ ಯೇಸು ಮಿಥ್ಯಾ ಪ್ರವಾದಿ......"

*ಇಂಡಿಯಾದ ಖಾದಿಯಾನಿನಲ್ಲಾಗಿದೆ ಅಹ್ಮದಿಯಾ ಸಂಘಟನೆ ಸ್ಥಾಪಿತಗೊಂಡದ್ದು.

ಪ್ರಸ್ತುತ ವಿಷಯವನ್ನು ನಿರಾಕ್ಷೇಪವಾಗಿ ಋಜು ಪಡಿಸುವ ಮಾರ್ಗಗಳನ್ನು ಹಝ್ರತ್ ಅಹ್ಮದ್ ವ್ಯಕ್ತ ಪಡಿಸಿರುವರು:

"ಯೇಸುಕ್ರಿಸ್ತರ ನಿಷ್ಕಳಂಕತೆಯಲ್ಲಿ ಪಿಲಾತನಿಗೆ ದೃಢ ವಿಶ್ವಾಸವಿತ್ತು. ದುಃಸ್ವಪ್ನಗಳಿಗೆ ಗುರಿಯಾದ ಆತನ ಪತ್ನಿ ಆತನಿಗೆ ಪ್ರೇರಣೆಯಿತ್ತಳು. ಆದ್ದರಿಂದಲೇ ಯೇಸುಕ್ರಿಸ್ತರನ್ನು ರಕ್ಷಿಸಲಿಕ್ಕಾಗಿ ಮುಂಚಿತವಾಗಿ ಆತನು ಉಪಾಯ ಮಾಡಿದನು. ರೋಮನ್ ಸಾಮ್ರಾಜ್ಯದ ಜವಾಬ್ದಾರಿಯುಳ್ಳ ಅಧಿಕಾರಿ ಎಂಬ ಸ್ಥಿತಿಯಲ್ಲಿ ಯೇಸು ಕ್ರಿಸ್ತರನ್ನು ರಕ್ಷಿಸುವರೆ ಮುಂಚೂಣಿಯಲ್ಲಿ ನಿಲ್ಲಲಿಕ್ಕೆ ಆತನಿಗೆ ಸಾಧ್ಯವಿರಲಿಲ್ಲ; ಆದರೆ ಯೇಸುಕ್ರಿಸ್ತರನ್ನು ರಕ್ಷಿಸಲಿಕ್ಕೆ 'ಮಾಸ್ಟರ್ ಮೈಂಡ್' ಪಿಲಾತನೇ ಆಗಿದ್ದನು. ಇದನ್ನು ಒಂದು ನಾಟಕವೆಂಬಂತೆ ಹೋಲಿಸುವುದಾದರೆ ಪ್ರಧಾನ ಪಾತ್ರಧಾರಿ ಪಿಲಾತನೇ ಆಗಿದ್ದಾನೆ. ಇನ್ನೊಬ್ಬ ಪಾತ್ರಧಾರಿ ಯೇಸುವಿನ ನಿಕಟ ಅನುಯಾಯಿ ಅರಿಮಥಾಯದ ಜೋಸೆಫ್. ಆತನು ಸಮೀಪದ ಬಂಡೆಗಳಿರುವ ತೋಟದಲ್ಲಿ ಒಂದು ಶವಕುಟೀರವನ್ನು ನಿರ್ಮಿಸಿದ್ದನು. ಮೂರನೆಯ ವ್ಯಕ್ತಿ ನಿಕೋಡೆಮಸ್ (Nicodemus) ಎಂಬೋರ್ವ ಯಹೂದ. ಆತನು ವಿಚಾರಗಳನ್ನು ವಿಶದವಾಗಿ ತಿಳಿಯುವುದರಲ್ಲಿ ನಿಪುಣನಾಗಿದ್ದನು. ಮಾರಣೆ ದಿನ ಸಬ್ಬತ್ ಆಗಿತ್ತು. ಪಿಲಾತ ಲೆಕ್ಕಹಾಕಿದನು. ಶಿಲುಬೆಗೇರಿಸುವಿಕೆಯನ್ನು ಆ ಕಾರಣದಿಂದಲೇ ಶುಕ್ರವಾರ ಮಧ್ಯಾಹ್ನಕ್ಕೆ ನಿಶ್ಚಯಿಸಲಾಯಿತು. ಏಕೆಂದರೆ ಸೂರ್ಯಾಸ್ತಮಾನದ ನಂತರ ಹೆಚ್ಚು ಹೊತ್ತು ಶಿಲುಬೆಯ ಮೇಲೆ ಯೇಸು ತೂಗಬೇಕಾಗಿ ಬರುವುದಿಲ್ಲವಷ್ಟೇ.

ಜೋಸೆಫ್ ಮತ್ತು ನಿಕೋಡೆಮಸ್ ಯೇಸುವಿನ ನಿಕಟ ಅನುಯಾಯಿಗಳಾಗಿದ್ದರಷ್ಟೇ. ಪಿಲಾತ ವೇಷ ಬದಲಾಯಿಸಿದನು. ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕೆ ಅರ್ಹರಾದವರನ್ನು ಕಂಡುಹಿಡಿದನು. ಪಿಲಾತನ ಕೆಲಸ ಮುಗಿಯಲಿಲ್ಲ, ಯೇಸುಕ್ರಿಸ್ತರಿಗೆ ಸ್ಮೃತಿ ಬರಿಸುವರೆ ಎಲ್ಲಾ ಏರ್ಪಾಡುಗಳನ್ನು ಆತನು ಮಾಡಿದನು......"

ಇಲ್ಲವಾದರೆ ರಕ್ತಬೋಳ ಮತ್ತು ಲೋಳಿಸರ ತರಲಿಕ್ಕೆ ನಿಕೋಡೆಮಸ್ ಉದ್ದೇಶಿಸಿದ ಕಾರಣವೇನು ?

ಅರಿಮಥಾಯದ ಜೋಸೆಫ್ ಗವರ್ನರರೊಡನೆ ಕೇಳಿದ ತಕ್ಷಣ ಯೇಸುವಿನ "ಶರೀರ"ವನ್ನು ಹಾಗೆ ನೀಡಲು ಗವರ್ನರ್ ಒಪ್ಪಿದ್ದೇಕೆ ?

ಈ ಯೋಜನೆಯನ್ನು ಮುಂಚಿತವಾಗಿಯೇ ಮಾಡಿರದಿದ್ದರೆ ಅರಿಮಥಾಯದ ಜೋಸೆಫ್—ಅಪರಿಚಿತನಾದ ಪರಊರಿನವನು—ಕೇಳಿದ ಕೂಡಲೇ ಗವರ್ನರ್ ಶರೀರವನ್ನು ಬಿಟ್ಟುಕೊಡುತ್ತಿದ್ದನೇ ? ಇನ್ನೊಂದು ವಿಚಾರ ವೇನೆಂದರೆ ಈ ರಹಸ್ಯ ಏರ್ಪಾಡಿನ ಕುರಿತು ಯೇಸು ಕ್ರಿಸ್ತರಿಗೆ ಚೆನ್ನಾಗಿ ಗೊತ್ತಿತ್ತು. ಇದು ಅವರ ಭವಿಷ್ಯೋಕ್ತಿಯ ಸಾಕ್ಷ್ಯವಾಗಿಯೂ ಪರಿಣಮಿಸಿತು :

"ಯೋನಾ ಪ್ರವಾದಿ ಮೂರು ಹಗಲು ಮತ್ತು ಮೂರು ರಾತ್ರಿ ತಿಮಿಂಗಿಲದ ಹೊಟ್ಟೆಯಲ್ಲಿ ಕಳೆದಂತೆ ಮನುಷ್ಯಪುತ್ರ ಮೂರು ರಾತ್ರಿ ಮತ್ತು ಮೂರು ಹಗಲು ಭೂಗರ್ಭದಲ್ಲಿ ಕಳೆಯುವನು."

ಯೋಧರು ಯೇಸುವಿನ ಕಾಲುಗಳನ್ನು ಗಾಯಗೊಳಿಸಲಿಲ್ಲ — ಕಾರಣವೇನೆಂದರೆ, ಅವರು ಯೇಸು ಮೃತಪಟ್ಟಿರುವರೆಂದು ಎಣಿಸಿದ್ದರು. ಹಝ್ರತ್ ಅಹ್ಮದ್ ರವರ ಅಭಿಪ್ರಾಯದಂತೆ "ಶತಾಧಿಪತಿ ಈಟಿಯಿಂದ ಶರೀರಕ್ಕೆ ಚುಚ್ಚಿದಾಗ ರಕ್ತ ಮತ್ತು ನೀರು ಬಂತು. ಜೆರೂಸಲೇಮಿನಲ್ಲಿ ಥಕ್ಕನೆ ಉಂಟಾದ ಭೂಕಂಪ ನಿಮಿತ್ತ ಜನರು ಶೀಘ್ರವಾಗಿ ಮನೆಗಳಿಗೆ ಹಿಂತಿರುಗಿದರು—ಆದ್ದರಿಂದ "ಶವಶರೀರ ಬಿಟ್ಟುಹೋಗುವ" ಯೇಸುವನ್ನು ದೃಢವಾಗಿ ಕಾಣಲು ಯಾರೂ ಇರಲಿಲ್ಲ — ಯೇಸು ಹಾಗೆ ಗುಣಹೊಂದಿದ ಬಳಿಕ 'ಕಾಣೆಯಾದ ಇಸ್ರಾಯೇಲ ಆಡುಗಳ'ನ್ನು ಹುಡುಕುವ ದೌತ್ಯವನ್ನು ಪೂರ್ಣಗೊಳಿಸಲು ನಂತರದ ಕಾಲ–87 ವರ್ಷ–ಬದುಕಿದರು." ಅಹ್ಮದಿಯಾ ಸಂಘಟನೆಯುವರ ವೀಕ್ಷಣ ಪ್ರಕಾರ ಅವರು ಪರ್ಶಿಯಾ, ಅಫ್‌ಘಾನಿಸ್ತಾನ್, ಕಾಶ್ಮೀರ್ ಮೊದಲಾದ ಕಡೆಗಳಲ್ಲಿ ಅವರನ್ನು (ಕಾಣೆಯಾದ ಗೋತ್ರವನ್ನು) ಪತ್ತೆಹಚ್ಚಿದರು. ಮಾತ್ರವಲ್ಲ, ಪೆಲಸ್ತೀನಕ್ಕಿಂತಲೂ ಇಲ್ಲೆಲ್ಲಾ ಅವರು ಹೆಚ್ಚು ವಿಜಯ ಗಳಿಸಿದರು. ಯೇಸು ಸಂಚರಿಸಿದ ಮಾರ್ಗಗಳನ್ನು ಸಹ ಗುರುತಿಸಬಹುದೆಂದು ಅಹ್ಮದಿಯಾ ಸಂಘಟನೆ ಹೇಳುತ್ತದೆ. ಯೇಸುವಿನ ಸಮಾಧಿ ಕಾಶ್ಮೀರದ ಶ್ರೀನಗರದಲ್ಲಿದೆಯೆಂದು ಅವರು ಸೂಚಿಸುತ್ತಾರೆ. ಕಾಶ್ಮೀರದ ಜನರಿಗಾಗಿ ನಿಯೋಗಿಸಲ್ಪಟ್ಟ ಪ್ರವಾದಿ 'ಯೂಸ್ ಆಸಾಫ್' ಯೇಸುವೆಂದು ಅವರು ಹೇಳುತ್ತಾರೆ. ಶ್ರೀನಗ

# ಹಜ್ ಕರ್ಮಾನುಷ್ಠಾನ

● ಎ. ಅಬ್ದುಲ್ ಹಕ್

ಇಸ್ಲಾಮಿಕ ಪಂಚಾಂಗದ ಹನ್ನೆರಡನೆಯ ತಿಂಗಳಾದ ದುಲ್‌ಹಜ್‌ನಲ್ಲಿ ಇಸ್ಲಾಂ ನಿರ್ದೇಶಿಸಿದ ಮೂಲ ಆರಾಧನಾ ಕರ್ಮಗಳಲ್ಲಿ ನಾಲ್ಕನೆಯದಾದ ಹಜ್‌ಕರ್ಮ ಅನುಷ್ಠಿಸಲಾಗುತ್ತದೆ. ಇದು ಜೀವಮಾನದಲ್ಲಿ ಒಮ್ಮೆ, ಪರಿಸ್ಥಿತಿಗಳು ಅನುಕೂಲಕರವಾಗಿದ್ದರೆ, ಪ್ರತಿಯೋರ್ವ ಮುಸ್ಲಿಂ ಕೈಗೊಳ್ಳಬೇಕಾದ ತೀರ್ಥಯಾತ್ರೆಯಾಗಿದೆ. ಹಜ್ ಕರ್ಮಾನುಷ್ಠಾನಿ ತನ್ನ ಪರಿವಾರವನ್ನೂ ಪರಿಸರವನ್ನೂ ಒಂದು ಕ್ಲಪ್ತಕಾಲದ ವರೆಗೆ ಪರಿತ್ಯಜಿಸಿ ಮಕ್ಕಾದ ಕ್ಲೇಶಪೂರ್ಣ ಯಾತ್ರೆಗೆ ಹೊರಡುತ್ತಾನೆ. ಈ ಅನುಷ್ಠಾನ ಮೂಲಕ ಆತನು ದೇವನ ಪ್ರೀತಿಗಾಗಿ ತನ್ನ ಬಂಧುಮಿತ್ರಾದಿಗಳನ್ನೂ ಸ್ವಗೃಹವನ್ನೂ ಮಾತ್ರವಲ್ಲ ಸರ್ವಸ್ವವನ್ನೂ ತ್ಯಜಿಸಲಿಕ್ಕೆ ಸನ್ನದ್ಧನೆಂದು ವ್ಯಕ್ತಪಡಿಸುತ್ತಾನೆ. ಈ ಕರ್ಮಸಮುಚ್ಚಯ ದೈವಾಭೀಷ್ಟ ಬಹಿರಂಗಗೊಂಡ ಸ್ಥಳಗಳ ಬಗ್ಗೆ ಪ್ರದರ್ಶಿಸಲ್ಪಡುವ ಗೌರವಾದರಗಳ ಒಂದು ಚಿತ್ರಣವೂ ದಿವ್ಯ ಪ್ರಕಟನೆಗಳಿಗೆ ಸಂಬಂಧಿಸಿದ ವಿಚಾರಗಳನ್ನು ಸ್ಮೃತಿಪಟಲದಲ್ಲಿ ತರುವಂಥ ಸ್ಮಾರಕವೂ ಆಗಿದೆ.

ಬೇರೆ ಮಾತಿನಲ್ಲಿ ಹೇಳುವುದಾದರೆ, ಹಝ್ರತ್ ಇಬ್ರಾಹಿಂ ಪ್ರವಾದಿಯವರು ತನ್ನ ಪ್ರೀತಿಯ ಪತ್ನಿ ಹಾಜಿರ ಮತ್ತು ಪ್ರಿಯ ಪುತ್ರ ಇಸ್ಮಾಯಿಲ್ ಇವರೀರ್ವರನ್ನು ಇಂದು ಮಕ್ಕಾನಗರವಿರುವ ಅಂದಿನ ಮರಳುಗಾಡಾಗಿದ್ದ ಆ ಪ್ರದೇಶದಲ್ಲಿ ದೈವೇಚ್ಛೆಗನುಸಾರವಾಗಿ ತ್ಯಜಿಸಿಹೋದುದನ್ನೂ, ದೈವಮಾರ್ಗದಲ್ಲಿ ತ್ಯಾಗ ಮಾಡುವವರಿಗೆ ದೈವಕಾರುಣ್ಯ ಮತ್ತು ರಕ್ಷಣೆ ಲಭಿಸುವುದೆಂದು ತೋರಿಸಿ ಅವರು ದೇವನ ಅನುಗ್ರಹಗಳಿಗೂ ವರಪ್ರಸಾದಗಳಿಗೂ ಪಾತ್ರರಾಗಿರುವುದನ್ನೂ ನೆನಪಿಸಿಕೊಡುವ ವಿಶಿಷ್ಟ ಅನುಷ್ಠಾನವಾಗಿದೆ ಹಜ್‌ಕರ್ಮ.

ಹಝ್ರತ್ ಇಬ್ರಾಹಿಂ ಪ್ರವಾದಿ ತನಗೆ ವೃದ್ಧಾಪ್ಯಕಾಲದಲ್ಲಿ ಹುಟ್ಟಿದ ಅಕ್ಕರೆಯ ಸುತನನ್ನು ಆ ಮರಳುಗಾಡಿನಲ್ಲಿ ಉಪೇಕ್ಷಿಸಿದ್ದೇ ಆಗಿದೆ ಅವರ ಪುತ್ರ ಬಲಿ. ಹಝ್ರತ್ ಹಾಜಿರ ಮತ್ತು ಪುತ್ರ ಇಸ್ಮಾಯಿಲ್ ದೈವಾಭೀಷ್ಟಕ್ಕೆ ವಿಧೇಯರಾಗಿದ್ದುಕೊಂಡು ಜೀವಿತದ ಹಲವು ಕಷ್ಟಕಾರ್ಪಣ್ಯಗಳನ್ನೂ ವಿಘ್ನಗಳನ್ನೂ ಎದುರಿಸಿ ದೈವ ವಿಶ್ವಾಸವನ್ನೂ ಭಕ್ತಿಯನ್ನೂ ಬೆಳಸಿ ಜೀವನ ಸಾಗಿಸಿದುದರಿಂದ ಅವರು ಆ ಸರ್ವಾಧಿನಾಥನ ಅಪಾರವಾದ ಅನುಗ್ರಹಗಳಿಗೆ ಪಾತ್ರರಾದರು. ಅವರ ವಿಷಮ ಪರಿಸ್ಥಿತಿಗಳನ್ನೂ ತ್ಯಾಗಗಳನ್ನೂ ಹಜ್‌ಕರ್ಮಾನುಷ್ಠಾನಿ ನೆನಪಿಸಿಕೊಂಡು ದೈವಮಾರ್ಗದಲ್ಲಿ ತನ್ನ ತ್ಯಾಗಸನ್ನದ್ಧತೆಯನ್ನು

---

ರದ 'ಶವಕುಟೀರ'ವನ್ನು ಪ್ರಾಚ್ಯ ವಸ್ತು ಸಂಶೋಧಕರು ಅಂಗೀಕರಿಸಿರುವರೆಂದೂ ಆದರ ಮುಸ್ಲಿಂ ನಿಯಮಗಳಿಗೆ ವಿರುದ್ಧವಾದುದರಿಂದ ಈ ಗೋರಿಯನ್ನು ತೆರೆಯಲು ಸಾಧ್ಯವಿಲ್ಲವೆಂದೂ ಅವರು ಹೇಳುತ್ತಾರೆ.* ಒಂದು ಸಂಗತಿಯನ್ನು ಒಪ್ಪಲೇಬೇಕು. ಮುಸ್ಲಿಮರ ಪೈಕಿ ಅಹ್ಮದಿಯಾ ಸಂಘಟನೆ ಮಾತ್ರವೇ "ಪವಿತ್ರ ಬಟ್ಟೆ"ಯ ಕುರಿತು ಆಸಕ್ತಿ ತೋರಿಸುತ್ತದೆ. ಆದರೆ, ಎಲ್ಲಾ ಮುಸ್ಲಿಮರೂ ಯೇಸು ಶಿಲುಬೆಯ ಮೇಲೆ ಗತಿಸಲಿಲ್ಲವೆಂದು ನಂಬುವಾಗ ಅವರು ಸಹ ಈ ದಾರಿಯಲ್ಲಿ ಚಿಂತನ ಮಾಡಲು ತೊಡಗುವರೆಂದು ಭಾವಿಸುವವರಿದ್ದಾರೆ. ●

---

*ಈ ಶವಕುಟೀರವನ್ನು ತೆರೆದು ನೋಡಲಿಕ್ಕೆ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಅಗತ್ಯಪಡಿಸಿದ್ದಾರೆ. ಹಾಗೆ ಮಾಡಿದರೆ ಅದು ಯೇಸುಕ್ರಿಸ್ತರ ಮೃತದೇಹವನ್ನು ದಫನ ಮಾಡಿದ ಗೋರಿಯೆಂಬುದಕ್ಕೆ ಪುರಾವೆಗಳು ಸಿಗುವುವೆಂದು ಅವರು ವಾದಿಸಿದರು. ಹಾಗಿರುವಾಗ ಗ್ರಂಥಕರ್ತನ ಈ ಅಭಿಪ್ರಾಯ ಸರಿಯಲ್ಲ. —ಲೇಖಕ.

ಬಹಿರಂಗಪಡಿಸಿ ಯಾವುದೇ ವಿಷಮಾವಸ್ಥೆಯಲ್ಲೂ ಮುನ್ನಡೆಯುವೆನೆಂದು ತೋರ್ಪಡಿಸುವನು. ಈ ರೀತಿಯ ಭಕ್ತಿಯಿಂದಲೂ ಅಧ್ಯಾತ್ಮಚಿಂತನಗಳಿಂದಲೂ ಮಾಡುವ ಈ ಕರ್ಮ ಅದನ್ನು ಅನುಷ್ಠಿಸುವವನಲ್ಲಿ ವಿನಯ, ಅನುಸರಣೆ ಇತ್ಯಾದಿ ಸದ್ಗುಣಗಳನ್ನು ಬೆಳೆಸುತ್ತದೆ ಹಾಗೂ ದೈವಪ್ರೀತಿಯನ್ನು ಗಳಿಸುವ ಸತ್ಪಥದಲ್ಲಿ ಆತನನ್ನು ಮುನ್ನಡೆಸುತ್ತದೆ.

ಇಷ್ಟು ಮಾತ್ರವಲ್ಲ, ಆರಂಭದಿಂದಲೇ ದೈವೋಪಾಸನೆಗಾಗಿ ಪ್ರತಿಷ್ಠಾನಗೊಂಡ ಮಕ್ಕಾದ ಆ ಪವಿತ್ರ 'ಕಅಬಾ' ಮಂದಿರದ ಪವಿತ್ರ ಸಾಮೀಪ್ಯವನ್ನು ಪಡೆಯುವ ಹಜ್ ಕರ್ಮಾನುಷ್ಠಾನಿ ಅನೇಕ ಶತಕಗಳ ಮೊದಲು ದೈವಾನುರಾಗದಲ್ಲೂ ದೈವಸ್ಮರಣೆಯಲ್ಲೂ ಅನುಬದ್ಧರಾಗಿದ್ದ ಆ ಮಹಾತ್ಮರ ಆಧ್ಯಾತಿಕ ಸ್ಥಿತಿಯನ್ನು ಅನುಭವಿಸುವಂತಾಗಿ, ಆತನು ತನ್ನಷ್ಟಕ್ಕೆ ಆ ಸತ್ಸಂಘದ ಒಂದು ಅಂಗವಾಗಿ ಮಾರ್ಪಾಟು ಹೊಂದುವ ರೀತಿಯಲ್ಲಿ ಒಂದು ಆಧ್ಯಾತ್ಮಿಕ ಪರಿವರ್ತನೆಗೆ ಗುರಿಯಾಗುತ್ತಾನೆ. ಈ ಸದ್ಭಾವನೆ ಆತನ ಮನಸ್ಸು ಪವಿತ್ರಗೊಳ್ಳಲಿಕ್ಕೂ ದೇವನ ಬಗ್ಗೆ ಆತನ ಭಕ್ತಿ ಅನುರಾಗಗಳು ತೀವ್ರಗೊಳ್ಳಲಿಕ್ಕೂ ಕಾರಣವಾಗುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ, ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಮುಸ್ತಫಾ (ಸ.) ಹುಟ್ಟಿ ಬೆಳೆದ, ತನ್ನ ದೌತ್ಯದ ಮೊತ್ತ ಮೊದಲಿನ ಕಾರ್ಯಕ್ಷೇತ್ರವಾದ, ತನ್ನ ಅನುಚರರನ್ನು ತ್ಯಾಗ ಮೂರ್ತಿಗಳಾಗಿ ಪರಿವರ್ತಿಸಿದ ಆ ಪುಣ್ಯ ಮಕ್ಕಾ ನಗರ ಈ ಹಜ್ ಕರ್ಮದ ಕೇಂದ್ರವಾಗಿರುವುದರಿಂದ, ಅದರ ಸಂದರ್ಶನದಿಂದ ತೀರ್ಥಕನ ಹೃದಯ ಪಟಲದಲ್ಲಿ ಆ ಪೈಗಂಬರರ ಪವಿತ್ರ ಜೀವಿತದ ಕಷ್ಟಾನುಭವ ಹಾಗೂ ಪರಿತ್ಯಾಗಗಳ ಚಿತ್ರ ಮೂಡುತ್ತದೆ. ತನ್ಮೂಲಕ ಆತನು ರೋಮಾಂಚನಗೊಳ್ಳುತ್ತಾನೆ.

ಹಜ್‌ಕರ್ಮವನ್ನು ಶ್ರದ್ಧೆಯಿಂದ ಅನುಷ್ಠಿಸುವವರಿಗೆ ಈ ರೀತಿಯ ಪರಿವರ್ತನೆಗಳೂ ಅನುಭವಗಳೂ ಉಂಟಾಗುವುದೆಂದು ಹೇಳಬೇಕಾಗಿಲ್ಲವಷ್ಟೆ. ಹಜ್ ಕರ್ಮದ ಪ್ರಯೋಜನಗಳು ಇಂದು ಅದನ್ನು ಅನುಷ್ಠಿಸುವವರಲ್ಲಿ ಸಾಮಾನ್ಯವಾಗಿ ಪ್ರತಿಬಿಂಬಿಸಿ ಕಾಣುವುದಿಲ್ಲವೆಂದು ವ್ಯಸನಸಹಿತ ಹೇಳಬೇಕಾಗಿದೆ. ಈ ನ್ಯೂನತೆಯ ಕಾರಣ ಮತ್ತು ಅದಕ್ಕೆ ಪರಿಹಾರ ಮಾರ್ಗವನ್ನು ಈ ಕಾಲದಲ್ಲಿ ದೈವನಿಯುಕ್ತರಾದ ಮುಜದ್ದಿದ್ (ಮತ ಸುಧಾರಕ) ಮತ್ತು ಮಹ್‌ದೀ ಮಸೀಹ್ ಆಗಿರುವ ಹಝ್ರತ್ ಅಹ್ಮದ್‌ರವರು ಸೂಚಿಸಿರುವುದು ಈ ಸಂದರ್ಭದಲ್ಲಿ ಪ್ರಸ್ತಾಪಾರ್ಹವಾಗಿದೆ. ಆ ಮಹಾಪುರುಷರು ಹೀಗೆ ಹೇಳಿರುವರು :

"ಇಸ್ಲಾಂ ನಿರ್ದೇಶಿಸುವ ಆರಾಧನಾ ಕರ್ಮಗಳಲ್ಲೊಂದು ಹಜ್ ಅಥವಾ ಮಕ್ಕಾ ತೀರ್ಥಯಾತ್ರೆಯಾಗಿದೆ. ನ್ಯಾಯವೋ ಅನ್ಯಾಯವೋ ಆದ ಯಾವುದಾದರೂ ರೀತಿಯಲ್ಲಿ ಸಂಪಾದಿಸಿದ ಹಣವನ್ನು ಖರ್ಚು ಮಾಡಿ ಸಮುದ್ರ ದಾಟಿಹೋಗಿ ಆ ಪುಣ್ಯಕ್ಷೇತ್ರವನ್ನು ಸಂದರ್ಶಿಸಿ ಕೇವಲ ಆಚಾರಕ್ಕಾಗಿ ಕೆಲವು ಕ್ರಿಯೆಗಳನ್ನು ನಿರ್ವಹಿಸಿ ಹಿಂತಿರುಗಿ ಬರುವುದಾದರೆ ಹಜ್ ಕರ್ಮ ಪೂರ್ಣವಾಗಲಾರದು. ಇಂತಹ ಬಾಹ್ಯಾಚರಣೆಯಲ್ಲಿ ಮಾತ್ರ ಅಭಿಮಾನಿಸುವುದರಿಂದ ದೇವನು ಈ ಪುಣ್ಯಕರ್ಮವನ್ನು ವಿಧಿಸಿದುದರ ಉದ್ದೇಶ ಪೂರೈಸಲಿಕ್ಕಿಲ್ಲ. ಯಥಾರ್ಥದಲ್ಲಿ ಈ ಕರ್ಮವು ಮೋಕ್ಷಮಾರ್ಗದಲ್ಲಿರುವ ಅಂತಿಮವಾದ ಒಂದು ಯಾತ್ರಾಘಟ್ಟವನ್ನು ಸೂಚಿಸುತ್ತದೆ. ಆಧ್ಯಾತ್ಮಿಕ ಮಾರ್ಗದ ಪಥಿಕನಾದ ಮುಮುಕ್ಷು ಕೀಳುಮಟ್ಟದ ಲೌಕಿಕ ಬಂಧನಗಳನ್ನೆಲ್ಲಾ ತೊರೆದು ದೈವಾನುರಾಗದಲ್ಲಿ ಲೀನನಾಗುತ್ತಾನೆ. ನಿಜವಾದ ದೈವಪ್ರೇಮಿ ತನ್ನ ದಿವ್ಯವಾದ ಆ ಪ್ರೀತಿಯಲ್ಲಿ ಮುಳುಗಿ, ಆ ಪ್ರೇಮಪಾತ್ರಕ್ಕಾಗಿ ತನ್ನ ಹೃದಯವನ್ನೂ ಆತ್ಮವನ್ನೂ ಬಲಿಯರ್ಪಿಸುತ್ತಾನೆ. "ಕಅಬಾ" ದೈವ ಮಂದಿರಕ್ಕೆ ಮಾಡುವ ಪ್ರದಕ್ಷಿಣೆಯು ಈ ಆತ್ಮತ್ಯಾಗದ ಒಂದು ಬಾಹ್ಯಚಿಹ್ನೆಯಾಗಿದೆ. ಭೂಮಿಯಲ್ಲಿರುವ ಈ ದೇವಮಂದಿರ (ಬೈತುಲ್ಲಾಹ್)ದಂತೆಯೇ ಸ್ವರ್ಗದಲ್ಲೂ ಒಂದು ದೇವಮಂದಿರವಿದೆ. ಆ ಸ್ವರ್ಗೀಯ ದೈವಾಲಯಕ್ಕೆ ಒಬ್ಬನು ಪ್ರದಕ್ಷಿಣೆ ಮಾಡದ ಕಾಲದ ವರೆಗೆ ಭೂಮಿಯಲ್ಲಿರುವ ಈ ದೈವಾಲಯಕ್ಕೆ ಅವನು ಬರುವ ಪ್ರದಕ್ಷಿಣೆಯು ಯಥಾರ್ಥ ಕರ್ಮವಾಗದು. "ಕಅಬಾ" ಪ್ರದಕ್ಷಿಣೆ ಮಾಡುವ ಭಕ್ತನು ತನ್ನ ಸಾಮಾನ್ಯ ವಸ್ತ್ರಗಳನ್ನು ತೆಗೆದಿಟ್ಟು ಒಂಟಿ ವಸ್ತ್ರವನ್ನು ಧರಿಸುತ್ತಾನೆ. ಆದರೆ ಸ್ವರ್ಗದಲ್ಲಿರುವ ದೈವಾಲಯವನ್ನು ಪ್ರದಕ್ಷಿಣೆ ಮಾಡುವ ದೈವಪ್ರೇಮಿ ತನ್ನ ಬಾಹ್ಯಾಲಂಕಾರಗಳನ್ನು ದೈವನಾಮದಲ್ಲಿ ಪರಿತ್ಯಜಿಸುವುದರೊಂದಿಗೆ ತನ್ನ ಹೃದಯ

# ಕಪಟವಾದಿ ಬೇಗನೇ ನಾಶಹೊಂದುವನು*

● ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಓ ನನ್ನ ಜನರೇ, ಅಲ್ಲಾಹನು ನಿಮ್ಮಲ್ಲಿ ಕರುಣೆ ತೋರಲಿ! ಅಲ್ಲಾಹನು ನಿಮ್ಮ ಕಣ್ಣುಗಳನ್ನು ತೆರೆದು ಕೊಡಲಿ! ನಾನು ಕಪಟವಾದಿಯಲ್ಲವೆಂಬುದನ್ನು ನೀವು ತಿಳಿಯಿರಿ. ಕಳ್ಳವಾದಿಯು ಬೇಗನೇ ನಾಶಹೊಂದುವನೆಂದು ದೈವಗ್ರಂಥಗಳೆಲ್ಲವೂ ಸಾಕ್ಷಿ ಹೇಳುತ್ತವೆ. ಸತ್ಯವಾದಿಗೆ ಲಭಿಸುವಷ್ಟು ಆಯುಷ್ಯ ಕಳ್ಳವಾದಿಗೆ ಯಾವತ್ತೂ ಲಭಿಸಲಾರದು. ಪ್ರವಾದಿಶ್ರೇಷ್ಠರಾದ ನಮ್ಮ ನಬಿವರ್ಯರು (ಸ) ಎಲ್ಲಾ ಸತ್ಯವಾದಿಗಳಿಗೂ ಚಕ್ರವರ್ತಿಯಾಗಿರುವರಲ್ಲವೇ. ಆ ದಿವ್ಯಾತ್ಮರಿಗೆ 23 ವರ್ಷಗಳ ಕಾಲ ದಿವ್ಯಸಂದೇಶಗಳು ಲಭಿಸುತ್ತಿದ್ದವು. ಈ ಆಯುಷ್ಕಾಲವು ಅಂತ್ಯದಿವಸದ ವರೆಗೂ ದೈವನಿಯೋಗವಾದಿಗಳ ಸತ್ಯತೆಯನ್ನು ಅಳೆಯುವ ಮಾನದಂಡವಾಗಿರುವುದು. ಈ ಪಾವನವಾದ ಕಾಲಾವಧಿಯಲ್ಲಿ ಯಾವನಾದರೂ ಕಪಟವಾದಿಗ ಸಹಭಾಗಿತ್ವವಿದೆಯೆಂದು ಯಾರು ನಂಬುವರೋ, ಅಂಥವರ ಮೇಲೆ ಅಲ್ಲಾಹನ ಮತ್ತು ಅಲ್ಲಾಹನ ದೂತರ ಹಾಗೂ ಸತ್ಯದಾಸರ ಸಹಸ್ರ ಶಾಪಗಳು ಸುರಿಯುವುವು! ಪವಿತ್ರ ಖುರ್‌ಆನಿನಲ್ಲಿ "ಲವ್ ತಖವ್ವಲ" ಎಂಬ ವಚನ ಅವತೀರ್ಣವಾಗಿಲ್ಲದೆ ಇರುತ್ತಿದ್ದರೂ ಸತ್ಯವಾದಿಗಳಿಗೆ ದಿವ್ಯ ಸಂದೇಶಗಳು ಲಭಿಸುತ್ತಿದ್ದಷ್ಟು ಆಯುಷ್ಕಾಲವು ಕಳ್ಳವಾದಿಗಳಿಗೆ ಲಭಿಸಲಾರದೆಂದು ಪ್ರವಾದಿಗಳು ಹೇಳಿರದೆ ಇರುತ್ತಿದ್ದರೂ ಸಹ ನಬಿವರ್ಯರ ದೌತ್ಯದ ಕಾಲವಾದ 23 ವರ್ಷಗಳಷ್ಟು ಆಯುಷ್ಯವು ಒಬ್ಬ ಕಪಟವಾದಿಗೆ ಲಭಿಸುವುದೆಂಬ ದಾಷ್ಟ್ರ್ಯದ ಮಾತುಗಳನ್ನಾಡಲು ಒಬ್ಬ ಯಥಾರ್ಥ ಮುಸ್ಲಿಮನಿಗೆ ತನ್ನ ಪ್ರಿಯ ಪೈಗಂಬರರೊಡನೆ ಇರುವ ಪ್ರೇಮವು ಖಂಡಿತವಾಗಿಯೂ ಎಡೆಗೊಡಲಾರದು. ಪ್ರವಾದಿವರ್ಯರು (ಸ) ಒಬ್ಬ ಕಳ್ಳವಾದಿಯಾಗಿರುತ್ತಿದ್ದರೆ ಅವರಿಗೆ ಅಷ್ಟು ದೀರ್ಘಕಾಲದ ವರೆಗೆ ಜೀವಿಸಿರಲು ಸಾಧ್ಯವಿಲ್ಲವೆಂದು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದ್ದು, "ತೌರಾತ್" ಸಹ ಇದನ್ನೇ ಸತ್ಯಪಡಿಸುತ್ತಲೂ "ಇಂಜೀಲ್"ನಲ್ಲಿ ಕೂಡಾ ಇದೇ ರೀತಿ ಪ್ರಸ್ತಾವನೆಗಳಿರುವುದಾಗಿ ಕಂಡುಬರುತ್ತಲೂ ಇರುವಾಗ ಈ ಎಲ್ಲಾ ಸತ್ಯಪ್ರಮಾಣಗಳನ್ನೂ ನನ್ನೊಡನಿರುವ ವೈರತ್ವದ ಕಾರಣದಿಂದ ನಿಸ್ಸಾರವಾಗಿ ತಳ್ಳಿಬಿಟ್ಟು ದೇವನ ಪವಿತ್ರ ವಚನಗಳನ್ನೇ ಅಗಣ್ಯವೆಂಬಂತೆ ನಿರಾಕರಿಸುತ್ತಿರುವ ನಿಮ್ಮ ಇಸ್ಲಾಂ ಎಂತಹ ಇಸ್ಲಾಂ ಆಗಿದೆ! ನೀವು ಯಾವ ತರದ ಮುಸ್ಲಿಮರಾಗಿದ್ದೀರಿ! ಪ್ರತಿಯೊಂದು ದೃಷ್ಟಾಂತಗಳನ್ನು ಮುಂದಿಡುತ್ತಾಗಲೂ ಅವುಗಳಿಂದ ಪ್ರಯೋಜನ ಪಡೆಯಲು ಪ್ರಯತ್ನಿಸುವುದರ ಬದಲು, ನೂರಾರು ಸಲ ಉತ್ತರ ನೀಡಲಾದ ಆಕ್ಷೇಪಗಳನ್ನೇ ಎತ್ತಿ ಹಿಡಿಯುತ್ತಿರುವ ನಿಮ್ಮ 'ಈಮಾನ್' (ವಿಶ್ವಾಸ) ಎಂತಹ ಈಮಾನ್ ಎಂಬುದು ನನಗೆ ಅರ್ಥವಾಗುವುದಿಲ್ಲ. ನೀವು ಹೊರಡಿಸುತ್ತಿರುವ ಆಕ್ಷೇಪಗಳು ನನ್ನನ್ನು ಮಾತ್ರ

*ಕನ್ನಡಿಸಿದವರು : ಇಬ್ನು ಅಬ್ದುಲ್ಲ.

ಮಾಲಿನ್ಯಗಳನ್ನೆಲ್ಲಾ ಸ್ವಚ್ಛಗೊಳಿಸಿ ಪಾವನಹೃದಯಿಯಾಗಿ ದೇವಸನ್ನಿಧಿಯಲ್ಲಿ ಹಾಜರಾಗುತ್ತಾನೆ. ಹೀಗೆ ದೇವಭಕ್ತನು ತನ್ನ ಪ್ರೇಮಾತಿರೇಕವನ್ನು ಈ ಪ್ರದಕ್ಷಿಣ ಕರ್ಮ ಮೂಲಕ ಬಹಿರಂಗಪಡಿಸುತ್ತಾನೆ. ಅಂದರೆ ತನ್ನ ಸ್ವೇಚ್ಛೆಗಳೂ ಅಭಿರುಚಿಗಳೂ ತನ್ನಲ್ಲಿ ಬಾಕಿಯುಳಿಯದಂತೆ ಒಂದು ಪ್ರೇಮಾಗ್ನಿಯನ್ನು ತನ್ನಲ್ಲಿ ಉಂಟುಮಾಡುತ್ತಾನೆಂದು ಭಕ್ತನು ಈ ಬಾಹ್ಯಕರ್ಮದ ಮೂಲಕ ಪ್ರಕಟಪಡಿಸುತ್ತಾನೆ. ಒಟ್ಟಾರೆ, ದೈವಾನುರಾಗಿಯಾದ ಭಕ್ತನು ತನ್ನ ಆ ಪ್ರೇಮಕೇಂದ್ರಕ್ಕೆ ಸುತ್ತುಬರುತ್ತಲೇ ಇರುತ್ತಾನೆ. ಹಜ್‌ಕರ್ಮದ ನಿಜಾರ್ಥ ಇದೇ ಆಗಿದೆ. ಆದ್ದರಿಂದ ಶಾರೀರಿಕವಾದ ಈ ಕರ್ಮದೊಂದಿಗೆ ಆಧ್ಯಾತ್ಮಿಕವಾದ ಆ ಪುಣ್ಯಕರ್ಮವನ್ನು ಸಹ ನಿರ್ವಹಿಸದಿದ್ದರೆ ಆತನ ಬಾಹ್ಯಾಚಾರಗಳೆಲ್ಲಾ ಅರ್ಥಶೂನ್ಯವಾಗುವುವು."(ಇಸ್ಲಾಮಿನ ಐದು ಕರ್ಮಾನುಷ್ಠಾನಗಳು, ಪುಟ 16–18) ●

ಬಾಧಿಸುವಂಥದ್ದಲ್ಲ. ಇವರ ಬಾಯಿಯಿಂದ ಹೊರಡುವ ಇಂಥ ಮಾತುಗಳೇ ಆಕ್ಷೇಪಗಳೆಂದಾಗಿದ್ದಲ್ಲಿ ಎಲ್ಲ ಪ್ರವಾದಿಗಳಿಗೂ ಅವು ಬಾಧಕವಾಗಿರುತ್ತವೆ. ನನ್ನ ಕುರಿತು ಹೇಳಲ್ಪಡುತ್ತಿರುವ ಎಲ್ಲವೂ ಪೂರ್ವಕಾಲಗಳಲ್ಲಿ ಸಹ ಹೇಳಲ್ಪಟ್ಟಿದ್ದವು. ಈ ಏರ್ಪಾಡು ದೈವಿಕವಲ್ಲದೆ ಇರುತ್ತಿದ್ದರೆ ಭವಿಷ್ಯ ನುಡಿಗಳ ಪ್ರಕಾರ ಶತಮಾನದ ಆದಿಯಲ್ಲೇ ಯಾಕಾಗಿ ಇದಕ್ಕೆ ತಳಪಾಯ ಹಾಕಲಾಯಿತೆಂದು ಅಯ್ಯೋ ಈ ಜನರು ಆಲೋಚಿಸುವುದಿಲ್ಲ. ನಾನು ಕಳ್ಳವಾದಿಯಾಗಿದ್ದಲ್ಲಿ ಸತ್ಯವಂತ ಇಮಾಂ ಮಹದಿ ಯಾರೆಂಬುದನ್ನು ತೋರಿಸಿಕೊಡಲು ಯಾರಿಂದಲೂ ಸಾಧ್ಯವಾಗಲಿಲ್ಲವಲ್ಲ! ವಾಗ್ದತ್ತ ಮಹದಿಯ ಆಗಮನ ವುಂಟಾಗಿಲ್ಲವೆಂದಾಗಿದ್ದರೆ, ಆಕಾಶದಲ್ಲಿ - ಸೂರ್ಯ ಚಂದ್ರ ಗ್ರಹಣಗಳ ಅದ್ಭುತ ದೃಷ್ಟಾಂತ ತೋರಿಸಲ್ಪಟ್ಟಿರುವುದು ಯಾರಿಗಾಗಿ ಎಂದು ಹಾ! ಈ ಜನರು ಯೋಚಿಸುವುದಿಲ್ಲ! ಅಕಟಾ, ಈ ದಿವ್ಯನಾದದ ಉದ್ಭವವು ನಿಶ್ಚಿತ ಸಮಯದಲ್ಲೇ ಉಂಟಾಗಿದೆಯೆಂದು ಸಹ ಇವರು ತಿಳಿಯುವುದಿಲ್ಲ. ಇಸ್ಲಾಂ ಧರ್ಮವು ಅದರ ಎರಡು ಬಾಹುಗಳನ್ನೂ ಚಾಚಿ "ನಾನು ದ್ರೋಹಿಸಲ್ಪಟ್ಟಿರುವೆನು, ದೈವಿಕ ಸಹಾಯವು ನನಗೆ ಬರಬೇಕಾದ ಕಾಲವಾಯಿತು" ಎಂದು ಮೊರೆಯಿಡುತ್ತಿತ್ತು. 14ನೇ ಶತಮಾನದಲ್ಲಿ ಖಂಡಿತವಾಗಿಯೂ ದೈವಿಕ ಸಹಾಯಗಳ ಆಗಮನವಾಗುವುದೆಂದು 13ನೇ ಶತಕದಲ್ಲೇ ಜನರು ಆಶೆಯಿಂದ ಪ್ರತೀಕ್ಷಿಸುತ್ತಿದ್ದರು. ಈ ಶತಮಾನವನ್ನು ಕಾದು ಕಾದು, ಅತ್ತು ಅತ್ತು ಅದೆಷ್ಟೋ ಜನರು ಈ ಲೋಕವನ್ನು ತ್ಯಜಿಸಿದರು. ಆದರೆ, ಅಲ್ಲಾಹನ ಕಡೆಯಿಂದ ಒಬ್ಬ ವ್ಯಕ್ತಿಯ ನಿಯೋಗವುಂಟಾದಾಗ, ಅವರು ಈ ಕಾಲದ ಮೌಲವಿಗಳ ಎಲ್ಲಾ ಮಾತುಗಳನ್ನೂ ಸರಿಯೆಂದು ಒಪ್ಪದ ಕಾರಣದಿಂದ ಮಾತ್ರ ಜನರು ಆ ವ್ಯಕ್ತಿಯ ಶತ್ರುಗಳಾಗಿಬಿಟ್ಟರು.

ದೇವನಿಂದ ನಿಯುಕ್ತರಾಗುವ ಪ್ರತಿಯೊಬ್ಬ ಪ್ರವಾದಿಯೂ ಒಂದೊಂದು ಪರೀಕ್ಷೆಯೊಂದಿಗೆ ಅವತರಿಸುತ್ತಾರೆ. ಹಝ್ರತ್ ಈಸಾ(ಅ)ರವರ ಆಗಮನವಾದಾಗ ನಿರ್ಭಾಗ್ಯರಾದ ಯೆಹೂದ್ಯರು ಒಂದು ಪರೀಕ್ಷೆಗೆ ಗುರಿಯಾದರು. ಎಲೀಯ (ಇಲ್ಯಾಸ್) ಪ್ರವಾದಿ ಆಕಾಶದಿಂದ ಇಳಿದುಬಂದ ನಂತರವೇ ಮಸೀಹಾ ಆಗಮಿಸುವರೆಂದು ಮಲಾಖೀ ಪ್ರವಾದಿಯು ಬರೆದ ಪ್ರಕಾರದಲ್ಲಿ ಎಲೀಯ ಆಕಾಶದಿಂದ ಇಳಿದುಬಂದಿಲ್ಲ ಎಂಬುದೇ ಆ ಪರೀಕ್ಷೆಯಾಗಿತ್ತು. ನಮ್ಮ ನಬಿವರ್ಯರು(ಸ) ನಿಯುಕ್ತರಾದಾಗ ಅವರು ಬನೀ ಇಸ್ರಾಯೀಲ್ ವಂಶದವರಾಗಿಲ್ಲವೆಂಬ ಪರೀಕ್ಷೆಯು ಯಹೂದ್ಯರಿಗೆ ಎದುರಾಯಿತು. ಹಾಗೆಯೇ ವಾಗ್ದತ್ತ ಮಸೀಹಾರ ಕಾಲದಲ್ಲೂ ಏನಾದರೊಂದು ಪರೀಕ್ಷೆಯು ಬೇಕಲ್ಲವೇ? ವಾಗ್ದತ್ತ ಮಸೀಹಾ ಬಂದು ಮುಸ್ಲಿಮರಲ್ಲಿ 73 ವಿಭಾಗದವರ ಮಾತುಗಳನ್ನೂ ಸ್ವೀಕರಿಸಬೇಕೆಂದಾದಲ್ಲಿ ಅವರಿಗೆ "ಹಕಂ" (ತರ್ಕ ವಿಷಯಗಳಿಗೆ ತೀರ್ಮಾನ ನೀಡುವವರು) ಎಂಬುದಾಗಿ ನಾಮಕರಣ ಮಾಡಿರುವುದರ ಅರ್ಥವೇನು? ಅವರು ಬರುವುದು ಜನರ ಮಾತುಗಳನ್ನು ಸ್ವೀಕರಿಸಲೆಂದೋ ಅಥವಾ ಜನರು ಅವರ ಮಾತುಗಳನ್ನು ಸ್ವೀಕರಿಸಲೆಂದೋ? ಜನರ ಮಾತನ್ನು ಅವರೇ ಸ್ವೀಕರಿಸಬೇಕೆಂದಾದಲ್ಲಿ ಅವರ ಬರುವಿಕೆಯೇ ನಿಷ್ಪ್ರಯೋಜಕವಾಗುವುದು. ಆದುದರಿಂದ ಓ ನನ್ನ ಜನರೇ, ನೀವು ಹಟಮಾದ ಮಾಡಬೇಡಿರಿ! ಮೊದಲೇ ತಿಳಿದುಕೊಳ್ಳಲು ಸಾಧ್ಯವಾಗದಂತಹ ಸಾವಿರಾರು ಕಾರ್ಯಗಳಿವೆ. ಎಲೀಯ ಪ್ರವಾದಿ ಪುನಃ ಬರುವರೆಂದು ಹೇಳಿದುದರ ಸರಿಯಾದ ಅರ್ಥವನ್ನು ವಿವರಿಸಿಕೊಡಲು ಮಸೀಹಾರಿಗೆ ಮೊದಲು ಆವಿರ್ಭವಿಸಿದ ಯಾರಾದರೂ ಪ್ರವಾದಿಗ ಸಾಧ್ಯವಾಗಿರುತ್ತಿದ್ದರೆ, ಯೆಹೂದ್ಯರು ಹಝ್ರತ್ ಮಸೀಹಾರನ್ನು ಸ್ವೀಕರಿಸಲು ತಯಾರಾಗುತ್ತಿದ್ದರು. ಅದೇ ರೀತಿ ಇಸ್ರಾಯೀಲ್ ಕುಲದಲ್ಲಿ "ಖಾತಮುಲ್ ಅಂಬಿಯಾ" ಜನಿಸುವರೆಂಬ ಯೆಹೂದ್ಯರೆಡೆಯಲ್ಲಿ ಪ್ರಚಲಿತವಾಗಿದ್ದ ನಂಬಿಕೆಯನ್ನು ದೂರೀಕರಿಸಲು ಪೂರ್ವ ಪ್ರವಾದಿಗಳಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ. ಇದೇ ರೀತಿಯಲ್ಲೇ ವಾಗ್ದತ್ತ ಮಸೀಹಾರ ಪ್ರಶ್ನೆಯೂ ಅವ್ಯಕ್ತವಾಗಿಯೇ ಮುಂದುವರಿಯಿತು— ಅಲ್ಲಾಹನ ರೂಢಿ ಪ್ರಕಾರ ಈ ವಿಷಯದಲ್ಲೂ ಒಂದು ಪರೀಕ್ಷೆಯು ಉಂಟಾಗಲೆಂದು! ನನ್ನ ಶತ್ರುಗಳು, ಅವರಿಗೆ ನನ್ನನ್ನು ಸ್ವೀಕರಿಸುವ ಭಾಗ್ಯವು ನೀಡಲ್ಪಟ್ಟಿಲ್ಲವಾದರೆ. ಸ್ವಲ್ಪ ಸಮಯ ಬಾಯಿ ಮುಚ್ಚಿಕೊಂಡು ನನ್ನ ಅಂತ್ಯವನ್ನು ನೋಡುತ್ತಾ ಇರುತ್ತಿದ್ದರೆ ಹಾ! ಅದೆಷ್ಟು ಒಳಿತಾಗಿತ್ತು. ಈಗ ಜನಸಾಮಾನ್ಯರು ನನ್ನನ್ನು ಎಷ್ಟು ನಿಂದಿಸುವರೋ ಆ ಅಪರಾಧಗಳೆಲ್ಲವೂ ಈ ಮೌಲವಿಗಳ ಹೆಗಲ ಮೇಲೆ ಬೀಳುವುವು. ಅಕಟಾ, ಈ ಜನರು ಲಕ್ಷಣ

ವನ್ನು ನೋಡಿಯೂ ಕಾರ್ಯಗಳನ್ನು ಗ್ರಹಿಸಿಕೊಳ್ಳುವುದಿಲ್ಲವಲ್ಲ !

ನನ್ನ ಶತ್ರುಗಳಾಗಿರುವ ಮೌಲವಿಗಳೊಡನೆಯೂ ಅವರ ಸಹಚರರೊಡನೆಯೂ ಅಲ್ಲಾಹನನ್ನು ಸಾಕ್ಷಿಯಾಗಿರಿಸಿಕೊಂಡು ಆತ್ಮಾರ್ಥತೆಯಿಂದ ನಾನು ಹೇಳುತ್ತೇನೆ: ಬೈಯುವುದೂ ಅವಹೇಳಿಸುವುದೂ ಸಭ್ಯತೆಯ ಮಾರ್ಗವಲ್ಲ. ಅದು ನಿಮ್ಮ ಸ್ವಭಾವವೆಂದಾದರೆ ಹಾಗೆಯೇ ಆಗಲಿ; ನಿಮ್ಮ ಇಷ್ಟ. ಅಂತೆಯೇ ನೀವು ನನ್ನನ್ನು ಕಳ್ಳವಾದಿಯೆಂದು ಭಾವಿಸುವುದಿದ್ದರೆ ನೀವು ಇದನ್ನೂ ಮಾಡಿರಿ: ಅಂದರೆ, ನೀವು ಮಸೀದಿಗಳಲ್ಲಿ ಒಟ್ಟಾಗಿಯೋ ಒಬ್ಬೊಬ್ಬರಾಗಿಯೋ ನನ್ನ ನಾಶಕ್ಕಾಗಿ ಬೇಡಿಕೊಳ್ಳಿರಿ. ಕಂಠಬಿರಿಯುವಂತೆ ಬೊಬ್ಬಿಟ್ಟು ಅಳುತ್ತಾ ನನ್ನ ನಿರ್ಮೂಲನಕ್ಕಾಗಿ ಪ್ರಾರ್ಥಿಸಿರಿ. ನಾನು ಕಪಟವಾದಿಯಾಗಿದ್ದರೆ, ನಿಶ್ಚಯವಾಗಿಯೂ ಆ ಪ್ರಾರ್ಥನೆಗಳು ಸ್ವೀಕರಿಸಲ್ಪಡುವುವು. ಆದರೆ, ನೆನಪಿಡಿರಿ, ನಿಮ್ಮ ನಾಲಗೆಯು ಸೀಳಿ ಹೋಗುವಂತೆ ನೀವು ಪ್ರಾರ್ಥಿಸಿದರೂ ನಿಮ್ಮ ನಾಸಿಕವು ಒರೆದು ಸವೆದು ಹೋಗುವಂತೆ ನೀವು "ಸುಜೂದ್" ಮಾಡಿದರೂ, ಅಶ್ರುಧಾರೆಗಳಿಂದ ಕಣ್ಣುಗಳು ಕೊಳೆತು ಹೋಗಿ, ರೆಪ್ಪೆಗಳು ಉದುರಿ, ದೃಷ್ಟಿ ಕಳೆದುಕೊಂಡು ಕೊನೆಗೆ ಬುದ್ಧಿ ಮಂದವಾಗಿಬಿಟ್ಟು ಅಪಸ್ಮಾರವೋ ಬುದ್ಧಿಭ್ರಮೆಯೋ ಉಂಟಾಗುವ ರೀತಿಯಲ್ಲಿ ನೀವು ಕೂಗುತ್ತಾ ಅಳುತ್ತಾ ಪ್ರಾರ್ಥಿಸಿಕೊಂಡರೂ ಸಹ ನಿಮ್ಮ ಆ ಪ್ರಾರ್ಥನೆಗಳು ಸ್ವೀಕರಿಸಲ್ಪಡಲಾರವು. ಯಾಕೆಂದರೆ, ನಾನು ಅಲ್ಲಾಹನಿಂದ ಕಳುಹಿಸಲ್ಪಟ್ಟವನಾಗಿದ್ದೇನೆ. ಯಾರು ನನ್ನ ನಾಶಕ್ಕಾಗಿ ಪ್ರಾರ್ಥಿಸುವರೋ ಆ ಪ್ರಾರ್ಥನೆ ಅವರ ಕಡೆಗೇ ಹಿಂದಿರುಗುವುದು. ನನ್ನ ಕುರಿತು 'ಅವನ ಮೇಲೆ ಶಾಪವಿರಲಿ' ಎಂದು ಯಾರು ಹೇಳುವನೋ ಆ ಶಾಪವು (ಲಅನತ್) ಅವನ ಹೃದಯದ ಮೇಲೆಯೇ ಬೀಳುವುದು.

ನನ್ನ ಆತ್ಮದೊಳಗೆ ಹಝ್ರತ್ ಇಬ್ರಾಹೀಮರಿಗೆ ನೀಡಲ್ಪಟ್ಟ ಸತ್ಯವು ನೆಲೆಗೊಂಡಿದೆ. ನನಗೆ ಅಲ್ಲಾಹನೊಡನೆ ಹಝ್ರತ್ ಇಬ್ರಾಹೀಮರಿಗಿರುವಂಥ ಸಂಬಂಧವಿದೆ. ಯಾರೂ ನನ್ನ ರಹಸ್ಯವನ್ನು ತಿಳಿಯುವುದಿಲ್ಲ— ಅಲ್ಲಾಹನ ಹೊರತು. ಶತ್ರುಗಳು ಅವರನ್ನೇ ನಾಶಪಡಿಸುತ್ತಿದ್ದಾರೆ. ನಾನು ಅವರ ಕೈಯಿಂದ ಕೀಳಲ್ಪಡಬಹುದಾದಂತಹ ಒಂದು ಸಸಿಯಲ್ಲ. ಅವರ ಪೂರ್ವಿಕರೂ ಅವರ ನಂತರದವರೂ ಅವರಲ್ಲಿ ಜೀವಿಸಿರುವವರೂ ಅವರಲ್ಲಿ ಗತಿಸಿ ಹೋದವರೂ ಎಲ್ಲರೂ ಒಟ್ಟು ಸೇರಿ ನನ್ನ ಅಂತ್ಯಕ್ಕಾಗಿ ಪ್ರಾರ್ಥಿಸಿಕೊಂಡರೂ ಅಲ್ಲಾಹನು ಆ ಎಲ್ಲಾ ಪ್ರಾರ್ಥನೆಗಳಿಗೂ ಶಾಪದ ರೂಪವನ್ನು ನೀಡಿ ಅದನ್ನು ಅವರ ಮುಖಕ್ಕೆ ಎಸೆದು ಬಿಡುವನು ..ಏನು? ದೈವಿಕವಾದ ಈ ಕಾರ್ಯಗಳನ್ನು ತಡೆಗಟ್ಟಲು ಮನುಷ್ಯರಿಂದ ಸಾಧ್ಯವೇ ? ಪರವಾಗಿಲ್ಲ! ನಿಮ್ಮಿಂದ ಸಾಧ್ಯವಾದರೆ ತಡೆದುಕೊಳ್ಳಿರಿ. ಪ್ರವಾದಿಗಳ ಶತ್ರುಗಳು ಹೂಡಿದಂತಹ ಸಕಲ ವಿಧ ತಂತ್ರಗಳನ್ನೂ ವಂಚನೆಗಳನ್ನೂ ನೀವು ಸಹ ಕೈಗೊಳ್ಳಿರಿ. ನಿಮ್ಮ ಸಾಮರ್ಥ್ಯಗಳನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳಿರಿ. ಕೊನೆಗೂ ನಿಮ್ಮಿಂದ ಏನು ಹಾನಿಯೊದಗಿಸಲು ಸಾಧ್ಯವಾಯಿತೆಂದು ನೋಡಿಕೊಳ್ಳಿ. ಅಲ್ಲಾಹನ ಸ್ವರ್ಗೀಯ ದೃಷ್ಟಾಂತಗಳು ಮಳೆಹನಿಗಳಂತೆ ಉದುರುತ್ತಿವೆ. ಆದರೆ, ನಿರ್ಭಾಗ್ಯರಾದ ಮನುಷ್ಯರು ದೂರದಲ್ಲಿ ನಿಂತು ಆಕ್ಷೇಪಿಸುತ್ತಿದ್ದಾರೆ. ಮುದ್ರೆಯೊತ್ತಲ್ಪಟ್ಟ ಹೃದಯಗಳಿಗೆ ಚಿಕಿತ್ಸೆಯಾದರೂ ಏನಿದೆ ? ಓ ಅಲ್ಲಾಹ್, ನೀನು ಈ ಸಮುದಾಯದ ಮೇಲೆ ಕೃಪೆ ತೋರುವವನಾಗು !"

(ಅರ್‌ಬಯೀನ್ : ಕ್ರಮಾಂಕ 3-4)


# ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore-575 001.

# ಇಸ್ಲಾಮಿನಲ್ಲಿ ಪ್ರವಾದಿತ್ವ

● ಎಂ. ಪಿ. ಇಬ್ರಾಹಿಂ

### ಪ್ರವಾದಿ ನಿಯೋಗ—ಒಂದು ದೈವಿಕ ಅನುಗ್ರಹ

ಯಥಾರ್ಥ ದೈವವಿಶ್ವಾಸವೂ ಸತ್ಕರ್ಮವೂ ಲೋಕದಿಂದ ಅಂತರ್ಧಾನವಾಗಿ ಜನರಲ್ಲಿ ಮೂಢವಿಶ್ವಾಸಗಳೂ ಅನಾಚಾರಗಳೂ ತುಂಬಿ ಸರ್ವತ್ರ ಅನ್ಯಾಯ ಅಕ್ರಮಗಳು ವ್ಯಾಪಿಸುವಾಗ ದಯಾಮಯನಾದ ದೇವನು ಮನುಷ್ಯರಲ್ಲಿ ಕರುಣೆದೋರಿ ಅವರ ಸುಧಾರಣೆಗಾಗಿ ಅವರೆಡೆಯಿಂದ ಪ್ರವಾದಿಗಳನ್ನು ನಿಯೋಗಿಸುವನೆಂದೂ ಅವರ ಮುಖಾಂತರ ಲೋಕದಲ್ಲಿ ಅಂಧಕಾರ ಮತ್ತು ದುರಾಚಾರಗಳು ನಿರ್ಮೂಲವಾಗಿ ಸತ್ಯಧರ್ಮವು ಪುನಃ ಸ್ಥಾಪಿತವಾಗುವುದೆಂದೂ ಎಲ್ಲಾ ಧರ್ಮಗ್ರಂಥಗಳೂ ಘೋಷಿಸುತ್ತವೆ. ಇಸ್ಲಾಂ ಧರ್ಮಗ್ರಂಥವಾದ ಪವಿತ್ರ ಖುರ್‌ಆನ್ ಈ ವಿವರವನ್ನು ಬಹಳ ಸ್ಪಷ್ಟವಾಗಿ ವಿವರಿಸಿದೆ. ಲೋಕದಲ್ಲಿ ಅಧರ್ಮವು ಅತ್ಯುಗ್ರವಾಗಿ ತಲೆಯೆತ್ತಿ ನಿಲ್ಲುವಾಗ ಜನರನ್ನು ದೈವಿಕ ಪಥದಲ್ಲಿ ನಡೆಸಲು ಪ್ರವಾದಿಗಳ ಆಗಮನವುಂಟಾಗುವುದು ಒಂದು ಅತಿ ದೊಡ್ಡ ಆಧ್ಯಾತ್ಮಿಕ ಅನುಗ್ರಹವಾಗಿದೆ ಎಂದು ಖುರ್‌ಆನ್ ತಿಳಿಸಿಕೊಟ್ಟಿದೆ. ಅಲ್ಲಾಹನ ಅನುಗ್ರಹಗಳ ಪೈಕಿ ಅತ್ಯಂತ ಶ್ರೇಷ್ಠವಾದುದು ಪ್ರವಾದಿತ್ವವೆಂದೂ ಶುಷ್ಕವಾದ ಜನಹೃದಯಗಳಿಗೆ ಚೈತನ್ಯವನ್ನು ನೀಡಲು ಅವನು ಈ ಆತ್ಮಿಕ ಜಲವನ್ನು ನೀಡುತ್ತಲೇ ಇರುವನೆಂದೂ ಈ ಅನುಗ್ರಹವನ್ನು ತಡೆದು ನಿಲ್ಲಿಸಲು ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲವೆಂದೂ ಅಲ್ಲಾಹು ಖುರ್‌ಆನಿನಲ್ಲಿ ನಮಗೆ ತಿಳಿಸಿಕೊಟ್ಟಿದ್ದಾನೆ. "ಪರಮಾತ್ಮನು ತನ್ನ ಪ್ರವಾದಿಗಳನ್ನು ಒಂದು ಅನುಗ್ರಹವಾಗಿ ನಿಮ್ಮೆಡೆಗೆ ಕಳುಹಿಸುವವನಾಗಿದ್ದಾನೆ" (44:7) ಎಂದೂ "ಓ ನನ್ನ ಜನರೇ, ಅಲ್ಲಾಹು ನಿಮಗೆ ನೀಡಿದ ಅತ್ಯಂತ ಮಹತ್ವದ ಅನುಗ್ರಹಗಳನ್ನು ಸ್ಮರಿಸುತ್ತಿರಿ. ಅವನು ನಿಮ್ಮಲ್ಲಿ ಪ್ರವಾದಿಗಳನ್ನು ನಿಯೋಗಿಸಿದನು ಮತ್ತು ರಾಜ್ಯಾಧಿಕಾರಗಳನ್ನೂ ನೀಡಿದನು." (5 : 21) ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಗಿಸಲ್ಪಟ್ಟುದು ಸಮಸ್ತ ಜಗತ್ತಿಗೇ ಅನುಗ್ರಹವಾಗಿದೆ ಎಂದೂ ಖುರ್‌ಆನ್ ತಿಳಿಸಿಕೊಡುತ್ತದೆ. ಪ್ರವಾದಿಗಳ ನಿಯೋಗವು ಅಲ್ಲಾಹನ ಒಂದು ಅತಿ ಮಹತ್ವಾದ ಅನುಗ್ರಹವಾಗಿದೆ ಎಂದು ಇದರಿಂದ ತಿಳಿದುಕೊಳ್ಳಲು ಸಾಧ್ಯವಿದೆ.

### ಎಲ್ಲ ಪ್ರವಾದಿಗಳನ್ನೂ ಆಯಾ ಕಾಲದ ಜನರು ವಿರೋಧಿಸಿದರು

ಆದರೆ, ದುರಾದೃಷ್ಟವಶಾತ್ ಅಧರ್ಮದಿಂದ ಮನುಷ್ಯರನ್ನು ರಕ್ಷಿಸಿ ಸತ್ಯಧರ್ಮವನ್ನು ಪ್ರಬೋಧಿಸಲು ಅಲ್ಲಾಹನ ಕಡೆಯಿಂದ ನಿಯುಕ್ತರಾದ ಸಕಲ ಪ್ರವಾದಿಗಳನ್ನೂ ಆಯಾಕಾಲದ ಜನರು ನಿರಾಕರಿಸಿ ತಳ್ಳಿಬಿಟ್ಟರು. ಮನುಷ್ಯ ಕುಲದ ಒಳಿತಿಗಾಗಿ ದೇವರಿಂದ ನಿಯುಕ್ತರಾಗುವ ಆಧ್ಯಾತ್ಮಿಕ ಸುಧಾರಕರನ್ನು ಜನರು ಸ್ವಾಗತಿಸುವುದರ ಬದಲು ತಿರಸ್ಕರಿಸಿದರು. ಗತಕಾಲದ ಸರ್ವ ಪ್ರವಾದಿಗಳ ಚರಿತ್ರೆಯೂ ಇದಕ್ಕೆ ಸಾಕ್ಷಿಯಾಗಿದೆ. ಇದೊಂದು ವಿಪರ್ಯಾಸವೇ ಸರಿ. ಈ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಹೇಳುವುದನ್ನು ಕಾಣಿರಿ: "ಮನುಷ್ಯರ ನಿರ್ಭಾಗ್ಯವೇ! ಅವರು ಪರಿಹಾಸ್ಯ ಮಾಡಿ ನಿರಾಕರಿಸದಂತಹ ಯಾವ ಪ್ರವಾದಿಯೂ ಅವರೆಡೆಗೆ ಆಗಮಿಸುವುದಿಲ್ಲವಲ್ಲ!" (36 : 31). "ಪ್ರತಿಯೊಂದು ಸಮುದಾಯದೆಡೆಯಲ್ಲಿ ಪ್ರವಾದಿಗಳು ನಿಯುಕ್ತರಾದಾಗಲೂ ಆ ಜನರು ಅವರನ್ನು ಸುಳ್ಳುಗಾರನೆಂದು ಹೇಳಿ ನಿರಾಕರಿಸಿದರು." (23 : 45). "ನಿಮ್ಮ ಮನೋಭಿಲಾಷೆಗೆ ವಿರುದ್ಧವಾದ ಸಂದೇಶಗಳೊಂದಿಗೆ ನಿಮ್ಮೆಡೆಗೆ

ಪ್ರವಾದಿಗಳು ಆಗಮಿಸಿದಾಗಲೆಲ್ಲಾ ನೀವು ಗರ್ವಿಷ್ಠರಾಗಿ (ಆ ಪ್ರವಾದಿಗಳಲ್ಲಿ) ಕೆಲವರನ್ನು ಸುಳ್ಳುಗಾರರೆಂದು ನಿರಾಕರಿಸಿ, ಇನ್ನು ಕೆಲವರನ್ನು ಕೊಲ್ಲಲು ಪ್ರಯತ್ನಿಸಿದಿರಾ?" (2 : 88)

ಈ ರೀತಿ ಅಲ್ಲಾಹನಿಂದ ನಿಯುಕ್ತರಾದ ಸತ್ಯಪ್ರಬೋಧಕರಾದ ಪ್ರವಾದಿಗಳನ್ನು ನಿರಾಕರಿಸುವುದು ಅತ್ಯಂತ ಘೋರ ಅಪರಾಧವೆಂದು ಪವಿತ್ರ ಖುರ್‌ಆನ್ ವಿವರಿಸುತ್ತದೆ.

### ವಿರೋಧಿಗಳ ದುರ್ನ್ಯಾಯಗಳು

ಪ್ರವಾದಿಗಳನ್ನು ಸುಳ್ಳುಗಾರರೆಂದು ಹೇಳಿ ತಿರಸ್ಕರಿಸಿದ ಜನರು ತಮ್ಮ ಕೃತ್ಯಕ್ಕೆ ಹಲವಾರು ಕಾರಣಗಳನ್ನು ತೋರಿಸುತ್ತಿದ್ದರೆಂದೂ ಖುರ್‌ಆನಿನಿಂದ ತಿಳಿದುಬರುತ್ತದೆ. ಕೆಲವರು, ಪ್ರವಾದಿಗಳ ನಿಯೋಗವೇ ಉಂಟಾಗಲಾರದೆಂದೂ ಇನ್ನು ಕೆಲವರು, ತಮ್ಮಲ್ಲಿ ಅವತೀರ್ಣರಾದ ಪ್ರವಾದಿಗಳಲ್ಲದೆ ಬೇರೆ ಯಾರನ್ನೂ ನಾವು ಸ್ವೀಕರಿಸಲಾರೆವೆಂದೂ ಮತ್ತೆ ಕೆಲವರು, ಒಂದು ಕ್ಲಪ್ತಕಾಲದ ನಂತರ ಪ್ರವಾದಿತ್ವವು ಕೊನೆಗೊಂಡಿರುವುದೆಂದೂ ನಂತರ ಯಾರೂ ಪ್ರವಾದಿಯಾಗಿ ಬರಲಾರರೆಂದೂ ಹೇಳಿದ್ದಾಗಿ ಪವಿತ್ರ ಖುರ್‌ಆನ್ ಸೂಚಿಸುತ್ತದೆ. ಪ್ರವಾದಿತ್ವವೇ ಅನಗತ್ಯವಾಗಿದ್ದು ಯಾವ ಪ್ರವಾದಿಗಳಲ್ಲೂ ನಂಬಿಕೆಯಿಡಬೇಕಾದ ಅಗತ್ಯವಿಲ್ಲವೆಂದು ಬ್ರಹ್ಮಸಮಾಜದಂತಹ ಪಂಗಡದವರು ವಾದಿಸುತ್ತಾರೆ. ಬನೀ ಇಸ್ರಾಯೀಲ್ಯರಲ್ಲಿ ಬಂದ ಪ್ರವಾದಿಗಳ ಹೊರತು ಇತರ ಯಾರು ಸಹ ಸತ್ಯವಂತರಲ್ಲವೆಂದೂ ಆದುದರಿಂದ ಪ್ರವಾದಿ ಈಸಾ (ಅ) ಮತ್ತು ಪ್ರವಾದಿ ಮುಹಮ್ಮದ್ (ಸ) ರವರೂ ಸಹ ಸತ್ಯಪ್ರವಾದಿಗಳಲ್ಲವೆಂದು ಯೆಹೂದ್ಯರು ಹೇಳುತ್ತಾರೆ. ಅಂತೆಯೇ, ಯೇಸುಕ್ರಿಸ್ತ (ಹಝ್ರತ್ ಈಸಾ)ರ ಬಳಿಕ ಪ್ರವಾದಿತ್ವವೂ ದಿವ್ಯ ದೌತ್ಯವೂ ಪರಿಸಮಾಪ್ತಿಯಾಗಿದೆಯೆಂದೂ ಅವರ ನಂತರ ಬರುವ ಯಾರ ಪ್ರವಾದಿತ್ವದಲ್ಲೂ ನಂಬಿಕೆಯಿಡುವ ಅಗತ್ಯವಿಲ್ಲವೆಂದೂ ಆದುದರಿಂದ ಹ. ಮುಹಮ್ಮದ್ (ಸ)-ನಊದು ಬಿಲ್ಲಾಹ್–ಒಬ್ಬ ಕಳ್ಳ ಪ್ರವಾದಿಯೆಂದೂ ಕ್ರೈಸ್ತರು ನಂಬಿದ್ದಾರೆ.

ಪವಿತ್ರ ಖುರ್‌ಆನ್ ಮೇಲಿನ ಎಲ್ಲಾ ವಿಶ್ವಾಸಗಳನ್ನೂ ಖಂಡಿಸುತ್ತದೆ. ಈ ರೀತಿ ನಂಬಿಕೊಂಡಿರುವವರೆಲ್ಲರೂ ಮಾರ್ಗಭ್ರಷ್ಟರೂ ದೈವಕೋಪಕ್ಕೆ ಬಲಿಯಾದವರೂ ಆಗಿದ್ದಾರೆಂದು ಮುಸ್ಲಿಮರಿಗೆ ತಿಳಿಸಿಕೊಟ್ಟು ಎಲ್ಲಾ ಪ್ರವಾದಿಗಳಲ್ಲೂ ನಂಬಿಕೆಯಿಡಬೇಕಾದುದು ಅವರ ಧರ್ಮವೆಂದು ಖುರ್‌ಆನ್ ಹೇಳಿದೆ. ಪ್ರವಾದಿತ್ವವು ಕೊನೆಗೊಂಡಿಲ್ಲವೆಂದು ಸಹ ಆ ಪವಿತ್ರ ಗ್ರಂಥವು ತಿಳಿಸಿಕೊಡುತ್ತದೆ.

### ಮುಸ್ಲಿಮರ ಇಂದಿನ ಸ್ಥಿತಿ ಮತ್ತು ವಾಗ್ದತ್ತ ಮಸೀಹಾರ ಆಗಮನ

ಕಾಲಾಂತರದಲ್ಲಿ ಮುಸ್ಲಿಮರು ಸಹ ಪೂರ್ವಿಕ ಸಮುದಾಯಗಳ ಹಾಗೆಯೇ ಅಧಃಪತನಗೊಳ್ಳುವರೆಂದು ಪವಿತ್ರ ಖುರ್‌ಆನ್ ಹಾಗೂ ನಬಿವಚನಗಳಲ್ಲಿ ಹೇಳಲ್ಪಟ್ಟಿದೆ. ಲೋಕವು ಅಂಧವಿಶ್ವಾಸವೂ ದುರಾಚಾರವೂ ಆದ ಅಂಧಕಾರದಲ್ಲಿ ಮುಳುಗಿ ಪವಿತ್ರ ಖುರ್‌ಆನ್ ನಿರ್ದೇಶಿಸುವ ಜೀವಿತ ಕ್ರಮಗಳೂ ಯಥಾರ್ಥವಾದ ಧರ್ಮ ನಿಷ್ಠೆಯೂ ನಾಸ್ತಿಯಾಗುವ ಕಾಲ ಉಂಟಾಗಲಿದೆಯೆಂದೂ ಮುಸ್ಲಿಮರ ಆಧ್ಯಾತ್ಮಿಕ ಚೈತನ್ಯ ಮಾತ್ರವಲ್ಲ ಭೌತಿಕ ಶಕ್ತಿ ಕೂಡಾ ಕ್ಷೀಣಿತವಾಗುವುದೆಂದೂ ಭವಿಷ್ಯವಾಣಿಗಳಲ್ಲಿ ಹೇಳಲ್ಪಟ್ಟಿದೆ. ಆಪತ್ಕರವಾದ ಆ ವೇಳೆಯಲ್ಲಿ ಜನರನ್ನು ನೈಜ ಇಸ್ಲಾಮಿಕ ತತ್ವಗಳೆಡೆ ಆಹ್ವಾನಿಸಲಿಕ್ಕೂ ಮುಸ್ಲಿಮರನ್ನು ಅಧಃಪತನದಿಂದ ಸಂರಕ್ಷಿಸಲಿಕ್ಕೂ ಒಬ್ಬ ಮಹಾಪುರುಷನ (ಪ್ರವಾದಿಯ) ಅವಿರ್ಭಾವವುಂಟಾಗುವುದೆಂಬ ಭವಿಷ್ಯವಾಣಿಯ ಪ್ರಕಾರ ಆ ಪುಣ್ಯಾತ್ಮರ ಆಗಮನವನ್ನು ಬಹಳ ಆತುರದಿಂದ ಮುಸ್ಲಿಮರು ಕಾಯುತ್ತಿದ್ದರು. ಇದೇ ರೀತಿ ಇತರ ಧರ್ಮಗಳಲ್ಲೂ ಒಬ್ಬ ಮತಸುಧಾರಕನ ಆಗಮನದ ಕುರಿತು ಭವಿಷ್ಯ ನುಡಿಯಲ್ಪಟ್ಟಿದ್ದ ಕಾರಣ ಅವರೂ ಸಹ ಆ ದಿವ್ಯ ಮಾರ್ಗದರ್ಶಕನ ಆಗಮನವನ್ನು ಪ್ರತೀಕ್ಷಿಸುತ್ತಲೇ ಇದ್ದರು.

ಮನುಷ್ಯರು ಅವರ ದುಷ್ಕರ್ಮಗಳ ಫಲವಾಗಿ ಸದಾಚಾರಹೀನರೂ ಧಾರ್ಮಿಕ ಜ್ಞಾನವಿಲ್ಲದವರೂ ಆಗಿ ಕೊನೆಗೆ ಭವಿಷ್ಯವಾಣಿಗಳಲ್ಲಿ ಹೇಳಲ್ಪಟ್ಟ ಪ್ರಕಾರ ಶೋಚನೀಯವಾದ ಒಂದು ಅವಸ್ಥೆಗೆ ತಳ್ಳಲ್ಪಟ್ಟರು. ಆಗ ಲೋಕವೆಲ್ಲಾ ಅಂಧಕಾರ ನಿಬಿಡವಾಯಿತು. ಎಲ್ಲಾ ಜಾತಿಮತಸ್ಥರ ಧಾರ್ಮಿಕ ಅವಸ್ಥೆಯೂ ಹೀನಾಯವಾಯಿತು. ಯಥಾರ್ಥವಾದ ದೈವವಿಶ್ವಾಸವೂ ಸದಾಚಾರವೂ ಹೇಳಹೆಸರಿಲ್ಲದಂತೆ ಅಂತರ್ಧಾನವಾಯಿತು. ಇಸ್ಲಾಂ ಧರ್ಮವೆಂಬ ನೌಕೆ ರಕ್ಷಣೆ ಅಸಾಧ್ಯವಾದ ತರದಲ್ಲಿ ಭಯಂಕರವಾದ ಸುಳಿಗಾಳಿಗೆ ಸಿಕ್ಕಿ ಸುತ್ತಾಡತೊಡ

ಗಿತು. ಇಸ್ಲಾಂ ಧರ್ಮದ ಅನುಯಾಯಿಗಳು ಧಾರ್ಮಿಕ ಪ್ರಜ್ಞೆಯಿಲ್ಲದವರಾಗಿ ಐಹಿಕ ಸುಖಾಡಂಬರವೆಂಬ ವಿಷ ವಾಯುವಿಗೆ ಬಲಿಯಾಗಿ ತತ್ತರಿಸುತ್ತಿದ್ದರು. ಸ್ವಜನರಿಗೂ ಪರಜನರಿಗೂ ಒಂದೇ ರೀತಿಯಲ್ಲಿ ಇಸ್ಲಾಮಿನ ಭವಿಷ್ಯವು ಅಂಧಕಾರಮಯವಾಗಿ ಕಾಣತೊಡಗಿತು. ಆ ಪವಿತ್ರ ಧರ್ಮವು ಭೂಮಂಡಲದಿಂದ ಮಾಯವಾಗಿಬಿಡುವುದೇ ಎಂಬಂತೆ ಭಾಸವಾಗತೊಡಗಿತು. ಧರ್ಮಪಂಡಿತರೆಂದು ಕರೆಯಿಸಿಕೊಳ್ಳುವ ಮುಲ್ಲಾ-ಮೌಲವಿಗಳ ಮೂಢನಂಬಿಕೆಗಳಿಂದಲೂ ಸ್ವಾರ್ಥಮನೋಭಾವದಿಂದಲೂ ದುರ್ವ್ಯಾಖ್ಯಾನಗಳಿಂದಲೂ ಪವಿತ್ರ ಇಸ್ಲಾಂ ಧರ್ಮವು ಕಲುಷಿತವಾಯಿತು. ಈ ರೀತಿ ಭವಿಷ್ಯ ನುಡಿಗಳಲ್ಲಿ ಹೇಳಲ್ಪಟ್ಟ ಪ್ರಕಾರವೇ ಜನರ ಸ್ಥಿತಿ ಅತ್ಯಂತ ಶೋಚನೀಯವಾಗಿ ಮಾರ್ಪಟ್ಟಾಗ, ಪರಮ ದಯಾಮಯನಾದ ಅಲ್ಲಾಹು ಆದಿಯಿಂದಲೇ ಜಾರಿಯಲ್ಲಿದ್ದ ತನ್ನ ದಿವ್ಯವಾದ ನಿಯಮದಂತೆ ಮನುಷ್ಯರಲ್ಲಿ ಕರುಣೆದೋರಿ, ಅಂಧಕಾರ ನಿಬಿಡವಾದ ಈ ಕಾಳರಾತ್ರಿಯಲ್ಲಿ ಪೂರ್ವದಿಂದ ಒಂದು ರಶ್ಮಿಯನ್ನು ಉದಯವಾಗುವಂತೆ ಮಾಡಿದನು, ಹೌದು, ವಾಗ್ದಾನ ಮಾಡಲ್ಪಟ್ಟ ಧರ್ಮೋದ್ಧಾರಕ. ಅವರನ್ನು ಲೋಕವು ಬಹಳ ಉತ್ಕಂಠತೆಯಿಂದ ಪ್ರತೀಕ್ಷಿಸುತ್ತಿದ್ದು ಅವರ ಬರುವಿಕೆಯು ಲೋಕಕ್ಕೆ ಅನಿವಾರ್ಯವಾದಂತಹ ತಕ್ಕ ಸಮಯದಲ್ಲೇ ಭವಿಷ್ಯ ನುಡಿಯಲ್ಪಟ್ಟ ಸರ್ವ ಗುಣ ಲಕ್ಷಣಗಳೊಂದಿಗೆ ಆ ಪುಣ್ಯಾತ್ಮರ ಆಗಮನವಾಯಿತು. ಭಾರತದ ಪಂಜಾಬ್ ಪ್ರಾಂತ್ಯದ ಖಾದಿಯಾನ್ ಎಂಬಲ್ಲಿ ಜನಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರೇ ಆ ಯುಗಪುರುಷರು. ಧಾರ್ಮಿಕ ವಿಪ್ಲವದ ಕಹಳೆಧ್ವನಿಯೊಂದಿಗೆ ಆಗತರಾದ ಆ ಪುಣ್ಯಾತ್ಮರು ಲೋಕವನ್ನು ದೈವಿಕ ಮಾರ್ಗದತ್ತ ಆಹ್ವಾನಿಸಿದರು. ಇಸ್ಲಾಂ ಧರ್ಮಕ್ಕೆದುರಾಗಿ ಅದರ ಶತ್ರುಗಳು ಹೂಡುತ್ತಿದ್ದ ಆಕ್ಷೇಪಶರಗಳಿಗೆ ಆ ಸೇನಾನಿ ಎದೆತೋರಿಸಿದರು. ಅವರೊಂದಿಗೆ ಧೀರತೆಯಿಂದ ಹೋರಾಡಿ ಅದಕ್ಕೆ ಮಹತ್ವದ ವಿಜಯವನ್ನು ತಂದುಕೊಟ್ಟರು. ಇಸ್ಲಾಮಿಗೆ ಶೋಭಾಯಮಾನವಾದ ಭವಿಷ್ಯವು ಕೈಗೂಡುವಂತಾಗಲು ದೈವ ನಿರ್ದೇಶ ಪ್ರಕಾರ ಬೇಕಾದ ಎಲ್ಲ ಏರ್ಪಾಡುಗಳನ್ನೂ ಅವರು ಮಾಡಿದರು. ಲಕ್ಷಾಂತರ ಜೀವಶ್ಶವಗಳಿಗೆ ತನ್ನ ಶ್ವಾಸದ ಮೂಲಕ ಆಧ್ಯಾತ್ಮಿಕ ಜೀವವನ್ನು ನೀಡಿ ತಾನು 'ಮಸೀಹಾ' ಆಗಿರುವೆನೆಂಬುದನ್ನು ಅವರು ಲೋಕಕ್ಕೆ ತೋರಿಸಿಕೊಟ್ಟರು. ಪ್ರಪಂಚಾನುರಾಗದಲ್ಲಿ ಮುಳುಗಿ ಧರ್ಮಭ್ರಷ್ಟರಾಗಿ ನರಳುತ್ತಿದ್ದ ಅಸಂಖ್ಯಾತ ಆದಂ ಸಂತತಿಗಳನ್ನು ಅವರು ಭಕ್ತಿಮಾರ್ಗದಲ್ಲಿ ಸಂಚರಿಸುವಂತೆ ಮಾಡಿ ತದ್ವಾರಾ ತಾನು 'ಮಹದಿ' ಆಗಿರುವೆನೆಂಬ ಸತ್ಯವನ್ನೂ ಪ್ರಪಂಚಕ್ಕೆ ತಿಳಿಸಿಕೊಟ್ಟರು.

ಈ ರೀತಿಯಾಗಿ ಆ ಪುಣ್ಯಾತ್ಮರು ಸತ್ಯಲಕ್ಷಣಗಳೊಂದಿಗೂ ದಿವ್ಯ ದೃಷ್ಟಾಂತಗಳೊಂದಿಗೂ ಆಗಮಿಸಿದರೂ ಹಾ! ಲೋಕವು ಅವರನ್ನು ಸ್ವೀಕರಿಸಲು ಮುಂದಾಗಲಿಲ್ಲ! ದೌರ್ಭಾಗ್ಯದ ದುರ್ದೆಸೆ ಅದೆಷ್ಟು ಕಠೋರ! ಪೂರ್ವಕಾಲದ ಚರಿತ್ರೆಯು ಪುನರಾವರ್ತನೆಯೆಂಬಂತೆ ಆ ಜನರು ಅವರ ಬಳಿಗೆ ನಿಯುಕ್ತರಾದ ದಿವ್ಯ ಪ್ರವಾದಿಗಳೊಡನೆ ವರ್ತಿಸಿದಂತೆಯೇ ಇಂದಿನ ಲೋಕವೂ ಸಹ ಆಗತರಾದ ಈ ಮಹಾಪುರುಷರೊಡನೆ ವರ್ತಿಸಿತು. ಜನರು ಅವರನ್ನು ಸುಳ್ಳುವಾದಿಯೆಂದು ಆರೋಪಿಸಿದರು. ಅಪಹಾಸ್ಯ ಮಾಡಿದರು. ಅವಾಚ್ಯ ಶಬ್ದಗಳಿಂದ ಅವರನ್ನು ಬೈದರು. ಆ ಮಹಾಪುರುಷರನ್ನು ಸುಳ್ಳು ಮೊಕದ್ದಮೆಗಳಲ್ಲಿ ಸಿಲುಕಿಸಲಿಕ್ಕೂ ಕೊಲ್ಲಲಿಕ್ಕೂ ಸಹ ಪ್ರಯತ್ನಿಸಿದರು. ಅವರ ಅನುಯಾಯಿಗಳಿಗೆ ಮತಭ್ರಷ್ಟತೆಯನ್ನು ವಿಧಿಸಿ ಅವರನ್ನು ಸಕಲ ವಿಧದ ಹಿಂಸೆಗಳಿಗೂ ಗುರಿಪಡಿಸಿದರು. ಈ ರೀತಿಯಲ್ಲಿ ವಿರೋಧಿಗಳು ತಮ್ಮಿಂದ ಸಾಧ್ಯವಾಗುವ ಎಲ್ಲವನ್ನೂ ಆ ಮಹಾತ್ಮರ ಮತ್ತು ಅವರ ಅನುಯಾಯಿಗಳಿಗೆದುರಾಗಿ ಮಾಡಿದರು. ಮತಪಂಡಿತರಾದ "ಆಲಿಂ"ಗಳು ತಮ್ಮ ಪಾಂಡಿತ್ಯದ ಅಹಂಕಾರದಿಂದಲೂ ಮುಫ್ತಿಗಳು ತಮ್ಮ ವಿಧಿನಿರ್ಮಾಣದ ದರ್ಪದಿಂದಲೂ ಆ ದಿವ್ಯಾತ್ಮರ ಹಾಗೂ ಅವರು ಸ್ಥಾಪಿಸಿದ ಸಂಘಟನೆಯ ವಿಜಯಮಾರ್ಗವನ್ನು ತಡೆಯಲು ಪ್ರಯತ್ನಿಸಿ ನೋಡಿದರು. ಆದರೆ, ಇವರ ಈ ಎಲ್ಲಾ ಪರಿಶ್ರಮಗಳೂ ಪರಾಭವಗೊಂಡವು. ಖಾದಿಯಾನ್ ಎಂಬ ಕುಗ್ರಾಮದಿಂದ ಹೊರಟ ಆ ದಿವ್ಯ ಶಬ್ದವು ಪ್ರಪಂಚದ ಮೂಲೆಮೂಲೆಗೂ ಹರಡಿತು. ನಾನಾ ಕಡೆಗಳಿಂದಲೂ ಜನರು ಆ ಆಧ್ಯಾತ್ಮಿಕ ಸರೋವರದತ್ತ ಧಾವಿಸಿಬಂದರು, ಅವರು ಸ್ಥಾಪಿಸಿದ "ಅಹ್ಮದಿಯಾ ಜಮಾಅತ್" ಲೋಕದಲ್ಲಿ ಅದರ ಜೈತ್ರಯಾತ್ರೆಯನ್ನು ಮುಂದುವರಿಸುತ್ತಿದೆ.

### ಎದುರಾಳಿಗಳು ಮುಂದಿಡುವ ನೆಪಗಳು

ವಾಗ್ದಾನ ಮಾಡಲ್ಪಟ್ಟ ಮಹಾಪುರುಷ ಭವಿಷ್ಯವಾಣಿಗಳಲ್ಲಿ ಹೇಳಲ್ಪಟ್ಟಂತೆಯೇ ನಿಶ್ಚಿತ ಸಮಯದಲ್ಲಿ

ಅವತಾರವೆತ್ತಿ ಲೋಕವನ್ನು ಯಥಾರ್ಥ ಸನ್ಮಾರ್ಗದತ್ತ ಆಹ್ವಾನಿಸಿದಾಗ, ಪೂರ್ವಕಾಲದ ಪ್ರವಾದಿಗಳೊಡನೆ ಆಯಾಕಾಲದ ಬಹುಸಂಖ್ಯಾತ ಜನರು ಏನಾದರೂ ನೆಪಗಳನ್ನು ಹೇಳಿ ಆ ಪ್ರವಾದಿಗಳನ್ನು ನಿರಾಕರಿಸಿದಂತೆಯೇ ಇಂದಿನ ಜನರು ಸಹ ಹಲವಾರು ಮೊಂಡು ನೆಪಗಳನ್ನು ಮುಂದಿಡುತ್ತಾ ದೈವನಿಯುಕ್ತ ಸತ್ಯವಾದಿಯನ್ನು ವಿರೋಧಿಸಿದರು. ಒಂದು ವಿಭಾಗದವರು, ನಮಗೆ ವಾಗ್ದಾನ ಮಾಡಲ್ಪಟ್ಟಿರುವುದು ಆಕಾಶದಿಂದ ಇಳಿದುಬರಬೇಕಾದ ಒಬ್ಬರ ಕುರಿತಾಗಿದೆಯೆಂದೂ, ಅವರು ಎರಡು ಸಾವಿರ ವರ್ಷಗಳ ಹಿಂದೆ ಆಕಾಶಕ್ಕೆ ಎತ್ತಲ್ಪಟ್ಟು ಈಗಲೂ ಸ್ವಶರೀರದೊಂದಿಗೆ ಅಲ್ಲಿ ಜೀವಂತ ಇರುವರೆಂದೂ ಹೇಳುತ್ತಾ ಆಗತರಾದ ದಿವ್ಯಾತ್ಮರ ಸತ್ಯತೆಯನ್ನು ಅಲ್ಲಗಳೆದರು. ಆಕಾಶದಲ್ಲಿ ಜೀವಿಸುತ್ತಿರುವರೆಂದು ಅವರು ಭಾವಿಸುತ್ತಿರುವ ಹಝ್ರತ್ ಈಸಾ (ಅ) ಗತಿಸಿಹೋಗಿರುವರೆಂದೂ ಆದಕಾರಣ ಅವರು ಇನ್ನು ಹಿಂದಿರುಗಲಾರರೆಂದೂ ಎಷ್ಟೆಷ್ಟು ಉಪದೇಶಿಸಿದರೂ ಆ ಸತ್ಯವನ್ನು ಅವರು ಗ್ರಹಿಸಿಕೊಳ್ಳಲಿಲ್ಲ. ಪ್ರವಾದಿ ಇಲ್ಯಾಸ್ (ಅ) ರವರು ಆಕಾಶದಿಂದ ಪುನಃ ಇಳಿದುಬರುವರೆಂದು ಯೆಹೂದ್ಯ ಮತಗ್ರಂಥದಲ್ಲಿ (ತೌರಾತ್) ಭವಿಷ್ಯ ನುಡಿಯಲ್ಪಟ್ಟಿದೆ. ಈ ಭವಿಷ್ಯವಾಣಿಯ ನಿಜವಾದ ಅರ್ಥವು ಇಲ್ಯಾಸ್ (ಅ)ರವರಿಗೆ ಆತ್ಮಶಕ್ತಿಯಲ್ಲಿ ತುಲ್ಯರಾದ ಇನ್ನೊಬ್ಬ ಪ್ರವಾದಿಯ ಬರುವಿಕೆಯೆಂದು ಹಝ್ರತ್ ಈಸಾರವರು ವ್ಯಾಖ್ಯಾನಿಸಿರುವುದನ್ನು ಸ್ವೀಕರಿಸದೆ, ಎಲೀಯಾ ಆಕಾಶದಿಂದಲೇ ಬರಬೇಕೆಂಬುದಾಗಿ ಯೆಹೂದ್ಯರು ಹಟ ಹಿಡಿದುದರ ಪರಿಣಾಮವಾಗಿ ಅವರಿಗೆ ಇಂದಿನ ವರೆಗೂ ಹಝ್ರತ್ ಈಸಾ ಮಸೀಹರನ್ನು ಸ್ವೀಕರಿಸುವ ಭಾಗ್ಯವು ದೊರಕದೆ ಹೋಯಿತು. ಇದೇ ರೀತಿ ಮಸೀಹಾ ಆಕಾಶದಿಂದಲೇ ಬರಬೇಕೆಂದು ಈ ಜನರೂ ಕಾಯುತ್ತಾ ನಿಂತರೆ ಅಂತ್ಯ ದಿವಸದ ವರೆಗೂ ಇವರಿಗಾಗಿ ಆಕಾಶದಿಂದ ಯಾರೂ ಇಳಿದುಬರಲಾರರೆಂದು ಆಗತರಾದ ಈ ಪುಣ್ಯಪುರುಷ ಹೇಳಿರುವುದನ್ನು ಇವರೂ ಸ್ವೀಕರಿಸಲಿಲ್ಲ.

ಇನ್ನೊಂದು ವಿಭಾಗದವರಾದರೆ, ವಾಗ್ದಾನ ಮಾಡಲ್ಪಟ್ಟ ಮಸೀಹಾರ ಆಗಮನದ ಕಾಲವೇ ಆಗಲಿಲ್ಲವೆಂದು ಹೇಳುತ್ತಾ ಅವರ ಸತ್ಯತೆಯನ್ನು ತಳ್ಳಿಬಿಟ್ಟರು. ಪ್ರವಾದನಗಳ ಪ್ರಕಾರ ಎಲ್ಲ ಸೂಚಕ ಕಾರ್ಯಗಳೂ ದೃಷ್ಟಾಂತಗಳೂ ಸಂಭವಿಸಿಯೂ ಧರ್ಮಜ್ಞಾನಿಗಳಾದ ಮಹಾಪುರುಷರು ತಿಳಿಸಿಕೊಟ್ಟಂತಹ ಅನುಗ್ರಹೀತ ಶತಮಾನವು ಸನ್ನಿಹಿತವಾಗಿಯೂ ಸಹ ಭವಿಷ್ಯ ನುಡಿಯಲ್ಪಟ್ಟ ಕಾಲ ಇನ್ನೂ ಆಗಲಿಲ್ಲವೆಂದು ತರ್ಕಿಸುವುದು ಸರಿಯಲ್ಲವೆಂಬುದನ್ನು ಇವರು ತಿಳಿಯುವುದಿಲ್ಲ. ಹಿಂದೆಯೂ ಸಹ ಪ್ರವಾದಿಗಳು ಆಗತರಾದಾಗ "ಸಮಯವಾಗಿಲ್ಲ" ಎಂದು ಹೇಳಿ ನಿರಾಕರಿಸಿದ ಸಮುದಾಯದವರಿಗೆ ನಂತರ ಆ ಪ್ರವಾದಿಗಳನ್ನು ಸ್ವೀಕರಿಸಲು ಸಾಧ್ಯವಾಗಲಿಲ್ಲವೆಂಬ ಸತ್ಯವನ್ನು ಇವರು ಗ್ರಹಿಸಲಿಲ್ಲ.

ಇನ್ನೊಂದು ಪಂಗಡದವರಾದ ಜನರು, ನಮಗೆ ಯಾವ ಪ್ರವಾದಿಯ ಕುರಿತೂ ವಾಗ್ದಾನ ನೀಡಲ್ಪಟ್ಟಿಲ್ಲವೆಂದೂ ನಮಗೆ ಅಂತಹ ಯಾರ ಆಗಮನದ ಅವಶ್ಯಕತೆಯೂ ಇಲ್ಲವೆಂದೂ ಹೇಳಿ ದೈವನಿಯುಕ್ತರಾದ ಈ ದಿವ್ಯದೂತರನ್ನು ಸುಳ್ಳುಗಾರನೆಂದು ನಿರಾಕರಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರ ನಂತರ ಒಬ್ಬ ಪ್ರವಾದಿಯ ಅವಶ್ಯಕತೆಯೇ ಉಳಿದಿಲ್ಲವಾದುದರಿಂದ ಇನ್ನು ಪ್ರವಾದಿಗಳು ಬರುವಂತಿಲ್ಲವೆಂದು ಇವರು ಹೇಳುತ್ತಾರೆ. ಆದರೆ, ಈ ರೀತಿ ಹೇಳುವುದು ಪವಿತ್ರ ಖುರ್ ಆನ್ ಹಾಗೂ ನಬಿವಚನಗಳನ್ನು ಧಿಕ್ಕರಿಸುವುದಕ್ಕೂ 13 ಶತಮಾನಗಳಿಂದಲೂ ಮುಸ್ಲಿಂ ಜಗತ್ತು ಒಬ್ಬ ಮಸೀಹರ ಆಗಮನವನ್ನು ಪ್ರತೀಕ್ಷಿಸುತ್ತಿದ್ದುದು ಕೇವಲ ಒಂದು ವ್ಯಾಮೋಹವೆಂಬುದಾಗಿ ಹೇಳುವುದಕ್ಕೂ ಸಮವೆಂದು ಇವರು ತಿಳಿದುಕೊಳ್ಳುವುದಿಲ್ಲ. ಲೋಕದ ಅವಸ್ಥೆಯು, ವಿಶೇಷತಃ ಮುಸ್ಲಿಂ ಸಮುದಾಯದ ಅವಸ್ಥೆಯು ದೈವನಿಯುಕ್ತರಾದ ಒಬ್ಬ ಮತಸುಧಾರಕನ ಅವಶ್ಯಕತೆಯನ್ನು ಸಾರಿ ಹೇಳುತ್ತಿದೆ ಎಂಬ ವಿಚಾರವನ್ನು ಇವರು ಗ್ರಹಿಸದೆ ಇರುವುದು ಕಷ್ಟವೇ ಸರಿ! ಈ ಸಮುದಾಯವು ಎಂತಹ ಉನ್ನತವಾದೊಂದು ಪದವಿಯಿಂದ ಈಗಿನ ಈ ಅಧಮಾವಸ್ಥೆಗೆ ತಳ್ಳಲ್ಪಟ್ಟಿದೆ ಎಂಬುದನ್ನು ಇವರು ನಿಷ್ಕಳಂಕವಾಗಿ ಒಮ್ಮೆ ಆಲೋಚಿಸಿ ನೋಡಿದ್ದರೆ ತಮ್ಮ ಪರಿಷ್ಕರಣೆಗೆ ಇನ್ನು ಯಾವ ದೈವನಿಯುಕ್ತ ವಾದಿಯ ಅಗತ್ಯವೂ ಇಲ್ಲವೆಂದು ಹೇಳಲು ಇವರು ಸಾಹಸಪಡುತ್ತಿರಲಿಲ್ಲ.

ಮೇಲೆ ವಿವರಿಸಿದ ಮೂರು ಕಾರಣಗಳ ಪೈಕಿ ಹಝ್ರತ್ ಅಹ್ಮದ್ (ಅ)ರವರ ಎದುರಾಳಿಗಳು ಅವರನ್ನು ನಿರಾಕರಿಸಲು ಮೊದಲೆಲ್ಲಾ ತೋರಿಸುತ್ತಿದ್ದ

ಪ್ರಬಲವಾದ ಕಾರಣ ಈಸಾನಬಿಯವರ ಜೀವಿತ–ಮರಣದ ವಿಷಯವಾಗಿತ್ತು. ಪ್ರವಾದಿ ಈಸಾ ಮರಣ ಹೊಂದಿರುವರೆಂಬುದಾಗಿ ಹಝ್ರತ್ ಅಹ್ಮದ್‌ರವರು ಪವಿತ್ರ ಖುರ್‌ಆನ್‌ನಿಂದ ಸಾಕ್ಷ್ಯಾಧಾರಗಳನ್ನು ತೆಗೆದು ತೋರಿಸಿದರು. ಅಸಂದಿಗ್ಧವಾದ ಖುರ್‌ಆನಿಕ ಪ್ರಮಾಣಗಳ ಮುಂದೆ ಕಣ್ಣುಮುಚ್ಚಿ ನಿಲ್ಲಲು ಮತಪಂಡಿತರಿಗೆ ಹೆಚ್ಚುಕಾಲ ಸಾಧ್ಯವಾಗಲಿಲ್ಲ. ಈಸಾ (ಅ) ಮರಣ ಹೊಂದಿರುವರೆಂಬುದಾಗಿ ನಂಬಿದ್ದಕ್ಕಾಗಿ ಮಾತ್ರ ಮೊದಲು ಹಝ್ರತ್ ಅಹ್ಮದ್‌ರವರಿಗೂ ಅವರ ಅನುಯಾಯಿಗಳಿಗೂ ಕುಫ್ರ್ ಫತ್ವಾ ವಿಧಿಸಲಾಗುತ್ತಿತ್ತು. ಆದರೆ, ಕ್ರಮೇಣ ಮುಸ್ಲಿಂ ಮತಪಂಡಿತರಲ್ಲಿ ಕೆಲವರು ಈ ಬಗ್ಗೆ ಖುರ್‌ಆನಿನಲ್ಲಿ ಗಾಢವಾಗಿ ಅವಲೋಕನ ನಡೆಸಿದಾಗ ಹಝ್ರತ್ ಅಹ್ಮದರು ಹೇಳುತ್ತಿರುವುದೇ ಸರಿಯೆಂಬುದಾಗಿ ಅವರಿಗೆ ಮನವರಿಕೆಯಾಗತೊಡಗಿತು. ಮರಿಯಮ್ ಅವರ ಪುತ್ರ ಈಸಾ (ಅ) ಗತಿಸಿಹೋಗಿರುವರೆಂದು ಪವಿತ್ರ ಖುರ್‌ಆನ್‌ನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ ಎಂಬುದಾಗಿ ಅನೇಕ ಸುಪ್ರಸಿದ್ಧ ಮತಪಂಡಿತರು ಬಹಿರಂಗವಾಗಿ ಸಮ್ಮತಿಸಿದರು. ಈಗಂತೂ ಅಹ್ಮದಿಯಾ ಸಂಘಟನೆಯನ್ನು ಎದುರಿಸಲು ಮುಂದೆ ಬರುವವರು ಹಝ್ರತ್ ಈಸಾ (ಅ)ರವರ ಜೀವಿತ ಮರಣದ ಬಗ್ಗೆ ಪ್ರಸ್ತಾಪವನ್ನೇ ಎತ್ತುವುದಿಲ್ಲವೆಂಬುದು ಗಮನಾರ್ಹವಾಗಿದೆ.

ಆ ದಿವ್ಯ ಸ್ಥಾಪನೆಯೊಡನೆ ಹೋರಾಟದ ಕಣಕ್ಕಿಳಿಯುವವರು ಈಗ ಬಳಸುವ ಮಹಾಅಸ್ತ್ರವೆಂದರೆ "ಪ್ರವಾದಿತ್ವದ ಪರಿಸಮಾಪ್ತಿ." ತಮ್ಮ ಬತ್ತಳಿಕೆಯಲ್ಲಿ ಉಳಿದಿರುವ ಈ ಏಕಮಾತ್ರ ಅಸ್ತ್ರವನ್ನು ಅವರು ಈ ದಿವ್ಯ ಸಂಘಟನೆಗೆದುರಾಗಿ ಪ್ರಯೋಗಿಸಿ ನೋಡುತ್ತಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರ ಪದವಿಯ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೇಳಲ್ಪಟ್ಟ ಖಾತಮುನ್ನಬಿಯ್ಯೀನ್ ಎಂಬ ಪದಕ್ಕೆ "ಅಂತ್ಯ ಪ್ರವಾದಿ" ಎಂಬುದಾಗಿ ಅರ್ಥ ನೀಡಿಯೂ ಮುಹಮ್ಮದ್ ಪೈಗಂಬರರು ಲಾ ನಬಿಯ್ಯ ಬಅದೀ ಎಂದು ಹೇಳಿರುವುದನ್ನು ಆಸ್ಪದ ಮಾಡಿಯೂ ಇನ್ನು ಯಾವ ಪ್ರವಾದಿಯ ಆಗಮನವೂ ಸಾಧ್ಯವಿಲ್ಲವೆಂದೂ ಆದುದರಿಂದ ಮಿರ್ಝಾ ಗುಲಾಂ ಅಹ್ಮದ್ (ಅ) ಒಬ್ಬ ಸುಳ್ಳುವಾದಿಯೆಂದೂ ಅವರು ಹೇಳುತ್ತಾರೆ. ಈ ಬಗ್ಗೆ ಅಹ್ಮದಿಯಾ ಪ್ರಕಾಶನಗಳಲ್ಲಿ ವಿವರವಾದ ಉತ್ತರಗಳು ನೀಡಲ್ಪಟ್ಟಿದ್ದರೂ ಮತ್ತೂ ಮತ್ತೂ ಅದನ್ನೇ ಎತ್ತಿಹಿಡಿದು ಮುಸ್ಲಿಂ ಜನಸಾಮಾನ್ಯರನ್ನು ತಪ್ಪುದಾರಿಗೆಳೆಯಲು ಅವರು ಶ್ರಮಿಸುತ್ತಿದ್ದಾರೆ. ಹಝ್ರತ್ ಮುಹಮ್ಮದ್ (ಸ)ರವರು ಖಾತಮುನ್ನಬಿಯ್ಯೀನ್ ಆಗಿರುವರೆಂಬುದರ ಸರಿಯಾದ ಅರ್ಥವೇನೆಂದೂ ಅವರು 'ಲಾ ನಬಿಯ್ಯ ಬಅದೀ' ಎಂಬುದಾಗಿ ಹೇಳಿರುವುದರ ತಾತ್ಪರ್ಯವೇನೆಂದೂ ಇನ್‌ಶಾ ಅಲ್ಲಾಹ್ ಮುಂದಿನ ಲೇಖನದಲ್ಲಿ ವಿವರಿಸುವೆನು. ಸತ್ಯಾಸತ್ಯವನ್ನು ನಿಷ್ಪಕ್ಷತೆಯಿಂದ ವಿವೇಚಿಸಿ ಸತ್ಯವಾಗಿ ಕಂಡುಬಂದುದರಲ್ಲಿ ವಿಶ್ವಾಸವಿಡಬೇಕೆಂಬ ಶುದ್ಧಹೃದಯದೊಂದಿಗೆ ಅನ್ವೇಷಣೆ ನಡೆಸುವವರಿಗೆ ಪರಮದಯಾಳುವಾದ ಅಲ್ಲಾಹನು ಯಥಾರ್ಥ ಸನ್ಮಾರ್ಗವನ್ನು ತೋರಿಸಿಕೊಡಲಿ; ಹಾಗೂ ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿ ಅಲ್ಲಾಹನಿಂದ ನಿಯುಕ್ತರಾದ ದಿವ್ಯಾತ್ಮರ ಸತ್ಯತೆಯನ್ನು ಕಂಡುಕೊಳ್ಳಲು ಅಲ್ಲಾಹನು ಅವರಿಗ ಭಾಗ್ಯವನ್ನು ಕರುಣಿಸಲಿ—ಆಮೀನ್.

ಯುಗರಶ್ಮಿಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ : ರೂ. 4-00** **ಬಿಡಿಪ್ರತಿ : ರೂ. 1-00**

# ತಮಿಳುನಾಡಿನಲ್ಲಿ ಹರಿಜನರ ಇಸ್ಲಾಂ ಮತ ಸ್ವೀಕಾರ

● ಮೌಲವಿ ಬಶೀರ್ ಅಹ್ಮದ್ ದೆಹ್ಲವಿ, H. A.
(ನಾಝಿರ್ ದಅ್‌ವತೆಓ ತಬ್ಲೀಗ್, ಖಾದಿಯಾನ್)

ತಮಿಳು ನಾಡಿನ ಕೆಲವು ಜಿಲ್ಲೆಗಳಲ್ಲಿ ಹರಿಜನರು ಇಸ್ಲಾಮ್ ಮತ ಸ್ವೀಕರಿಸುವ ಸಮಾಚಾರಗಳು ಕೆಲವು ಸಮಯದಿಂದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಾ ಇವೆ. ಇದರ ಕುರಿತು ಕೆಲವು ಜಾತೀಯವಾದಿಗಳು ಅಪಪ್ರಚಾರ ಮಾಡುತ್ತಾ ಅದು ಅಂತಾರಾಷ್ಟ್ರೀಯ ಸಂಚಿನ ಪರಿಣಾಮವೆಂದು ಘೋಷಿಸುತ್ತಾ ದೇಶದಲ್ಲಿ ಜಾತೀಯ ಗಲಭೆಗಳು ತಲೆದೋರುವಂತೆ ಪ್ರಯತ್ನಿಸುತ್ತಿದ್ದಾರೆ. ಕೇಂದ್ರ ಸರಕಾರದ ಪರವಾಗಿ ಗೃಹ ಖಾತೆಯ ಸಹಾಯಕ ಸಚಿವ ಯೋಗೇಂದ್ರ ಮಕ್ವಾನಾ ಸ್ವತಃ ಹೋಗಿ ಅಲ್ಲಿನ ಸ್ಥಿತಿಗತಿಗಳ ಕುರಿತು ಪರಿಶೀಲಿಸಿ ಮತಾಂತರಗೊಂಡ ಹರಿಜನರನ್ನು ಭೇಟಿಯಾದ ನಂತರ ಮತಾಂತರದ ಕಾರಣವನ್ನು ಈ ರೀತಿ ವ್ಯಕ್ತಗೊಳಿಸಿರುವರು:

"ಉನ್ನತ ವರ್ಗದ ಹಿಂದುಗಳು ಹರಿಜನರನ್ನು ಸಂಪೂರ್ಣವಾಗಿ ಅವಗಣಿಸಿ ನೈಚ್ಯಭಾವನೆಯಿಂದ ಅವರೊಡನೆ ವರ್ತಿಸಿದುದೇ ಅವರು ಮತಪರಿವರ್ತನೆಗೊಳ್ಳಲು ಪ್ರಧಾನ ಕಾರಣವಾಯಿತು. ಮುಸಲ್ಮಾನರಾದ ಹರಿಜನರು ಈ ರೀತಿ ಹೇಳಿದರು: 'ಹಿಂದೂ ನಾಯಕರ ಬಗ್ಗೆಯಾಗಲೀ ಹಿಂದೂ ಸಮಾಜದ ಕುರಿತಾಗಲೀ ನಮಗೆ ಯಾವುದೇ ಭರವಸೆಯಿಲ್ಲ.' ಹರಿಜನರಾಗಿದ್ದಾಗ ಅವರಿಗೆ ಉನ್ನತ ವರ್ಗದ ಹಿಂದೂಗಳ ಜೊತೆಯಲ್ಲಿ ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡಲು ಸಾಧ್ಯವಿರಲಿಲ್ಲ. ಅವರು ಮುಸಲ್ಮಾನರಾದ ನಂತರ ಅವರಿಗೆ ಸಮಾನ ಸ್ಥಾನ ದೊರಕಿದೆಯೆಂದು ಅವರು ಹೇಳುತ್ತಾರೆ.

ಅಲ್ಲಿಯ ಹರಿಜನರ ಸುರಕ್ಷಣೆಯ ಕುರಿತು ಅಲ್ಲಿನ ಪತ್ರಿಕೆಗಳು ಸಹ ಉದಾಸೀನಭಾವ ತೋರಿದ್ದುವು. ಅನೇಕ ಗಲಭೆಗಳಲ್ಲಿ ಹರಿಜನರ ಜೀವ ಮತ್ತು ಸ್ವತ್ತಿಗೆ ನಷ್ಟ ಉಂಟಾಯಿತೆಂದೂ ಲೂಟಿ ದರೋಡೆ ಮತ್ತು ಬೆಂಕಿ ಕೊಡುವಿಕೆಯ ಸಂಭವಗಳು ನಡೆದಾಗ ಪೋಲೀಸರು ಅವರಿಗೆ ಸಂರಕ್ಷಣೆ ಕೊಡುವ ಬದಲು ಲೂಟಿಗಾರರಿಗೆ ಸಹಾಯ ಮಾಡಿದುದಾಗಿಯೂ ತಿಳಿದು ಬಂದಿದೆ."

ಪತ್ರಿಕೆಗಳಲ್ಲಿ ವಿವಿಧ ರೀತಿಯ ಹೇಳಿಕೆಗಳು ಬಂದಾಗ ಅಹ್ಮದಿಯಾ ಕೇಂದ್ರ ಸಂಸ್ಥೆಯ ಪ್ರಚಾರ ವಿಭಾಗವಾದ "ನಿಝಾರತ್ ದಅ್‌ವತೋ ತಬ್ಲೀಗ್"ನ ಪರವಾಗಿ ತಮಿಳುನಾಡಿನ ಅಹ್ಮದಿಯಾ ಪ್ರಚಾರಕರಾದ ಮೌಲವಿ ಮುಹಮ್ಮದ್ ಉಮರ್ ಸಾಹೇಬ್‌ರವರ ನೇತೃತ್ವದಲ್ಲಿ ಒಂದು ನಿಯೋಗವನ್ನು ಮೀನಾಕ್ಷಿಪುರಂಗೆ ಕಳುಹಿಸಲಾಯಿತು. ಈ ನಿಯೋಗದವರು ಅಲ್ಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಕಳುಹಿಸಿದ ವರದಿಯಲ್ಲಿ ಅಲ್ಲಿನ ಹರಿಜನರು ಯಾವುದೇ ಪ್ರಭಾವ ಅಥವಾ ಆಶೆ ಆಮಿಷಕ್ಕೊಳಗಾಗಿ ಇಸ್ಲಾಮ್ ಮತ ಸ್ವೀಕರಿಸಲ್ಲವೆಂದೂ ಅವರಲ್ಲಿ ಹೆಚ್ಚಿನವರು ಉನ್ನತ ವರ್ಗಕ್ಕೆ ಸೇರಿದವರ ನಿರಂತರವಾದ ದೌರ್ಜನ್ಯಕ್ಕೆ ಒಳಗಾಗಿ ಈ ಹೆಜ್ಜೆಯಿಡಲು ನಿರ್ಬಂಧಿತರಾದರೆಂದೂ ಅವರು ಈಗ ಸಂಪೂರ್ಣವಾಗಿ ಸಮಾಧಾನದಿಂದಿರುವರೆಂದೂ ತಿಳಿಸಿರುವರು.

ಭಾರತದಲ್ಲಿರುವ ಅಸ್ಪೃಶ್ಯರು ಮಹಾತ್ಮಾಗಾಂಧೀಜಿಯವರಿಂದ "ಹರಿಜನ" ಎಂಬ ಪವಿತ್ರ ನಾಮಧೇಯ

ವನ್ನು ಪಡೆದರೂ ಕೆಲವು ಸಮಯದಿಂದ ಸವರ್ಣ ಹಿಂದು ಗಳಿಂದ ಪೀಡನೆಗಳನ್ನು ಅನುಭವಿಸುತ್ತಾ ಇರುವರು. ಅವರ ಜೊತೆ ಸವರ್ಣ ಹಿಂದುಗಳ ವರ್ತನೆ ವೇದ ಮತ್ತು ಇತರ ಹಿಂದೂ ಧರ್ಮಶಾಸ್ತ್ರಗಳಿಗೆ ಅನುಸಾರವಾಗಿವೆ ಎಂಬುದು ಖೇದಕರ. ಪರಮಾತ್ಮನು ಮನುಷ್ಯರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನಾಗಿ ಸೃಷ್ಟಿಸಿದನೆಂದು ವೇದಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಯಜುರ್ವೇದ ಅಧ್ಯಾಯ 31 ವಚನ 11 ರಲ್ಲಿ ಈ ರೀತಿ ಬರೆದಿದೆ:

ಬ್ರಾಹ್ಮಣರು ಬ್ರಹ್ಮನ ಮುಖದಿಂದಲೂ ಕ್ಷತ್ರಿಯರು ಬಾಹುಗಳಿಂದಲೂ ವೈಶ್ಯರು ತೊಡೆಗಳಿಂದಲೂ ಶೂದ್ರರು ಪಾದಗಳಿಂದಲೂ ಜನಿಸಿದರು. ಅದಕ್ಕನುಗುಣವಾಗಿ ಮನುಸ್ಮೃತಿ ಅಧ್ಯಾಯ 1, ಶ್ಲೋಕ 31ರಲ್ಲಿ ಹೀಗೆ ಬರೆಯಲಾಗಿದೆ:

ಬ್ರಹ್ಮನು ಜನರನ್ನು ಹೆಚ್ಚಿಸಲಿಕ್ಕಾಗಿ ತನ್ನ ಮುಖ, ಬಾಹು, ತೊಡೆ ಮತ್ತು ಪಾದಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಸೃಷ್ಟಿಸಿದನು.

ಮನುಸ್ಮೃತಿ ಈ ನಾಲ್ಕು ವರ್ಗಕ್ಕೆ ಸೇರಿದ ಮಾನವರ ಕೆಲಸಗಳನ್ನು ಈ ರೀತಿ ವಿವರಿಸುತ್ತದೆ:

**ಬ್ರಾಹ್ಮಣನ ಕೆಲಸ:**— ವೇದಗಳನ್ನು ಕಲಿಯುವುದು–ಕಲಿಸುವುದು, ಯಜ್ಞ ಮಾಡುವುದು – ಮಾಡಿಸುವುದು, ದಾನ ಕೊಡುವುದು – ತಕ್ಕೊಳ್ಳುವುದು – ಇವು ಆರು ಕಾರ್ಯಗಳು ಬ್ರಾಹ್ಮಣನು ಮಾಡಬೇಕಾದುದಾಗಿವೆ. (ಮನುಸ್ಮೃತಿ ಅಧ್ಯಾಯ 1, ಶ್ಲೋಕ-88),

**ಕ್ಷತ್ರಿಯನ ಕೆಲಸ:**– ಪ್ರಜೆಗಳ ಸಂರಕ್ಷಣೆ. ದಾನ ಮಾಡುವುದು, ಯಜ್ಞ ಮಾಡುವುದು, ಯಜ್ಞ ಮಾಡಿಸುವುದು, ಶಾರೀರಿಕ ಆಕಾಂಕ್ಷೆಗಳಿಗೆ ಅಡಿಯಾಳಾಗದೆ ಇರುವುದು. (ಮನುಸ್ಮೃತಿ ಅಧ್ಯಾಯ 1, ಶ್ಲೋಕ 89).

**ವೈಶ್ಯನ ಕೆಲಸ:**—ದನಕರುಗಳ ಸಂರಕ್ಷಣೆ, ದಾನ ಮಾಡುವುದು, ಯಜ್ಞ ಮಾಡುವುದು, ವಿದ್ಯೆ ಕಲಿಯುವುದು, ವ್ಯಾಪಾರ ಮಾಡುವುದು, ಕೃಷಿ ಮಾಡುವುದು, ಬಡ್ಡಿಗೆ ಹಣ ಕೊಡುವುದು. (ಮನುಸ್ಮೃತಿ ಅಧ್ಯಾಯ 1 ಶ್ಲೋಕ 90).

**ಶೂದ್ರನ ಕೆಲಸ :**— ಶೂದ್ರನ ಕೆಲಸ ಒಂದು ಮಾತ್ರವಾಗಿದೆ. ಅವನು ಮೇಲಿನ ಮೂರು ವರ್ಗಕ್ಕೆ ಸೇರಿದವರ ಸೇವೆ ಮಾಡಬೇಕಾಗಿದೆ. (ಮನುಸ್ಮೃತಿ ಅಧ್ಯಾಯ 1, ಶ್ಲೋಕ 91).

ವಿಷ್ಣು ಸ್ಮೃತಿಯ ಅಧ್ಯಾಯ 1 ಶ್ಲೋಕ 10ರಲ್ಲಿ ಈ ರೀತಿ ಬರೆಯಲಾಗಿದೆ:

ಶೂದ್ರನಿಗೆ ಯಾವುದೇ ರೀತಿಯ ಪೂಜೆಯ ಹಕ್ಕು ಇರುವುದಿಲ್ಲ. ಮೂರು ವರ್ಣಗಳಿಗೆ ಸೇರಿದವರ ಸೇವೆ ಮಾಡುವುದಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವುದೇ ಇವನು ಮಾಡಬಹುದಾದ ಪೂಜೆಯಾಗಿದೆ.

ಇದೇ ರೀತಿ ಪರಾಶರ ಸ್ಮೃತಿಯ ಅಧ್ಯಾಯ–1 ಶ್ಲೋಕ 71ರಲ್ಲಿ ಈ ರೀತಿ ಬರೆದಿದೆ:

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಗಗಳಿಗೆ ಸೇರಿದವರ ಸೇವೆ ಮಾಡುವುದೇ ಶೂದ್ರನ ಸರಿಯಾದ ಧರ್ಮವಾಗಿದೆ. ಇದರ ಹೊರತು ಬೇರೆ ಏನಾದರೂ ಕೆಲಸ ಮಾಡಿದರೆ ಶೂದ್ರನಿಗೆ ಪ್ರತಿಫಲ ದೊರಕದು.

ಮನುಸ್ಮೃತಿಯ ಮೇಲೆ ಉಲ್ಲೇಖಿಸಲಾದ ಆಧಾರದಿಂದ ಬ್ರಾಹ್ಮಣನು ವೇದಗಳನ್ನು ಕಲಿಯಬಹುದೆಂದೂ ಕಲಿಸಬಹುದೆಂದೂ ವ್ಯಕ್ತಗೊಳ್ಳುತ್ತದೆ. ಕ್ಷತ್ರಿಯ ಮತ್ತು ವೈಶ್ಯ ಸಹ ವೇದಗಳನ್ನು ಓದಬಹುದು. ಆದರೆ ಶೂದ್ರನ ಕುರಿತು ಗೌತಮ ಸ್ಮೃತಿ ಅಧ್ಯಾಯ–11ರಲ್ಲಿ ಈ ರೀತಿ ಬರೆಯಲಾಗಿದೆ:

"ವೇದ ಪಠಿಸುವುದನ್ನು ಶೂದ್ರನು ಕೇಳಿದರೆ ರಾಜನು ಅವನ ಕಿವಿಗಳಿಗೆ ಸೀಸವನ್ನೂ ಮೇಣವನ್ನೂ ಕರಗಿಸಿ ತುಂಬಬೇಕು. ಶೂದ್ರನು ವೇದಮಂತ್ರದ ಉಚ್ಚಾರಣೆಯನ್ನು ಮಾಡಿದರೆ, ರಾಜ ಅವನ ನಾಲಗೆಯನ್ನು ತುಂಡರಿಸಬೇಕು. ಶೂದ್ರ ವೇದವನು ಓದಲು ಪ್ರಾರಂಭಿಸಿದರೆ ರಾಜ ಆತನನ್ನು ಕೊಲ್ಲಬೇಕು".

ಉಪಸ್ತಂಭ ಧರ್ಮಶಾಸ್ತ್ರದ ಅಧ್ಯಾಯ 8 ಶ್ಲೋಕ 12ರಲ್ಲಿ ಈ ರೀತಿ ಬರೆದಿದೆ:

"ಶೂದ್ರನ ಮನೆಯಲ್ಲಿ ಉಣ್ಣುವುದು, ಶೂದ್ರನ ಜೊತೆ ಕುಳಿತು ಕೊಳ್ಳುವುದು, ಶೂದ್ರನಿಂದ ಯಾವುದೇ ವಿದ್ಯೆ ಅಥವಾ ಜ್ಞಾನಗಳಿಸುವುದು ಪವಿತ್ರ ಮನುಷ್ಯನನ್ನು ನೀಚನನ್ನಾಗಿಯೂ ಅಶುದ್ಧನನ್ನಾಗಿಯೂ ಮಾರ್ಪಡಿಸುತ್ತದೆ."

ಶೂದ್ರನ ಏಕಮಾತ್ರ ಕೆಲಸ ತ್ರಿವರ್ಣಕ್ಕೆ ಸೇರಿದವರ ಸೇವೆ ಮಾಡುವುದೆಂದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಆದರೆ ಇಂತಹ ನಿಷ್ಠಾವಂತ ಸೇವಕನಾದ ಶೂದ್ರನಿಗೆ ಯಾವ ರೀತಿ ಆಹಾರ ಕೊಡಬೇಕೆಂಬುದರ ಕುರಿತು ಉಪಸ್ತಂಭ ಧರ್ಮ ಶಾಸ್ತ್ರ ಅಧ್ಯಾಯ 9 ಶ್ಲೋಕ 34ರಲ್ಲಿ ಈ ರೀತಿ ಬರೆಯಲಾಗಿದೆ:

"ಬ್ರಾಹ್ಮಣನ ಸೇವೆ ಮಾಡುವ ಶೂದ್ರನಿಗೆ ಆಹಾರ ನೆಲದ ಮೇಲೆ ಹಾಕಿಕೊಡಬೇಕು......"

ಈ ಶ್ಲೋಕದ ಮುಂದಿನ ಭಾಗದಲ್ಲಿ ಶೂದ್ರನನ್ನು ಅವಹೇಳನ ಮಾಡಲು ಉಪಯೋಗಿಸಿದ ಶಬ್ದಗಳು ಇಲ್ಲಿ ಪುನರಾವರ್ತಿಸಲು ಯೋಗ್ಯವಾಗಿಲ್ಲ.

ಶೂದ್ರನ ಸ್ವತ್ತಿನ ಕುರಿತು ಮನುಸ್ಮೃತಿ ಅಧ್ಯಾಯ 8ರಲ್ಲಿ ಈ ರೀತಿ ಬರೆಯಲಾಗಿದೆ:

"ಬ್ರಾಹ್ಮಣ ಯಾವುದೇ ಶಂಕೆಯಿಲ್ಲದೆ ಶೂದ್ರನ ಸ್ವತ್ತನ್ನೂ ಸಂಪತ್ತನ್ನೂ ತೆಗೆದುಕೊಳ್ಳಬಹುದು. ಶೂದ್ರನಿಗೆ ಸ್ವಂತವಾಗಿ ಯಾವುದೇ ಸಂಪತ್ತಿಗೆ ಅಧಿಕಾರವಿಲ್ಲ, ಅವನದೆಲ್ಲವೂ ಅವನ ಒಡೆಯನಾದ ಬ್ರಾಹ್ಮಣನದಾಗಿದೆ"

ವೈದಿಕ ಧರ್ಮಶಾಸ್ತ್ರಗಳು ಶೂದ್ರರ ಕುರಿತು ಈ ರೀತಿಯ ಉಪದೇಶ ನೀಡುತ್ತಿರುವಾಗ ಬಡ ಶೂದ್ರರು ಬೇರೆ ಯಾವುದಾದರೂ ಧರ್ಮಾವಲಂಬಿಗಳಾಗದೆ ಇರಲು ಬೇರೆ ನಿವೃತ್ತಿಯೇನಿದೆ ?

ಭಾರತದಲ್ಲಿ ಈ ವರ್ಗಕ್ಕೆ ಸೇರಿದವರು ಎಷ್ಟೋ ಕೋಟಿಗಳಷ್ಟಿದ್ದಾರೆ. ಅವರ ಜೊತೆ ಈ ರೀತಿಯ ನಿಂದ್ಯ ನಡೆವಳಿಕೆ ಇಂದಿನಿಂದಲ್ಲ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಭಾರತದ ವಿಭಜನೆಗೆ ಮೊದಲು ನಾನು ಡೆಲ್ಲಿಯ ಅಹ್ಮದೀ ಬಾಂಧವರ ಜೊತೆ ಡಾಕ್ಟರ್ ಅಂಬೇಡ್ಕರ್‌ರವರನ್ನು ಹಲವು ಬಾರಿ ಭೇಟಿಯಾಗಿದ್ದೆನು. ಡಾಕ್ಟರ್ ಅಂಬೇಡ್ಕರ್ ಹರಿಜನರ ನಾಯಕರಾಗಿದ್ದು ಇಸ್ಲಾಮಿನ ಸಮಾನತೆಯ ತತ್ವಗಳಿಂದ ಬಹಳ ಪ್ರಭಾವಿತರಾಗಿದ್ದರು. ಅವರು ಪವಿತ್ರ ಖುರ್‌ಆನಿನ ಹಲವಾರು ವಚನಗಳನ್ನು ತಮ್ಮ ನೋಟ್‌ಬುಕ್ಕಿನಲ್ಲಿ ಬರೆದಿದ್ದರು. ಅವುಗಳಲ್ಲಿ ಒಂದು ವಚನ ಇದಾಗಿತ್ತು:

ಯಾ ಅಯ್ಯುಹನ್ನಾಸು ಇನ್ನಾ ಖಲಖ್ನಾಕುಮ್ ಮಿನ್ ದಕರಿನ್ ವ ಉನ್ಸಾ ವ ಜಅಲ್ನಾಕುಮ್ ಶುವೂಬನ್ ವ ಖಬಾಯಿಲ ಲಿತಆರಫೂ ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್ಕಾಕುಮ್. (49:14).

(ಓ ಜನರೇ ನಾವು ನಿಮ್ಮನ್ನು ಪುರುಷ ಮತ್ತು ಸ್ತ್ರೀಯಿಂದ ಸೃಷ್ಟಿಸಿದೆವು; ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಪಂಗಡಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿದೆವು. ನಿಮ್ಮ ಪೈಕಿ ಅತ್ಯಂತ ದೈವಭಕ್ತನೇ ಅತಿ ಶ್ರೇಷ್ಠನು).

ಎಲ್ಲಾ ಜನರು ತಂದೆ ತಾಯಿಗಳಿಂದ ಜನಿಸಿದವರಾಗಿದ್ದು ಅವರೆಲ್ಲರೂ ಮನುಷ್ಯರೆಂಬ ನೆಲೆಯಲ್ಲಿ ಸಮಾನರಾಗಿದ್ದು ಸಮಾನ ಸ್ಥಾನವನ್ನು ಹೊಂದಿರುತ್ತಾರೆ. ಗುಂಪುಗಳೂ ಗೋತ್ರಗಳೂ ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ಮಾತ್ರವಾಗಿವೆ. ದೇವನ ಸನ್ನಿಧಿಯಲ್ಲಿ ಮನುಷ್ಯರ ಪೈಕಿ ಆದರಕ್ಕೆ ಅರ್ಹನು ಸತ್ಕರ್ಮಿಯೂ ಭಯ ಭಕ್ತಿಯುಳ್ಳವನೂ ಆಗಿದ್ದಾನೆ.

ಇಸ್ಲಾಮಿನಲ್ಲಿ ಜನರಿಗೆ ಯಾವುದೇ ಉಚ್ಚ ನೀಚ ಸ್ಥಾನವಿಲ್ಲ. ಮನುಷ್ಯನೆಂಬ ನೆಲೆಯಲ್ಲಿ ಒಬ್ಬ ಮನುಷ್ಯನಿಗೆ ಇನ್ನೊಬ್ಬನ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ. ಇಸ್ಲಾಮ್ ಸಮಾನತೆಯ ಉಪದೇಶ ನೀಡುವುದರ ಜೊತೆ ಅದನ್ನು ಆಚರಣೆಯಲ್ಲೂ ತಂದಿತು. ಇಸ್ಲಾಮ್ ಧರ್ಮ ಸ್ವೀಕರಿಸಿದ ಎಲ್ಲಾ ಮುಸ್ಲಿಮರಿಗೂ ದೈವ ಗ್ರಂಥವಾದ ಪವಿತ್ರ ಖುರ್‌ಆನ್ ಪಾರಾಯಣ ಮಾಡಲು ಸಮಾನ ಅಧಿಕಾರವಿದೆಯಲ್ಲದೆ ಮುಸ್ಲಿಮ್ ಗಂಡು, ಹೆಣ್ಣು, ಮಗು, ವೃದ್ಧ ಮತ್ತು ಯುವಜನರು ಅದನ್ನು ಪಠಿಸಲೇ ಬೇಕೆಂಬ ಒತ್ತಾಯವಿದೆ.

ಇಸ್ಲಾಮ್ ಮಾನುಷಿಕ ಸಮಾನತೆಯನ್ನು ವರ್ತನೆಯಲ್ಲೂ ನಂಬಿಕೆಯಲ್ಲೂ ಪ್ರದರ್ಶಿಸುತ್ತಿದೆ. ಪ್ರಾರ್ಥನೆ ಮಾಡುವಾಗ ಎಲ್ಲಾ ವಿಶ್ವಾಸಿಗಳು ಸಮಾನ ಸ್ಥಾನ ಪಡೆಯುತ್ತಾರೆ. ಒಬ್ಬ ಕವಿ ಹೇಳಿದಂತೆ:

ಏಕ್ ಹೀ ಸಫ್‌ಮೇ ಖಡೇ ಹೋಗಯೇ
ಮಹ್ಮೂದೋ ಇಯಾಝ್
ನ ಕೋಯಿ ಬಂಧ ರಹಾ ನ ಬಂಧ ನವಾಝ್.
[ಒಂದೇ ಸಾಲಿನಲ್ಲಿ ನಿಂತರು ಮಹ್ಮೂದ್ (ಬಾದಶಹ) ಮತ್ತು ಇಯಾಝ್ (ಗುಲಾಮ)

ಆಗ ಇವರ ಪೈಕಿ ಯಾರೂ ಗುಲಾಮನಲ್ಲ
ಯಾರೂ ಒಡೆಯನೂ ಅಲ್ಲ].

ಒಂದು ಸಂದರ್ಶನದ ಸಮಯದಲ್ಲಿ ಡಾಕ್ಟರ್ ಅಂಬೇಡ್ಕರ್ ಈ ರೀತಿ ಹೇಳಿದರು: "ಇಸ್ಲಾಮ್ ಧರ್ಮದ ಸಮಾನತೆಯ ವೈಶಿಷ್ಟತೆಯನ್ನು ಮಹಾತ್ಮಾ ಗಾಂಧೀಜಿಯವರು ಅಂಗೀಕರಿಸಿರುವರು. ಮಹಾತ್ಮಾ ಗಾಂಧೀಜಿಯವರು ದಕ್ಷಿಣ ಆಫ್ರಿಕಕ್ಕೆ ಹೋದಾಗ ಅಲ್ಲಿ ಹರಿಜನರಲ್ಲಿ ಇಸ್ಲಾಮ್ ಧರ್ಮ ಬಹಳ ಹೆಚ್ಚು ಹಬ್ಬಿರುವುದಾಗಿ ಕಂಡರು. ಇಸ್ಲಾಮ್ ಧರ್ಮದ ಸಮಾನತೆಯ ತತ್ವದಿಂದಾಗಿಯೇ ಆ ಧರ್ಮ ಅಲ್ಲಿ ಹಬ್ಬಲು ಕಾರಣವೆಂದು ಅವರು ಕಂಡರು. ದಕ್ಷಿಣ ಆಫ್ರಿಕದಲ್ಲಿ ನಿಮ್ನ ಜಾತಿಯೆಂದು ಪರಿಗಣಿಸಲ್ಪಡುವ ಝುಲು ಜನರು ಮುಸ್ಲಿಮರಾಗಿ ಪರಿವರ್ತನೆಗೊಂಡಾಗ ಒಂದೇ ಪಾತ್ರೆಯಲ್ಲಿ ಮುಸ್ಲಿಮರ ಜೊತೆ ತಿನ್ನುವುದನ್ನೂ ಕುಡಿಯುವುದನ್ನೂ ಅವರು ಕಂಡರು." ಈ ರೀತಿ ಮಾತನ್ನು ಮುಂದುವರಿಸುತ್ತಾ "ಯಾವುದಾದರೂ ಧರ್ಮ ನೈಜವಾದ ಸಮಾನತೆಯನ್ನು ಸ್ಥಾಪಿಸಿದ್ದರೆ ಅದು ಇಸ್ಲಾಮ್ ಧರ್ಮವಾಗಿದೆ. ಇದೇ ಧರ್ಮದಲ್ಲಿ ಪ್ರವೇಶಿಸಿದರೆ ನಮಗೆ ಸಹ ಮೋಕ್ಷ ಸಿಗುವುದು" ಎಂದು ಹೇಳಿದ್ದರು.

1947ರ ದೇಶ ವಿಭಜನೆಯ ನಂತರ ವಿವಿಧ ಉದ್ದೇಶಗಳನ್ನು ಮುಂದಿರಿಸಿಕೊಂಡು ಡಾಕ್ಟರ್ ಅಂಬೇಡ್ಕರ್ ಇಸ್ಲಾಮ್ ಧರ್ಮಕ್ಕೆ ಬದಲಾಗಿ ಬೌದ್ಧ ಧರ್ಮಕ್ಕೆ ತಮ್ಮ ಶ್ರದ್ಧೆಯನ್ನು ತಿರುಗಿಸಿದರು. ಪತ್ರಿಕೆಗಳಲ್ಲಿ ಈ ರೀತಿಯ ವಾರ್ತೆಗಳು ಬಂದಾಗ ನಾನು ಡಾಕ್ಟರ್ ಅಂಬೇಡ್ಕರ್‌ರನ್ನು ಭೇಟಿಯಾದೆನು. ಅವರು ಈ ರೀತಿ ಹೇಳಿದರು: "ಈಗ ಪರಿಸ್ಥಿತಿಯಲ್ಲಿ ತುಂಬಾ ಬದಲಾವಣೆಗಳು ಉಂಟಾಗಿವೆ. ಕಾಂಗ್ರೆಸ್ ಸರಕಾರ ಅಸ್ಪೃಶ್ಯತೆಯನ್ನೂ ಉಚ್ಚ ನೀಚ ಮನೋಭಾವವನ್ನೂ ನೀಗಿಸಲು ಬಹಳ ಪ್ರಯತ್ನಿಸುತ್ತಿದೆ. ನಮ್ಮ ವರ್ಗಕ್ಕೆ ಸೇರಿದವರಿಗೆ ಧಾರಾಳ ರಿಯಾಯಿತಿಗಳನ್ನು ನೀಡಲಾಗಿದೆ. ನಾವು ಈ ಸಂದರ್ಭದಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿರುವೆವೆಂದು ಪ್ರಕಟಿಸಿದರೆ ಈ ರಿಯಾಯಿತಿಗಳು ರದ್ದುಗೊಳ್ಳುವುವು. ಆದುದರಿಂದ ನಾನು ಬುದ್ಧ ಧರ್ಮ ಸ್ವೀಕರಿಸುವ ಆಲೋಚನೆ ಮಾಡಿರುವೆನು. ಈ ಧರ್ಮ ಸ್ವೀಕಾರ ಮಾಡುವುದರಿಂದ ನಾವು ಹಿಂದೂ ಸಮಾಜದಲ್ಲಿಯೇ ಇದ್ದಂತಾಗುವುದು ಮತ್ತು ಬೌದ್ಧ ಧರ್ಮದ ಸಮಾನತೆಯ ತತ್ವದ ಉಪಯೋಗವೂ ನಮಗೆ ಆಗುವುದು." ನಾನು ಆಗ ಅವರೊಡನೆ ಹೀಗೆ ಹೇಳಿದೆ: "ನೀವು ಬುದ್ಧ ಧರ್ಮದಲ್ಲಿ ಪ್ರವೇಶಿಸಿದರೂ, ನೀವು ಜೈನ ಧರ್ಮ ಅಥವಾ ಹಿಂದುಗಳ ಇನ್ನಾವುದೇ ಧರ್ಮದಲ್ಲಿ ಪ್ರವೇಶಿಸಿದರೂ ನೀವು ಆ ಧರ್ಮಕ್ಕೆ ಸೇರಿದವರ ಜೊತೆ ಸಮಾನರಾಗಲು ನಿಮಗೆ ಸಾಧ್ಯವಿಲ್ಲ. ಅದು ಇಸ್ಲಾಮ್ ಧರ್ಮದ ಮಾತ್ರ ವೈಶಿಷ್ಟ್ಯವಾಗಿದೆ. ಅದು ಎಲ್ಲಾ ಮನುಷ್ಯರಿಗೆ ಸಮಾನತೆಯನ್ನು ನೀಡುತ್ತದೆ." ಡಾಕ್ಟರ್ ಅಂಬೇಡ್ಕರ್ ತಾನು ಬೌದ್ಧ ಧರ್ಮ ಪ್ರವೇಶ ಮಾಡಿದ ಪ್ರಕಟನೆಯನ್ನು ನೀಡಿದರು ಮತ್ತು ತಮ್ಮ ಅನುಯಾಯಿಗಳಿಗೆ ಬೌದ್ಧ ಧರ್ಮ ಪ್ರವೇಶಿಸಲು ಉಪದೇಶಿಸಿದರು. ಅವರ ಈ ಯೋಜನೆ ಫಲಿಸಲಿಲ್ಲ. ಬೌದ್ಧ ಮತ ಸ್ವೀಕರಿಸಿದ ಹರಿಜನರು ಎರಡನೆಯ ದರ್ಜೆಯ ಬೌದ್ಧರಾದರು ಮತ್ತು ಮೀಸಲಾತಿ ಮೊದಲಾದ ಅನುಕೂಲತೆಗಳು ಒಂದು ಚಿಕ್ಕ ವರ್ಗಕ್ಕೆ ಮಾತ್ರ ಸೀಮಿತವಾಯಿತು.

ಒಟ್ಟಾರೆ ಹೇಳುವುದಾದರೆ ತಮಿಳುನಾಡಿದ ಹರಿಜನರು ಇಸ್ಲಾಮ್ ಧರ್ಮ ಸ್ವೀಕರಿಸಿದುದು ಯಾವುದೇ ಆಶೆ ಆಮಿಷದ ಕಾರಣದಿಂದಾಗಿರಲಿಲ್ಲ. ಅದು ಇಸ್ಲಾಂ ಧರ್ಮದ ಆದರ್ಶ ತತ್ವಗಳಿಂದ ಮನಃಪರಿವರ್ತನೆಗೊಂಡುದರಿಂದಾಗಿದೆ. ಇತ್ತೀಚೆಗೆ ಪಾರ್ಲಿಮೆಂಟಿನ ಸದಸ್ಯರೂ ಜನತಾ ಪಾರ್ಟಿಯ ಒಬ್ಬ ನಾಯಕರೂ ಆದ ಡಾಕ್ಟರ್ ಸುಬ್ರಹ್ಮಣ್ಯ ಸ್ವಾಮಿ ಮೀನಾಕ್ಷಿಪುರಂಗೆ ಹೋಗಿ ಬಂದ ನಂತರ ನೀಡಿದ ಪತ್ರಿಕಾ ಹೇಳಿಕೆ ಬಹಳ ಮಹತ್ವವುಳ್ಳದ್ದೂ ಗಮನಾರ್ಹವೂ ಆಗಿದೆ. ಅದು ಜಾತೀಯವಾದಿಗಳಿಂದ ಪ್ರಚಾರಗೊಳಿಸಲ್ಪಡುವ ಎಲ್ಲಾ ಆರೋಪಗಳನ್ನೂ ಖಂಡಿಸುತ್ತದೆ. ಸುಬ್ರಹ್ಮಣ್ಯ ಸ್ವಾಮಿ ಈ ರೀತಿ ಹೇಳಿದುದಾಗಿ ವರದಿಯಾಗಿದೆ:

> "ನಾನು ಮೀನಾಕ್ಷಿಪುರಂನಿಂದ ಈಗ ತಾನೇ ಬಂದಿರುವೆನು. ಇಸ್ಲಾಮ್ ಮತ ಸ್ವೀಕರಿಸಿದವರನ್ನು ಕಾಣಲಿಕ್ಕಾಗಿ ನಾನು ಅಲ್ಲಿಗೆ ಹೋಗಿದ್ದೆ. ಮೀನಾಕ್ಷಿಪುರದ ಆಘಾತ ಹಿಂದೂ ಸಮಾಜ ತನ್ನ ವರ್ಣಭೇದ ನೀತಿಯನ್ನು ಕೊನೆಗೊಳಿಸುವ ಕಾರಣವಾಗಿ ಪರಿಣಮಿಸಿದರೆ ಅದೊಂದು ದೊಡ್ಡ ರಾಷ್ಟ್ರೀಯ ಸೇವೆಯಾಗುವುದು. ಆದರೆ ದುರದೃಷ್ಟವಶಾತ್ ಈ ಸಂಭವದ ಕುರಿತು ಗಾಬರಿಯ

ಈಗಿನ ಬೊಬ್ಬೆ ಇಸ್ಲಾಂ ಧರ್ಮ ಮತ್ತು ಅರಬರ ಕುರಿತು ದ್ವೇಷವನ್ನು ಹರಡುವಂತಾಗಿದೆ.

ಯಾವುದೇ ಅರಬಿ ಅಥವಾ ಮುಸ್ಲಿಂ ಸಂಘಟನೆ ಹಿಂದುಗಳಿಗೆ ಮತಾಂತರಕ್ಕಾಗಿ ಯಾವುದೇ ಲಂಚ ನೀಡಿದುದರ ಕುರಿತಾಗಲೀ ಬಲಾತ್ಕಾರ ಮಾಡಿದುದರ ಕುರಿತಾಗಲೀ ನನಗೆ ಮೀನಾಕ್ಷಿಪುರಂನಲ್ಲಿ ಯಾವುದೇ ಸಾಕ್ಷ್ಯ ದೊರೆಯಲಿಲ್ಲ. ಮೀನಾಕ್ಷಿಪುರಂ ಜನಸಂಖ್ಯೆಯ ಅರ್ಧಾಂಶದಷ್ಟು ಜನರು ಇಸ್ಲಾಂ ಮತ ಸ್ವೀಕರಿಸಲು ಕಾರಣ ಹಿಂದೂ ಸಮಾಜದ ಲೋಪದೋಷಗಳಾಗಿವೆ. ಅವರು ಹಿಂದೂ ಸಮಾಜದಲ್ಲಿರಲು ನಿರಾಕರಿಸಿರುವರು. ಮುಸ್ಲಿಮರಾಗಿ ಪರಿವರ್ತಿತರಾದ ನಂತರ ಅವರು ಹಿಂದೆ ಅನುಭವಿಸಬೇಕಾಗಿ ಬಂದ ಸಂಕಷ್ಟಗಳು ನಿವಾರಣೆಗೊಂಡುವು. ಆದುದರಿಂದಲೇ ಅವರ ಮತಪರಿವರ್ತನೆ ಯಾವುದೇ ಬಲಾತ್ಕಾರವಿಲ್ಲದೆ ಸ್ವಯಮೇಚ್ಛೆಯಿಂದ ನಡೆಯಿತು ... ನಾನು ಮೀನಾಕ್ಷಿಪುರಂಗೆಹೋದ ಹಿಂದಿನ ದಿವಸ ಹಿಂದೂ ಸಮ್ಮೇಳನ ನಡೆದಿತ್ತು. ಅಲ್ಲಿ ಗಂಭೀರ ಭಾಷಣಗಳು ನಡೆದಿದ್ದುವು. ಭ್ರಾತೃ ಭಾವನೆಯ ಪ್ರಕಟನೆಯೂ ಆಗಿತ್ತು. ಆದರೆ ಮರುದಿನ ನಾನು ಹೋದಾಗ ಅಲ್ಲಿ ಯಾರೂ ಇರಲಿಲ್ಲ. ಸಮ್ಮೇಳನದ ಯಾವುದೇ ಕುರುಹು ಇರಲಿಲ್ಲ. ಅನಂತರ ಯಾವುದೇ ಕಾರ್ಯ ಕೈಗೊಂಡ ಸೂಚನೆಯಿರಲಿಲ್ಲ. ಅಲ್ಲಿದ್ದ ಹಿಂದೂ ಹರಿಜನರು ಆ ಜನರ ಕಪಟ ವರ್ತನೆಯಿಂದ ಬೇಸತ್ತಿದ್ದರು. ಮತಾಂತರ ಯಾವುದೇ ಬಲಾತ್ಕಾರವಿಲ್ಲದೆ ಸ್ವಯಮಿಚ್ಛೆಯಿಂದ ನಡೆಯಿತೆಂದು ಆ ಹಿಂದೂ ಹರಿಜನರೇ ನನ್ನೊಡನೆ ಹೇಳಿದರು.......ಅಲ್ಲಿ ಕೆಲವು ಹಿಂದೂ ಸಂಘಟನೆಗೆ ಸೇರಿದವರು ಭಯದ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ. ನಾನು ಹಿಂದೂ ಹರಿಜನರೊಡನೆ ಸಂಭಾಷಿಸುತ್ತಿರುವಾಗ ಈ ಸಂಘಕ್ಕೆ ಸೇರಿದ ಕೆಲವರು ಅಲ್ಲಿಗೆ ತಲುಪಿದಾಗ ಆ ಹರಿಜನರು ಚದುರಿ ಹೋದರು. ಅವರು ಮಾತು ಮುಂದುವರಿಸಲು ಒಪ್ಪಲಿಲ್ಲ. ಹಿಂದೂ ಸಮಾಜ ಇಂತಹ ಜನರ ಕುರಿತು ವಿದೇಶೀಯ ಏಜೆಂಟರ ಬಗ್ಗೆ ಎಚ್ಚರಿಕೆಯಿಂದ ಇರುವಂತೇ ಜಾಗ್ರತೆಯಿಂದಿರಬೇಕಾಗುತ್ತದೆ.

ಡಾಕ್ಟರ್ ಸುಬ್ರಹ್ಮಣ್ಯಸ್ವಾಮಿಯವರ ಮೇಲಿನ ಹೇಳಿಕೆಯಿಂದ ಎಲ್ಲವೂ ಸುವ್ಯಕ್ತವಾದಂತಾಯಿತು. ಮೇಲೆ ವಿವರಿಸಿದ ಮತಾಂತರ ಅರಬರ ಅಥವಾ ಮುಸ್ಲಿಮರ ಯಾವುದೇ ಸಂಘಟನೆಯ ಕಾರಣದಿಂದಾಗಿ ಸಂಭವಿಸಲಿಲ್ಲವೆಂದು ಸ್ಪಷ್ಟವಾದಂತಾಯಿತು. ಬಲಾತ್ಕಾರ, ಲಂಚ ಅಥವಾ ಆಶೆ-ಆಮಿಷಕ್ಕೂ ಇಲ್ಲಿ ಸ್ಥಾನವಿರಲಿಲ್ಲ. ಉನ್ನತ ವರ್ಗದ ಹಿಂದುಗಳ ತಪ್ಪು ವರ್ತನೆಯಿಂದಾಗಿಯೇ ಹರಿಜನರು ಈ ಕಾರ್ಯ ಕೈಗೊಂಡಿರುವರು. ಹಿಂದೂ ಸಮಾಜ ತಮ್ಮ ಜಾತೀಯ ಪದ್ಧತಿಯನ್ನು ಕೊನೆಗೊಳಿಸುವುದರ ಕುರಿತು ಗಮನ ಹರಿಸುವುದು ಈಗ ಅತ್ಯಾವಶ್ಯವಾಗಿದೆ. ಡಾ। ಸುಬ್ರಹ್ಮಣ್ಯಸ್ವಾಮಿಯವರು ಸಹ ಇದರ ಕುರಿತು ಸೂಚಿಸಿರುವರು. ಮೂಲಭೂತವಾದ ಈ ಸಮಸ್ಯೆಯ ಕುರಿತು ಗಮನ ಹರಿಸದಂತೆ ಮಾಡಲು ಅಪಪ್ರಚಾರ ಮಾಡಲಾಗುತ್ತಿದೆ. ದೇವನು ಸತ್ಯವನ್ನು ಮರೆಮಾಚುವವರ ಕಣ್ಣು ತೆರೆಯಿಸಲಿ. ●

# ಸಂಪಾದಕರಿಗೆ ಪತ್ರ

ನಿಮ್ಮ 1981ನೇ ಮಾರ್ಚ್ ತಿಂಗಳ ಸಂಚಿಕೆ ಓದುಗರಿಗೆ ಮನಶ್ಶಾಂತಿ ನೀಡುವುದಾಗಿತ್ತು. ಯೇಸುಕ್ರಿಸ್ತರ ಜೀವನದ ಕುರಿತು ಹೊಸ ಬೆಳಕು, ಪ್ರೀತಿ, ವಿಜ್ಞಾನಗಳ ದಿಗ್ವಿಜಯ: ಅಬ್ದುಸ್ಸಲಾಂ, ಓರ್ವ ವಿಜ್ಞಾನಿಯ ಭಾರತ ಸಂದರ್ಶನ ಈ ಲೇಖನಗಳು ಚೆನ್ನಾಗಿದ್ದುವು. ಅಹ್ಮದಿಯಾ ಜಮಾಅತ್ ಹಾಗೂ ಜಮಾತೆ ಇಸ್ಲಾಮಿ ಎಂಬ ಲೇಖನ ಬೆಲೆಯುಳ್ಳದ್ದು.

ಕನ್ನಡ ಜನತೆಗೆ ಸತ್ಯದಾರಿಯನ್ನು ತೋರಿಸುವ ಈ ತ್ರೈಮಾಸ ಪತ್ರಿಕೆಯು ಮಾಸಪತ್ರಿಕೆ ಆಗಲೆಂದು ನಾನು ದೇವನಲ್ಲಿ ಪ್ರಾರ್ಥಿಸುತ್ತೇನೆ.

ಗಂದಿಗವಾಡ —ಮಂಜೂರ್ ಅಹ್ಮದ್

□

ನನ್ನ ಅನುಭವದಂತೆ ಈಗೀಗ ಯುಗರಶ್ಮಿಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಆಧ್ಯಾತ್ಮಿಕ ಹಸಿವೆಯಿಂದ ನರಳುತ್ತಿರುವ ಮೃಗತುಲ್ಯರಾದ ಮಾನವರಿಗೆ ಶುಚಿರುಚಿಯಾದ ಅಧ್ಯಾತ್ಮ ಭೋಜನವನ್ನು ನೀಡಿ ತೃಪ್ತಿಪಡಿಸುವಂತಹದ್ದಾಗಿದೆ. ದೈವಾಸ್ತಿತ್ವ, ಪ್ರವಾದಿಗಳ ಬೋಧನ, ಮಹಾತ್ಮರ ಕಷ್ಟಾನುಭವ, ಮತಸೌಹಾರ್ದತೆ, ಜಮಾತೆ ಇಸ್ಲಾಮಿ ಸಿದ್ಧಾಂತದ ನಿರರ್ಥಕತೆ, ಏಕದೇವಾರಾಧನೆ ಎಂಬೀ ವಿಷಯಗಳ ಕುರಿತು ಯುಗರಶ್ಮಿಯಲ್ಲಿ ಪ್ರಕಟವಾಗುವ ಲೇಖನಗಳು ನಿಜವಾಗಿಯೂ ಶ್ಲಾಘನೀಯವೂ ಈ ಕಾಲದಲ್ಲಿ ಚಿಂತನೀಯವೂ ಆಗಿವೆ. ಇಸ್ಲಾಮಿನ ಸುಂದರ ರೂಪವನ್ನು ಯುಗರಶ್ಮಿಯ ಮೂಲಕ ಜನಕೋಟಿಗೆ ತಲುಪಿಸುವ ನಿಮ್ಮ ಕಾರ್ಯದಲ್ಲಿ ಶೈತಾನನ ಯಾವುದೇ ಸಾಹಸವು ಪರಾಜಿತಗೊಳ್ಳಲೆಂದು ಪ್ರಾರ್ಥಿಸುತ್ತಾ ಯುಗರಶ್ಮಿಗೆ ಶುಭವನ್ನು ಕೋರುತ್ತೇನೆ. ಧಾರ್ಮಿಕಾಂಧಕಾರದಲ್ಲಿ ತೊಳಲುತ್ತಿರುವ ಈ ಯುಗದ ಮನುಷ್ಯಮನಸ್ಸನ್ನು ಯುಗರಶ್ಮಿಯು ತನ್ನ ಆಧ್ಯಾತ್ಮಿಕ ರಶ್ಮಿಯಿಂದ ಪ್ರಕಾಶಿತಗೊಳಿಸಲೆಂದೂ ಜಗತ್ತಿನಲ್ಲಿ ಸುಖಶಾಂತಿಯು ನಲಿದಾಡಲೆಂದೂ ಪ್ರಾರ್ಥಿಸುತ್ತೇನೆ,

ವಣಗೂರು —ಕೆ. ಯಂ. ಜಲೀಲ್ ಅಹ್ಮದ್.

□

ತಮ್ಮ ಆಗಸ್ಟ್ 81ರ ಯುಗರಶ್ಮಿಯಲ್ಲಿ ಮೂಡಿಬಂದ "ನುಡಿಮುತ್ತು"ಗಳು ತುಂಬಾ ಅರ್ಥಗರ್ಭಿತವಾಗಿದ್ದು ನಿಜವಾಗಿಯೂ ಮನುಷ್ಯ ಬಾಳಿಗೆ ಇದೊಂದು ಜ್ಞಾನದೀವಿಗೆ ಹಾಗೂ ಜ್ಞಾನಾಮೃತವಾಗಿ ಪರಿಣಮಿಸಿದೆ. ಈ ನುಡಿಮುತ್ತುಗಳನ್ನು ಓದುವುದೆಂದರೆ ಜೇನುತೊಟ್ಟು ಬಾಯಲ್ಲಿ ಬಿಟ್ಟಂತೇ ಸರಿ. ಈ ನುಡಿಮುತ್ತುಗಳು ಒಂದು ಪುಟಕ್ಕೆ ವಿಸ್ತಾರವಾಗಲಿ.

ಏಳನೆ ವರ್ಷದಲ್ಲಿ ಮುನ್ನುಗ್ಗುತ್ತಿರುವ "ಯುಗರಶ್ಮಿ"ಗೆ ಅಭಿನಂದನೆಗಳು. ಹರಿವ ನೀರಂತೆ ಈ ಪತ್ರಿಕೆಯ ಕೀರ್ತಿ ದಿನೇ ದಿನೇ ಇನ್ನು ಮುಂದೆಯೂ ಜನಪ್ರಿಯವಾಗಲೆಂದು ಶುಭ ಹಾರೈಕೆ.

ವಿಜಾಪುರ —ಇ. ರಾ.

# ಒಂದು ದಿವ್ಯ ದರ್ಶನ ಮತ್ತು ಅದರ ವ್ಯಾಖ್ಯಾನ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು 1906 ಸೆಪ್ಟೆಂಬರ್ 4ರಂದು ಕಂಡ ಒಂದು ದರ್ಶನ, 1906 ಸೆಪ್ಟಂಬರ್ 6ರ "ಅಲ್‌ಹಕಂ", 1906 ಸೆಪ್ಟೆಂಬರ್ 10ರ "ಬದರ್" ಎಂಬೀ ಪತ್ರಿಕೆಗಳಲ್ಲಿ ಈ ರೀತಿ ವರದಿಯಾಗಿದೆ:

ಆ ಮಹಾಪುರುಷ ಹೇಳಿದರು: "ಅದೃಶ್ಯ ಲೋಕದಿಂದ ಚಿನ್ನದ ಕಸೂತಿ ಕೆಲಸವಿರುವ ಒಂದು ಜುಬ್ಬ ನನಗೆ ನೀಡಲ್ಪಟ್ಟುದಾಗಿ ಈ ದಿನ ನನಗೆ ಒಂದು ಸ್ವಪ್ನ ದರ್ಶನವಾಯಿತು. ಓರ್ವ ಚೋರನು ಅದನ್ನೆತ್ತಿ ಓಡಿಹೋದನು. ಅವನನ್ನು ಬೆನ್ನಟ್ಟಿ ಯಾರೋ ಒಬ್ಬ ಓಡಿ ಅವನನ್ನು ಹಿಡಿದು ಅದನ್ನು ವಾಪಾಸು ತಂದನು. ಅನಂತರ ಆ ಜುಬ್ಬ "ತಫ್ಸೀರ್ ಕಬೀರ್" ಎಂದು ಹೇಳಲ್ಪಡುವ ಒಂದು ಗ್ರಂಥವಾಗಿ ರೂಪಾಂತರಗೊಂಡಿತು. ಈ ಗ್ರಂಥವನ್ನು ನಿರ್ಮೂಲನ ಮಾಡುವ ಉದ್ದೇಶದಿಂದಾಗಿತ್ತು ಆ ಕಳ್ಳನು ಅದನ್ನು ಕಸಿದುಕೊಂಡು ಓಡಿದ್ದೆಂದು ನನಗೆ ಮನವರಿಕೆಯಾಯಿತು.

ಪ್ರಸ್ತುತ ದರ್ಶನದ ವ್ಯಾಖ್ಯಾನವಾಗಿ ಆ ಮಹಾತ್ಮರು ಹೀಗೆ ಹೇಳಿದರು: "ಕಳ್ಳ ಎಂಬುದರ ತಾತ್ಪರ್ಯ ಸೈತಾನ. ನಮ್ಮ ಸಾರೋಪದೇಶಗಳನ್ನು ಲೋಕದ ದೃಷ್ಟಿಯಿಂದ ಮರೆಮಾಚಲು ಸೈತಾನ ಉದ್ದೇಶಿಸುತ್ತಾನೆ. ಆದರೆ ಹಾಗೆ ಸಂಭವಿಸಲಿಕ್ಕಿಲ್ಲ. ಜುಬ್ಬದ ರೂಪದಲ್ಲಿ ಗೋಚರಿಸಲ್ಪಟ್ಟ ಆ 'ತಫ್ಸೀರ್ ಕಬೀರ್' ಗ್ರಂಥ ನಮ್ಮ ಪ್ರಶಸ್ತಿಗೂ ಪ್ರಖ್ಯಾತಿಗೂ ಭೂಷಣವಾಗಿರಬಹುದಾಗಿದೆ."

ವಾಗ್ದತ್ತ ಮಹ್ದಿಯ ವಾಗ್ದತ್ತ ಪುತ್ರ ಹಾಗೂ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಆಗಿದ್ದ ಹಝ್ರತ್ ಅಲ್‌ಹಾಜ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರವರಿಂದ ವಿರಚಿತವಾದ ಖುರ್‌ಆನ್ ಭಾಷಾಂತರ ಗ್ರಂಥಕ್ಕೆ ಮುಟ್ಟುಗೋಲು ಹಾಕಿದ ಪಾಕಿಸ್ತಾನದ ಪಂಜಾಬ್ ಸಂಸ್ಥಾನ ಸರಕಾರದ ಒಂದು ಪ್ರಕಟನೆ ಗೆದುರಾಗಿ ಇಂದು ಜಗತ್ತಿನಾದ್ಯಂತವಿರುವ ಅಹ್ಮದಿಯರು ಪ್ರತಿಭಟನೆಯನ್ನು ಸೂಚಿಸುತ್ತಿದ್ದಾರೆ.

ಪ್ರಸ್ತುತ ದರ್ಶನದ ಪೈಶಾಚಿಕ ಶಕ್ತಿಗಳ ನಿಶ್ಚಿತ ಪರಾಭವವನ್ನು ಬದುಕಿರುವವರು ಕಂಡುಕೊಳ್ಳಲಿ.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"...... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore–575 001.

# ★ ಅಹ್ಮದಿಯಾ ವಾರ್ತೆಗಳು ★

## ಫ್ರೆಂಚ್, ಇಟೆಲಿಯನ್, ಸ್ಪಾನಿಷ್, ರಶ್ಯನ್, ಚೀನೀ ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರ

ಅಹ್ಮದಿಯಾ ಸಂಘಟನೆಯ ವತಿಯಿಂದ ಮುಂದಿನ ಕೆಲವೇ ವರ್ಷಗಳೊಳಗೆ ಫ್ರೆಂಚ್, ಇಟೆಲಿಯನ್, ಸ್ಪಾನಿಷ್, ರಶ್ಯನ್, ಚೀನೀ ಎಂಬೀ ಭಾಷೆಗಳಲ್ಲಿ ಖುರ್ ಆನಿನ ಭಾಷಾಂತರ ಪ್ರಕಾಶನಗೊಳಿಸಲು ಯೋಜನೆ ಇದೆಯೆಂದು ಅಹ್ಮದಿಯಾ ಸಂಘಟನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್‌ರವರು ಜನವರಿ 2ರಂದು ರಬ್ವಾದ ಮಸ್ಜಿದ್ ಅಖ್ಸಾದಲ್ಲಿ ಮಾಡಿದ ತನ್ನ ಖುತ್ಬಾ ಭಾಷಣದಲ್ಲಿ ಬಹಿರಂಗಪಡಿಸಿದರು. ಈ ಯೋಜನೆಯಿಂದ ಲೋಕದ ಸುಮಾರು 80 ಶೇಕಡಾ ಜನರಿಗೆ ಖುರ್‌ಆನಿನ ಸಂದೇಶವನ್ನು ತಲಪಿಸುವಂತಾಗುವುದೆಂದು ಅವರು ಹೇಳಿದರು.

## ಕಲ್ಕತ್ತ ಪುಸ್ತಕ ಮೇಳದಲ್ಲಿ ಅಹ್ಮದಿಯಾ ಬುಕ್‌ಸ್ಟಾಲ್

ಕಳೆದ ನಾಲ್ಕು ವರ್ಷಗಳಲ್ಲಿ ಏರ್ಪಡಿಸಿದಂತೆ ಈ ವರ್ಷ ಸಹ ಜನವರಿ–ಫೆಬ್ರುವರಿ ತಿಂಗಳಲ್ಲಿ ಕಲ್ಕತ್ತದಲ್ಲಿ ನಡೆದ ಪುಸ್ತಕ ಮೇಳದಲ್ಲಿ ಒಂದು ಅಹ್ಮದಿಯಾ ಬುಕ್ ಸ್ಟಾಲನ್ನು ತೆರೆಯಲಾಗಿತ್ತು. ವಿವಿಧ ಭಾಷೆಗಳಲ್ಲಿರುವ ಅಹ್ಮದಿಯಾ ಸಾಹಿತ್ಯಗಳನ್ನು ಮಾತ್ರವಲ್ಲ ಅಹ್ಮದೀಯ ಮಸೀದಿ ಹಾಗೂ ಪ್ರಚಾರ ಕೇಂದ್ರಗಳ ಬಗ್ಗೆ ಒಂದು ವಸ್ತು ಪ್ರದರ್ಶನವನ್ನು ಸಹ ಅಲ್ಲಿ ಏರ್ಪಡಿಸಲಾಗಿತ್ತು. ಸಾವಿರಾರು ಕಿರುಹೊತ್ತಗೆಗಳನ್ನು ಸಂದರ್ಶಕರಿಗೆ ವಿತರಣೆ ಮಾಡಲಾಯಿತು. ಈ ಪುಸ್ತಕ ಮೇಳವನ್ನು ಸುಮಾರು 10 ಲಕ್ಷ ಮಂದಿ ಸಂದರ್ಶಿಸಿರುವರೆಂದು ಅಂದಾಜು ಮಾಡಲಾಗಿದೆ.

## ಕೇರಂಗ್‌ನಲ್ಲಿ ಅಹ್ಮದಿಯಾ ಸಮ್ಮೇಳನ

ಕೇರಂಗ್ (ಒರಿಸ್ಸಾ) ಅಹ್ಮದಿಯಾ ಸಂಘಟನೆಯ 17ನೇ ವಾರ್ಷಿಕ ಸಮ್ಮೇಳನವು ಫೆಬ್ರುವರಿ ತಿಂಗಳ ತಾ. 27 ಮತ್ತು 28ರಂದು ವಿಜಯಕರವಾಗಿ ನಡೆಯಿತು. ಈ ಸಮ್ಮೇಳನದಲ್ಲಿ ಮಿರ್ಝಾ ವಸೀಂ ಅಹ್ಮದ್ ಸಾಹೇಬ್, ಮೌಲಾನಾ ಬಶೀರ್ ಅಹ್ಮದ್ ದೆಹ್ಲವಿ, ಮುಹಮ್ಮದ್ ಕರೀಮುಲ್ಲಾ ನೌಜವಾನ್ ಮಾತ್ರವಲ್ಲ, ಒರಿಸ್ಸಾದ ಸ್ಟೇಟ್ ಸಚಿವ ಹಬೀಬುಲ್ಲಾ ಖಾನ್ ಸಹ ಭಾಗವಹಿಸಿದರು.

ಪ್ರಸ್ತುತ ಸಮ್ಮೇಳನದ ಬಗ್ಗೆ ಒಂದು ರೇಡಿಯೋ ಕಾರ್ಯಕ್ರಮವನ್ನು ಅಲ್ ಇಂಡಿಯಾ ರೇಡಿಯೋ ಮಾರ್ಚ್ 1 ಮತ್ತು 5 ರಂದು ಬಿತ್ತರಿಸಿತು.

## ಮೊರಿಷ್ಯಸ್‌ನಲ್ಲಿ ಅಹ್ಮದಿಯಾ ಎಕ್ಸಿಬಿಷನ್

ಮೊರಿಷ್ಯಸ್ ಅಹ್ಮದಿಯಾ ಸಂಘಟನೆಯ ವತಿಯಿಂದ ಫೆಬ್ರುವರಿ 23ರಿಂದ 28ರವರೆಗೆ ಮೊರಿಷ್ಯಸ್‌ನ ಅತ್ಯಂತ ವಿಶಾಲ ಹಾಲ್ "ಪ್ಲಾಝಾ" ರೋಸ್‌ಹಿಲ್‌ನಲ್ಲಿ "ಇಸ್ಲಾಂ ಹಾಗೂ ವಾಗ್ದತ್ತ ಮಸೀಹರ ಆಗಮನ"ಎಂಬ ಒಂದು ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಇಸ್ಲಾಂ, ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರ್ ಮತ್ತು ಖಲೀಫರ ವರ್ಣನೆ, ವಾಗ್ದತ್ತ ಲೋಕೋದ್ಧಾರಕನ ಆಗಮನದ ಕುರಿತು ಮತಗ್ರಂಥಗಳಲ್ಲಿ ಉಲ್ಲೇಖಿಸಲಾದ ಭವಿಷ್ಯ ನುಡಿಗಳು, ಹಝ್ರತ್ ಮಿರ್ಝಾ ಗುಲಾಂ ಅಹ್ಮದರ ಸತ್ಯಕ್ಕೆ ಸಾಕ್ಷ್ಯಾಧಾರಗಳು, ಯೇಸುಕ್ರಿಸ್ತರು ಶಿಲುಬೆಯ ಮೇಲಿನ ಮರಣದಿಂದ ವಿಮೋಚನೆಗೊಂಡುದು, ಯೇಸುಕ್ರಿಸ್ತರ ಪವಿತ್ರ ಬಟ್ಟೆ, ಕಾಶ್ಮೀರದಲ್ಲಿ ಯೇಸುಕ್ರಿಸ್ತರ ಪ್ರಕೃತಿ ಸಹಜವಾದ ಮರಣ, ಸ್ಪೈನ್‌ನಲ್ಲಿ ಅಹ್ಮದಿಯಾ ಮಸೀದಿ, ಅಹ್ಮದಿಯಾ ಜಮಾಅತಿನ ವತಿಯಿಂದ ವಿವಿಧ ಭಾಷೆಗಳಲ್ಲಿ ಪ್ರಕಾಶಿತವಾದ ಖುರ್‌ಆನ್ ಭಾಷಾಂತರಗಳು ಮತ್ತು ಅಹ್ಮದಿಯಾ ಸಾಹಿತ್ಯಗಳು ಪ್ರದರ್ಶಿಸಲ್ಪಟ್ಟವು.

ಸಾವಿರಾರು ಮಂದಿ ಪ್ರದರ್ಶನವನ್ನು ಸಂದರ್ಶಿಸಿದರು.

## ಟೊರೊಂಟೋದಲ್ಲಿ ಯುವಜನ ಸಭೆ

ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ (ಅಹ್ಮದಿ ಯುವಜನ ಸಂಘ)ದ ವತಿಯಿಂದ ಪ್ರಥಮ ವಾರ್ಷಿಕ ಕೂಟವು ಮಾರ್ಚ್ 14 ಮತ್ತು 15ರಂದು ಟೊರೊಂಟೋ (ಕೆನಡಾ)ದಲ್ಲಿ ಜರಗಿತು. ಅಪರಾಹ್ನ ಹೊತ್ತಿನಲ್ಲಿ ವಿವಿಧ ಭಾಷಣಗಳು ನಡೆದುವು. ಸಂಜೆ ಕ್ರೀಡಾ ಕೂಟವನ್ನು ಏರ್ಪಡಿಸಲಾಗಿತ್ತು. ಮೌಲಾನಾ ಮುನೀರುದ್ದೀನ್ ಶಮ್ಸ್‌ರವರ ನೇತೃತ್ವದಲ್ಲಿ ರಾತ್ರಿ ಸಾಮೂಹಿಕವಾಗಿ "ತಹಜ್ಜುದ್" ನಮಾಜು ನಡೆಯಿತು.

## ಶ್ರೀಲಂಕಾದಲ್ಲಿ ವಾರ್ಷಿಕ ಸಮ್ಮೇಳನ

ಮೇ 3ರಂದು ನಗಂಬೋದಲ್ಲಿ ಅಖಿಲ ಶ್ರೀಲಂಕಾ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಸಮಾವೇಶಗೊಂಡಿತು. ವಿದೇಶ ಪರ್ಯಟನೆಯಲ್ಲಿದ್ದ ಮಿರ್ಝಾ ಮುಬಾರಕ್ ಅಹ್ಮದ್ ಸಾಹೇಬ್ (ವಕೀಲುಲ್ ಆಲಾ ವ ತಬ್ಶೀರ್)ರವರು ಸಮ್ಮೇಳನದಲ್ಲಿ ಪಾಲುಗೊಂಡಿದ್ದರು. ಮೇ 2ರಂದು ಮಹಿಳಾ ಸಮ್ಮೇಳನ ಸಹ ಜರಗಿತು.

## ಪೋಪರಿಗೆ ಅಹ್ಮದಿಯಾ ಸಾಹಿತ್ಯಗಳ ಕಾಣಿಕೆ

ಪೋಪ್ ಜಾನ್ ಪೌಲರು ಫೆಬ್ರುವರಿ 23ರಂದು ನಾಲ್ಕು ದಿನಗಳ ಸಂಚಾರದಲ್ಲಿ ಜಪಾನನ್ನು ಸಂದರ್ಶಿಸಿದಾಗ ಅಲ್ಲಿನ ಅಹ್ಮದಿಯಾ ಮಿಶನರಿ ಅತಾವುಲ್ ಮುಜೀಬ್ ರಾಶಿದ್‌ರವರು ಪೋಪರಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಕಾಣಿಕೆಯಾಗಿ ನೀಡಿದರಲ್ಲದೆ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಬಗ್ಗೆ ಒಂದು ಸೌಹಾರ್ದ ಸಂಭಾಷಣೆ ನಡೆಸಲು ಅಹ್ಮದಿಯಾ ಖಲೀಫರು 1978ರಲ್ಲಿ ಲಂಡನಿನಲ್ಲಿ ನಡೆದ "ಶಿಲುಬೆಯಿಂದ ಯೇಸುವಿನ ವಿಮೋಚನೆ" ಎಂಬ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಸ್ತಾಪಿಸಿದ ವಿಚಾರವನ್ನು ಪೋಪರ ಗಮನಕ್ಕೆ ತಂದರು.

## ದ್ವಿತೀಯ ಮಹಾರಾಷ್ಟ್ರ ಅಹ್ಮದಿಯಾ ಸಮ್ಮೇಳನ

ಮೇ 9 ಮತ್ತು 10ರಂದು ದ್ವಿತೀಯ ಮಹಾರಾಷ್ಟ್ರ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಬೊಂಬಾಯಿಯ ಅಹ್ಮದಿಯಾ ಪ್ರಚಾರ ಕೇಂದ್ರವಾದ "ಅಲ್ ಹಕ್"ನ ವಠಾರದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬ್, ಮೌಲವಿ ಬಶೀರ್ ಅಹ್ಮದ್, ಮೌಲವಿ ಶರೀಫ್ ಅಹ್ಮದ್ ಅಮೀನಿ, ಮೌಲವಿ ಹಮೀದುದ್ದೀನ್ ಶಮ್ಸ್ ಮತ್ತು ಪ್ರೊ। ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಭಾಷಣವಿತ್ತರು.

## ನೈಜೀರಿಯಾದಲ್ಲಿ 31 ನೇ ವಾರ್ಷಿಕ ಸಮ್ಮೇಳನ

ಜಮಾಅತ್ ಅಹ್ಮದಿಯಾ ನೈಜೀರಿಯಾ (ಪಶ್ಚಿಮ ಆಫ್ರಿಕ)ದ 31ನೇ ವಾರ್ಷಿಕ ಸಮ್ಮೇಳನವು ಫೆಬ್ರುವರಿ ತಾ। 6, 7, 8ರಂದು "ಅಹ್ಮದಿಯಾ ಸೆಟ್ಲ್‌ಮೆಂಟ್"ನಲ್ಲಿ ವಿಜಯಕರವಾಗಿ ಸಮಾವೇಶಗೊಂಡಿತು.

## ಸ್ವಾಹಿಲಿ ಭಾಷೆಯಲ್ಲಿ ಖುರ್‌ಆನಿನ ಮೂರನೇ ಮುದ್ರಣ

ಆಫ್ರಿಕದ ಪ್ರಧಾನ ಭಾಷೆಗಳಲ್ಲಿ ಒಂದಾದ ಸ್ವಾಹಿಲಿಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಖುರ್‌ಆನಿನ 3ನೇ ಆವೃತ್ತಿಯ 10 ಸಾವಿರ ಪ್ರತಿಗಳು ಜೂನ್ ತಿಂಗಳಲ್ಲಿ ಪ್ರಕಾಶನಗೊಂಡಿವೆಯೆಂದು ತಿಳಿದು ಬಂದಿದೆ.

## ಅಮೃತಸರದ ರೋಟರಿ ಕ್ಲಬ್‌ನಲ್ಲಿ ಅಹ್ಮದಿ ಪ್ರತಿನಿಧಿಯ ಭಾಷಣ

ರೋಟರಿ ಕ್ಲಬ್ ಅಮೃತಸರ್ ಸೌತ್ ಬ್ಲೋಕ್‌ನ ಆಮಂತ್ರಣದ ಮೇರೆಗೆ ಇಂಟರ್ ನ್ಯಾಶನಲ್ ಹೋಟೆಲ್‌ನಲ್ಲಿ ಆಗಸ್ಟ್ 12ರಂದು ಸಂಜೆ ಜರಗಿದ ಸಭೆಯಲ್ಲಿ ಖಾದಿಯಾನಿನ ಅಹ್ಮದಿಯಾ ವಿದ್ಯಾಲಯದ ಮುಖ್ಯೋಪಾಧ್ಯಾಯ ಮೌಲವಿ ಮುಹಮ್ಮದ್ ಕರೀಮುದ್ದೀನ್‌ರವರು "ಇಸ್ಲಾಂ ಮತ್ತು ಶಾಂತಿ" ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಭಾಷಣದ ನಂತರ ಶ್ರೋತೃಗಳ ಪ್ರಶ್ನೆಗಳನ್ನು ಉತ್ತರಿಸಲಾಯಿತು. ಈ ಭಾಷಣದಿಂದ ಇಸ್ಲಾಮಿನ ಬಗ್ಗೆ ತಮ್ಮ ಅನೇಕ ತಪ್ಪು ಕಲ್ಪನೆಗಳು ನಿವಾರಿಸಲ್ಪಟ್ಟಿವೆಯೆಂದು ಕ್ಲಬ್ಬಿನ ಅಧ್ಯಕ್ಷರು ನುಡಿದರು.

## ಋಷಿನಗರದಲ್ಲಿ ಅಹ್ಮದಿ ಯುವಜನ ಸಮ್ಮೇಳನ

ಕಾಶ್ಮೀರ ಪ್ರಾಂತ್ಯದ 3ನೇ ಅಹ್ಮದಿ ಯುವಜನ (ಖುದ್ದಾಮುಲ್ ಅಹ್ಮದಿಯಾ) ಆಗಸ್ಟ್ 29 ಮತ್ತು 30ರಂದು ಋಷಿನಗರದಲ್ಲಿ ಸಮಾವೇಶಗೊಂಡಿತು. ಸುಮಾರು ಒಂದು ಸಾವಿರ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

## ಥೋಟಾ ಕಲ್ಕತ್ತದಲ್ಲಿ ಧರ್ಮ ಸಮ್ಮೇಳನ

ಅಗರ್‌ಗತೀ ಕ್ಲಬ್‌ನ ವಾರ್ಷಿಕ ಸಮ್ಮೇಳನದ ಅಂಗವಾಗಿ ಭೋಟಾ ಕಲ್ಕತ್ತಾದಲ್ಲಿ ಮೇ 17ರಂದು ಒಂದು ಧರ್ಮ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಅಹ್ಮದಿಯಾ ಮಿಶನರಿ ಸುಲ್ತಾನ್ ಅಹ್ಮದ್ ಝಫರ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ರಾಮಕೃಷ್ಣ ಮಿಷನಿನ ಸ್ವಾಮಿ ಆನಂದಜಿಯವರು ಆಗಮಿಸಿದ್ದರು.

## ಶ್ರೀನಗರದಲ್ಲಿ ಹಿಜರಿ 15ನೇ ಶತಕ ಸಭೆ- ಅಹ್ಮದಿ ಮಿಶನರಿ ಮುಖ್ಯ ಅತಿಥಿ

ಜುಲೈ 1ರಂದು ಜಮ್ಮೂ-ಕಾಶ್ಮೀರ್ ನ್ಯಾಶನಲ್ ಯೂತ್ ಫೆಡರೇಶನಿನ ವತಿಯಿಂದ ಶ್ರೀನಗರದ ಟಾಗೋರ್ ಸಭಾಂಗಣದಲ್ಲಿ ಹಿಜರಿ 15ನೇ ಶತಕದ ದ್ವಿದಿನ ಸಮ್ಮೇಳನವನ್ನು ಮುಖ್ಯ ಮಂತ್ರಿ ಶೇಕ್ ಮುಹಮ್ಮದ್ ಅಬ್ದುಲ್ಲಾರವರ ಪತ್ನಿ ಉದ್ಘಾಟಿಸಿದರು. ಪ್ರಥಮ ದಿನದ ಸಭೆಯಲ್ಲಿ ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಗುಲಾಂ ನಬಿ ನಿಯಾಝ್‌ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

## ಶಾಹ್‌ಜಾನ್‌ಪುರ ವಸ್ತು ಪ್ರದರ್ಶನದಲ್ಲಿ ಅಹ್ಮದಿಯಾ ಬುಕ್‌ಸ್ಟಾಲ್

ಶಾಹ್‌ಜಾನ್ ಪುರದಲ್ಲಿ ಮೇ-ಜೂನ್ ತಿಂಗಳಲ್ಲಿ ಜರಗಿದ ವಸ್ತು ಪ್ರದರ್ಶನದಲ್ಲಿ ಸ್ಥಳೀಯ ಅಹ್ಮದಿಯಾ ಘಟಕದ ವತಿಯಿಂದ ಒಂದು ಬುಕ್ ಸ್ಟಾಲನ್ನು ತೆರೆಯಲಾಗಿತ್ತು. ಸಾವಿರಾರು ಜನರು ಬುಕ್ ಸ್ಟಾಲನ್ನು ಸಂದರ್ಶಿಸಿ ವಿಚಾರ ವಿನಿಮಯ ನಡೆಸಿದರು.

## ಜಮ್ಶೆದ್‌ಪುರದಲ್ಲಿ ಪ್ರಚಾರ ಕಾರ್ಯಕ್ರಮ

ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಅಬ್ದುರ್‌ರಶೀದ್ ರಿಯಾಝರವರ ನೇತೃತ್ವದಲ್ಲಿ ಜೂನ್ ತಿಂಗಳ ದ್ವಿತೀಯ ವಾರದಲ್ಲಿ ಅಹ್ಮದಿಯಾ ಪ್ರಚಾರ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿತ್ತು. ಉರ್ದು, ಹಿಂದಿ, ಬಂಗಾಳಿ ಮತ್ತು ಒರಿಯಾ ಭಾಷೆಗಳಲ್ಲಿರುವ ಅಹ್ಮದಿಯಾ ಸಾಹಿತ್ಯಗಳನ್ನು ವಿತರಣೆ ಮಾಡಿ ಅಹ್ಮದಿಯಾ ಸಂದೇಶವನ್ನು ಅಲ್ಲಿನ ಜನರಿಗೆಲ್ಲ ತಲಪಿಸಲಾಯಿತು.

## ವಾಶಿಂಗ್ಟನಿನಲ್ಲಿ ಸ್ತ್ರೀಯರ ಸ್ಥಾನ ಮತ್ತು ಹಕ್ಕುಗಳ ಬಗ್ಗೆ ಅಂತರ್ಜಾತೀಯ ವಿಚಾರಗೋಷ್ಠಿ

ವಾಷಿಂಗ್ಟನಿನ ಅಹ್ಮದಿಯಾ ಮಹಿಳಾ ಸಂಘ (ಲಜ್ನಾ ಇಮಾಉಲ್ಲಾಹ್)ದ ವತಿಯಿಂದ ಜೂನ್ 14ರಂದು ಮಸ್ಜಿದ್ ಫಝ್ಲಿನ ಸಭಾಂಗಣದಲ್ಲಿ ಸ್ತ್ರೀಯರ ಸ್ಥಾನ ಮತ್ತು ಹಕ್ಕುಗಳ ಕುರಿತು ಒಂದು ವಿಚಾರಗೋಷ್ಠಿ ನಡೆಯಿತು. ಯಹೂದಿ, ಕ್ರೈಸ್ತ ಮತ್ತು ಮುಸ್ಲಿಂ ಸ್ತ್ರೀಯರು ಗೋಷ್ಠಿಯಲ್ಲಿ ಭಾಗವಹಿಸಿದರು. ಪ್ರಸ್ತುತ ಗೋಷ್ಠಿಯಲ್ಲಿ ಪ್ರಶ್ನೋತ್ತರಗಳಿಗೂ ಅವಕಾಶ ನೀಡಲಾಗಿತ್ತು.

## ಇಟಲಿ ಮತ್ತು ದ. ಅಮೇರಿಕದಲ್ಲಿ ಅಹ್ಮದಿಯಾ ಮಸೀದಿ

ಇಂಗ್ಲೆಂಡಿನ ಖುದ್ದಾಮುಲ್ ಅಹ್ಮದಿಯಾ (ಅಹ್ಮದಿಯಾ ಯುವಜನ ಸಂಘ) ವತಿಯಿಂದ ಸದ್ಯೋಭವಿಷ್ಯದಲ್ಲೇ ಇಟಲಿ ಮತ್ತು ದಕ್ಷಿಣ ಅಮೇರಿಕದಲ್ಲಿ ಮಸೀದಿ ನಿರ್ಮಾಣಕ್ಕಾಗಿ ಯೋಜನೆ ಹಾಕಲಾಗಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕಾಗಿ ಈಗಾಗಲೇ ಇಂಗ್ಲೆಂಡಿನ ಅಹ್ಮದಿ ಯುವಕರಿಂದ ಮಾತ್ರ 50,000 ಪೌಂಡ್ ಸಂಗ್ರಹಿಸಲಾಗಿದೆ.

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## ( 13 )

ಗ್ರಂಥಕರ್ತ: ಹಜ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

## ದೈವಿಕಜ್ಞಾನ ಸಿದ್ಧಿಯ ಮಾರ್ಗಗಳು

ದೈವಿಕಜ್ಞಾನ ಪ್ರಾಪ್ತಿಯ ಮಾರ್ಗಗಳು ಯಾವುವೆಂದಾಗಿದೆ ಐದನೆಯ ಪ್ರಶ್ನೆ. ಈ ವಿಷಯವನ್ನು ಪವಿತ್ರ ಖುರ್‌ಆನ್ ಸವಿಸ್ತಾರವಾಗಿ ಪ್ರತಿಪಾದಿಸಿರುವುದಾದರೂ ಆ ಬಗ್ಗೆ ಇಲ್ಲಿ ವಿವರಿಸಲು ಅವಕಾಶವಿಲ್ಲದಿದ್ದುದರಿಂದ ನಾನು ಬಹಳ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು. ಖುರ್‌ಆನಿನ 'ತಕಾಸುರ್' ಎಂಬ ಅಧ್ಯಾಯವನ್ನು ವ್ಯಾಖ್ಯಾನಿಸುತ್ತಾ ಮೊದಲು ವಿವರಿಸಿದ ಪ್ರಕಾರ ಪವಿತ್ರ ಖುರ್‌ಆನ್ ಜ್ಞಾನವನ್ನು "ಇಲ್ಮುಲ್ ಯಖೀನ್" (ಅನುಮಾನ ಜ್ಞಾನ), "ಐನುಲ್ ಯಖೀನ್" (ದರ್ಶನ ಜ್ಞಾನ), "ಹಕ್ಕುಲ್ ಯಖೀನ್" (ಅನುಭವ ಜ್ಞಾನ) ಎಂಬೀ ಮೂರು ವಿಧಗಳಾಗಿ ವಿಂಗಡಿಸಿದೆ. ಒಂದು ಸ್ಥಳದಲ್ಲಿ ಹೊಗೆಯನ್ನು ಮಾತ್ರ ಕಂಡು ಅಲ್ಲಿ ಬೆಂಕಿ ಇರಬೇಕೆಂದು ನಾವು ಅನುಮಾನಿಸುವ ರೀತಿಯಲ್ಲಿ ಒಂದು ವಿಷಯವನ್ನು ಇನ್ನೊಂದರ ಆಧಾರದಿಂದ ಊಹಿಸಿ ದೃಢ ಪಡಿಸುವುದನ್ನು "ಇಲ್ಮುಲ್ ಯಖೀನ್" ಎಂದು ಹೇಳಲಾಗುತ್ತದೆ. ಆದರೆ ನಾವು ಬೆಂಕಿಯನ್ನು ಸಹ ಕಂಡರೆ ನಮಗೆ ಆ ಬಗ್ಗೆ "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಸಿದ್ಧಿಸುತ್ತದೆ. ಕೊನೆಯದಾಗಿ. ಆ ಬೆಂಕಿಯನ್ನು ಸ್ಪರ್ಶಿಸುವಾಗ ನಮಗುಂಟಾಗುವ ಅನುಭವ ಜ್ಞಾನವನ್ನು "ಹಕ್ಕುಲ್ ಯಖೀನ್" ಎಂದು ಹೇಳಲಾಗುತ್ತದೆ. ಈ ಮೂರು ವಿಧ ಜ್ಞಾನಗಳ ಕುರಿತು ಪ್ರತಿಪಾದಿಸುವ "ಸೂರಃ ತಕಾಸುರ್"ನ ವ್ಯಾಖ್ಯಾನವನ್ನು ಮೊದಲೊಮ್ಮೆ ಉಲ್ಲೇಖಿಸಿರುವ ಕಾರಣ ಆ ಬಗ್ಗೆ ಇಲ್ಲಿ ವಿವರಿಸುವುದಿಲ್ಲ.

ಮೊದಲ ವಿಧವಾದ ಅನುಮಾನ ಜ್ಞಾನ ಗಳಿಕೆಯ ದಾರಿ ವಿವೇಕ ಮತ್ತು ಶ್ರುತಿ ಆಗಿದೆ. ನರಕವಾಸಿಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

> "ಕಾಲೂ ಲೌ ಕುನ್ನಾ ನಸ್ಮಉ ಔ ನಅ್‌ಕಿಲು ಮಾ ಕುನ್ನಾ ಫೀ ಅಸ್‌ಹಾಬಿಸ್ಸಈರ್" (67 : 11).
>
> ಅವರು ಹೇಳುವರು: ನಾವು ಬುದ್ಧಿಶಾಲಿಗಳಾದ ತತ್ತ್ವಚಿಂತಕರ ಮತ್ತು ಜ್ಞಾನಿಗಳ ಮಾತುಗಳನ್ನು ಗಮನಿಸಿದ್ದರೆ ಅಥವಾ ನಾವೇ ಚಿಂತಿಸಿ ಮತ ವಿಶ್ವಾಸ ಪ್ರಮಾಣಗಳನ್ನು ವಿವೇಕಯುತವಾದಿ ಪರಿಶೋಧಿಸಿದ್ದರೆ ನಾವು ನರಕವಾಸಿಗಳ ಗುಂಪಿನಲ್ಲಿ ಸೇರುತ್ತಿರಲಿಲ್ಲ.

ಇದೇ ಅರ್ಥವನ್ನು ಸೂಚಿಸುವ ಮತ್ತೊಂದು ವಾಕ್ಯ ಈ ರೀತಿ ಇದೆ:

> "ಲಾ ಯುಕಲ್ಲಿಫುಲ್ಲಾಹು ನಫ್ಸನ್ ಇಲ್ಲಾ ವುಸ್‌ಅಹಾ" (2 : 287)
>
> ದೇವನು ಯಾವ ಆತ್ಮದ ಮೇಲೆಯೂ ಅದರ ಜ್ಞಾನಶಕ್ತಿಗೆ ಮಿಗಿಲಾದ ಏನನ್ನೂ ಹೇರುವುದಿಲ್ಲ.

ಎಂದರೆ, ದೇವನು ಮನುಷ್ಯನನ್ನು ಆಹ್ವಾನಿಸು ವುದು ಮಾನವನ ಬುದ್ಧಿ ಮತ್ತು ಜ್ಞಾನದ ಪರಿಧಿಯೊಳಗಿನ ವಿಶ್ವಾಸದೆಡೆಗೂ ತತ್ತ್ವ ಸಂಹಿತೆಯೆಡೆಗೂ ಆಗಿದೆ. ಅವನಿಗೆ ವಹಿಸಲಾಗದ ಯಾವ ಭಾರವನ್ನೂ ಅವನ ಮೇಲೆ ದೇವನು ಹೊರಿಸುವುದಿಲ್ಲ. ಸರಿಯಾದ ವಾರ್ತಾ ನಿವೇದನೆ ಮತ್ತು ಶ್ರುತಿಯ ಮೂಲಕ ಒಬ್ಬನಿಗೆ ಅನುಮಾನ ಜ್ಞಾನವನ್ನು ಗಳಿಸಲು ಸಾಧ್ಯವೆಂದು ಪ್ರಸ್ತುತ ಖುರ್‌ಆನ್ ವಾಕ್ಯಗಳು ತಿಳಿಸಿಕೊಡುತ್ತವೆ. ದೃಷ್ಟಾಂತವಾಗಿ ಲಂಡನ್ ನಗರವನ್ನು ನೋಡಿರದಿದ್ದರೂ ಅಂತಹ ಒಂದು ನಗರವಿದೆಯೆಂದು ನಾವು ಕೇಳಿ ನಂಬುತ್ತೇವಲ್ಲವೇ. ಏಕೆಂದರೆ, ಆ ನಗರವನ್ನು ನೋಡಿದವರೆಲ್ಲರ ಮಾತುಗಳನ್ನು ನಮಗೆ ಅಲ್ಲಗಳೆಯಲಿಕ್ಕೆ ನಿರ್ವಾಹವಿಲ್ಲ. ಹಾಗೆಯೇ, ಔರಂಗಜೇಬ ಸಾಮ್ರಾಟನ ಕಾಲದಲ್ಲಿ ನಾವು ಜೀವಿಸಿರಲಿಲ್ಲ; ಆತನನ್ನು ನಾವು ಕಂಡಿಲ್ಲ. ಆದರೂ ಆತನು ಭಾರತವನ್ನು ಆಳಿದ ಮೊಗಲ್ ರಾಜರಲ್ಲಿ ಒಬ್ಬನೆಂಬ ವಿಷಯದಲ್ಲಿ ನಾವ್ಯಾರೂ ಸಂಶಯಪಡುವುದಿಲ್ಲ. ಹೀಗೆ ನಾವು ನಿಸ್ಸಂದೇಹವಾಗಿ ನಂಬಲಿಕ್ಕೆ ಕಾರಣ ಪರಂಪರೆಯಾಗಿ ಬಂದ ಶ್ರುತಿ ಮಾತ್ರವಾಗಿದೆ. ಹೀಗೆ ಒಂದು ವಸ್ತುವಿನ ಯಥಾರ್ಥತೆಯ ಕುರಿತು ಅಥವಾ ಅದರ ಅಸ್ತಿತ್ವದ ಕುರಿತು ನಿರ್ದೋಷಕರವಾದ ಶ್ರುತಿ ಮೂಲಕ ದೃಢ ವಿಶ್ವಾಸ ಹೊಂದಬಹುದಾಗಿದೆ. ದೈವ ಪ್ರೋಕ್ತ ಧರ್ಮಗ್ರಂಥಗಳು ಪರಂಪರಾಗತವಾಗಿ ಸಾಗಿ ಬಂದ ಮಾರ್ಗ ನಿರ್ದೋಷಕರವೂ ಆಕ್ಷೇಪರಹಿತವೂ ಎಂದಾದರೆ ಅವು ಸಹ ಜ್ಞಾನಸಿದ್ಧಿಗೆ ಪರ್ಯಾಪ್ತ. ಆದರೆ ದೈವಿಕ ಗ್ರಂಥವೆಂದು ಭಾವಿಸಲ್ಪಡುವ ಒಂದು ಮತ ಗ್ರಂಥದ ಪರಸ್ಪರ ವಿರುದ್ಧವಾಗಿರುವ ಐವತ್ತೋ ಅರುವತ್ತೋ ಪ್ರತಿಗಳ ಪೈಕಿ ಮೂರೋ ನಾಲ್ಕೋ ಪ್ರತಿಗಳನ್ನು ಮಾತ್ರ ದೈವ ಪ್ರೋಕ್ತವೆಂದು ಆ ಗ್ರಂಥಾನುಯಾಯಿಗಳು ಅಂಗೀಕರಿಸಿ ಬಾಕಿಯುವೆಲ್ಲಾ ಕೃತ್ರಿಮ ಹಾಗೂ ಕಲ್ಪಿತವೆಂದು ತಿರಸ್ಕರಿಸುವ ಪಕ್ಷದಲ್ಲಿ, ಪೂರ್ಣ ಹಾಗೂ ನಿಪುಣ ಪರಿಶೋಧನೆಯ ಫಲವಾಗಿಯಲ್ಲದೆ ಹಾಗೆ ನಂಬುವುದಾಗಲಿ ಅಂಗೀಕರಿಸುವುದಾಗಲಿ ಅರ್ಥರಹಿತ. ಅಂತಹ ಪ್ರತಿಗಳು ಅವುಗಳ ಪರಸ್ಪರ ವೈರುಧ್ಯ ನಿಮಿತ್ತ ಅವಿಶ್ವಾಸನೀಯವೂ ತ್ಯಾಜ್ಯವೂ ಆಗುತ್ತವೆ. ಮಾತ್ರವಲ್ಲ, ಅನ್ಯೋನ್ಯ ವಿರುದ್ಧ ಪ್ರಸ್ತಾವನೆಗಳಿಂದ ಕೂಡಿದ ಅಂತಹ ಗ್ರಂಥಗಳು ಜ್ಞಾನಸಿದ್ಧಿಗೆ ಸಹಾಯಕವೆಂದು ತಿಳಿದುಕೊಳ್ಳಬಾರದು. ಏಕೆಂದರೆ, ಪರಸ್ಪರ ವಿರುದ್ಧ ಹೇಳಿಕೆಗಳು ಎಂದಿಗೂ ದೃಢವಿಶ್ವಾಸ ಉಂಟುಮಾಡಲಿಕ್ಕೆ ಪರ್ಯಾಪ್ತವಾಗಲಾರವು. ಪರಮಾರ್ಥ ತತ್ತ್ವದ ಪ್ರಯೋಜನ ನಿಸ್ಸಂದೇಹ ಯಥಾರ್ಥ ಜ್ಞಾನವನ್ನು ಪ್ರಧಾನಮಾಡುವುದಾಗಿದೆ. ಹಾಗಿರುವಾಗ ಪರಸ್ಪರ ವೈರುಧ್ಯಗಳ ಪರಂಪರತ್ವದಿಂದ ನಿಜವಾದ ಜ್ಞಾನವನ್ನು ಗಳಿಸುವುದು ಅಸಾಧ್ಯ.

ಪವಿತ್ರ ಖುರ್‌ಆನ್ ನಿರ್ದೋಷಕರವಾಗಿಯೂ ನಿರ್ಬಾಧಿತವಾಗಿಯೂ ಸಾಗಿಬಂದಿದೆ ಮಾತ್ರವಲ್ಲ, ಅದು ಅದರ ನೈಜತೆಯನ್ನು ಸಾಬೀತು ಪಡಿಸಲು ಸಾಕ್ಷ್ಯಾಧಾರಗಳನ್ನು ತೋರಿಸುವ ಗ್ರಂಥವೂ ಆಗಿದೆಯೆಂಬುದು ಗಮನಾರ್ಹ. ಆ ಸತ್ಯವೇದ ಗ್ರಂಥ ಅದರ ಸಿದ್ಧಾಂತಗಳನ್ನೂ ಉಪದೇಶಗಳನ್ನೂ ಆಜ್ಞೆಗಳನ್ನೂ ದೈವ ಪ್ರೋಕ್ತವೆಂಬ ಕಾರಣದಿಂದ ಮಾತ್ರ ಅಂಗೀಕರಿಸಲಿಕ್ಕೆ ನಮ್ಮನ್ನು ನಿರ್ಬಂಧಿಸದೆ, ಪ್ರತಿಯೊಂದು ವಿಷಯದ ಬಗ್ಗೆ ಅದು ಯುಕ್ತವಾದ ಸಾಕ್ಷ್ಯಗಳನ್ನು ನೀಡುತ್ತದೆ. ಅದರ ಎಲ್ಲಾ ತತ್ತ್ವಗಳು ಮನುಷ್ಯ ಪ್ರಕೃತಿಯಲ್ಲಿ ನಿಕ್ಷಿಪ್ತವಾಗಿವೆಯೆಂದು ಖುರ್‌ಆನ್ ಹೇಳುತ್ತದೆ. ನೋಡಿರಿ:

> "ಹಾದಾ ದಿಕ್ರುನ್ ಮುಬಾರಕುನ್" (21:51)
>
> ಈ ಅನುಗ್ರಹೀತ ಗ್ರಂಥ ನೂತನವಾಗಿ ಏನನ್ನೂ ತರಲಿಲ್ಲ; ಆದರೆ ಇದು ಮನುಷ್ಯ ಪ್ರಕೃತಿಯಲ್ಲೂ ನಿಸರ್ಗದಲ್ಲೂ ಅಂತರ್ಭೂತವಾಗಿರುವ ಸಂಗತಿಗಳನ್ನು ನೆನಪಿಗೆ ತರುವ ಒಂದು ಅನುಸ್ಮಾರಕವಾಗಿದೆ.

ಇನ್ನೊಂದೆಡೆಯಲ್ಲಿ ಅದು ಹೀಗೆ ಹೇಳುತ್ತದೆ .

> "ಲಾ ಇಕರಾಹ ಫಿದ್ದೀನ್" (2 : 257)
>
> ಈ ಮತದಲ್ಲಿ — ಇಸ್ಲಾಂ ಮತದಲ್ಲಿ — ಏನೂ ನಿರ್ಬಂಧವಿಲ್ಲ.

ಎಂದರೆ, ಅದರ ಸಿದ್ಧಾಂತಗಳನ್ನು ಸ್ವೀಕರಿಸುವರೆ ಅದು ಯಾರನ್ನೂ ನಿರ್ಬಂಧಿಸಲಿಕ್ಕೆ ಉದ್ದೇಶಿಸುವುದಿಲ್ಲ; ಸಕಲ ಸಂಗತಿಗಳಿಗೂ ಅದು ಪುರಾವೆಗಳನ್ನೂ ಸಾಕ್ಷ್ಯಾಧಾರಗಳನ್ನೂ ನೀಡುತ್ತದೆ. ಮಾತ್ರವಲ್ಲ ಹೃದಯಗಳಿಗೆ ಪ್ರಕಾಶ ಈಯುವ ಆಧ್ಯಾತ್ಮ ಶಕ್ತಿಯೂ ಅದರಲ್ಲಡಕವಾಗಿದೆ. ಬೇರೊಂದೆಡೆಯಲ್ಲಿ ಅದು ಹೀಗೆ ಹೇಳುತ್ತದೆ :

"ಶಿಫಾಉನ್‌ಲ್ಲಿಮಾ ಫಿಸ್ಸುದೂರ್" (10 : 58)
ಖುರ್‌ಆನ್ ಎಲ್ಲಾ ಆಧ್ಯಾತ್ಮಿಕ ರೋಗಗಳಿಗೆ ಶಮನಕಾರಿಯಾಗಿದೆ.

ಎಂದರೆ, ಈ ಪವಿತ್ರ ಗ್ರಂಥದ ಮಹಾತ್ಮೆ, ಪರಂಪರಾಗತವಾಗಿ ಸಿದ್ಧಿಸಿದ ಒಂದು ಪೌರಾಣಿಕ ಗ್ರಂಥವೆಂಬ ಸ್ಥಿತಿಯಲ್ಲಿ ಅಲ್ಲ; ಅದು ಅದರ ಸರ್ವ ತತ್ವಗಳಿಗೂ ನಿರ್ದೋಷಕರವಾದ ಸಾಕ್ಷ್ಯಗಳನ್ನು ನೀಡುವ ಹಾಗೂ ದೇದೀಪ್ಯಮಾನ ಆಧ್ಯಾತ್ಮಿಕ ಪ್ರಕಾಶವನ್ನು ಪಸರಿಸುವ ಒಂದು ಉತ್ಕೃಷ್ಟ ಗ್ರಂಥವೆಂಬ ನೆಲೆಯಲ್ಲಾಗಿದೆ.

ಇದೇ ಪ್ರಕಾರ, ಸರಿಯಾದ ವೈಚಾರಿಕ ಸಾಕ್ಷ್ಯಾಧಾರಗಳು ಒಬ್ಬನನ್ನು ನಿರ್ದಿಷ್ಟ ಜ್ಞಾನದೆಡೆಗೆ ಕೊಂಡೊಯ್ಯುತ್ತದೆಂಬುದು ನಿಸ್ಸಂದೇಹಕರ. ಈ ಸಂಗತಿಯನ್ನು ಪವಿತ್ರ ಖುರ್‌ಆನ್ ಈ ಕೆಳಗಿನ ವಾಕ್ಯಗಳಲ್ಲಿ ಸೂಚಿಸುತ್ತದೆ :

"ಇನ್ನ ಫೀ ಖಲ್ಕಿಸ್ಸವಮಾವಾತಿ ವಲ್ ಅರ್ಲ್ಲಿ ವಖ್‌ತಿಲಾಫಿಲ್ಲೈಲಿ ವನ್ನಹಾರಿ ಲಆಯಾತಿನ್‌ಲ್ಲಿ ಉಲಿಲ್ ಅಲ್‌ಬಾಬ್ - ಅಲ್ಲದೀನ ಯದ್‌ಕುರೂನಲ್ಲಾಹ ಖಿಯಾಮನ್ ವ್ವ ಖುಊದನ್ ವ್ವ ಅಲಾ ಜುನೂಬಿಹಿಂ ವಯತಫಕ್ಕರೂನ ಫೀ ಖಲ್ಕಿ ಸ್ಸವಮಾವಾತಿ ವಲ್ ಅರ್ಲ್ಲಿ ರಬ್ಬನಾ ಮಾ ಖಲಕ್ತ ಹಾದಾ ಬಾತಿಲಾ - ಸುಬ್‌ಹಾನಕ ಫಖಿನಾ ಅದಾಬನ್ನಾರ್"

(3 : 191, 192.)

ಬುದ್ಧಿವಂತರೂ, ಜ್ಞಾನಿಗಳೂ ಭೂಮಿ ಮತ್ತು ಆಕಾಶ ಗೋಳಗಳ ಸೃಷ್ಟಿಯ ಕುರಿತು ಚಿಂತನ ಮಾಡುತ್ತಲೂ ರಾತ್ರಿ-ಹಗಲುಗಳ ವ್ಯತ್ಯಾಸದ ಕಾರಣಗಳ ಬಗ್ಗೆ ಗಾಢವಾಗಿ ಆಲೋಚಿಸುತ್ತಲೂ ಇರುವಾಗ, ಪ್ರಪಂಚದ ಎಲ್ಲೆಲ್ಲೂ ಗೋಚರಿಸುವ ಸುವ್ಯವಸ್ಥೆಯಲ್ಲಿ ಸರ್ವೋನ್ನತನಾದ ದೇವನ ಅಸ್ತಿತ್ವವನ್ನು ರುಜುಪಡಿಸುವ ಆಧಾರಗಳು ಅವರಿಗೆ ಕಂಡುಬರುತ್ತವೆ. ಆಗ, ಅವರು ಇನ್ನೂ ಸ್ಪಷ್ಟವಾದ ಜ್ಞಾನಸಿದ್ಧಿಗಾಗಿ ದೇವನೊಡನೆ ಸಹಾಯ ಯಾಚಿಸುತ್ತಲೂ, ನಿಂತುಕೊಂಡೂ, ಕುಳಿತುಕೊಂಡೂ ಮಲಗಿಕೊಂಡೂ ಇರುವಾಗಲೆಲ್ಲಾ ಅವನನ್ನು ಸ್ಮರಿಸುತ್ತಲೂ ಇರುತ್ತಾರೆ. ತನ್ಮೂಲಕ ಅವರ ಬುದ್ಧಿಶಕ್ತಿ ತೀಕ್ಷ್ಣಗೊಳ್ಳುತ್ತದೆ. ಹಾಗೆ ಅವರು ಜ್ಯೋತಿರ್ಗೋಳಗಳ ಮತ್ತು ಭೂಮಿಯ ಪರಿಪೂರ್ಣ ಹಾಗೂ ಅನನ್ಯನವಾದ ಸೃಷ್ಟಿವೈಚಿತ್ರ್ಯದ ಬಗ್ಗೆ ಚಿಂತಿಸುವಾಗ ಅವುಗಳಲ್ಲೆಲ್ಲಾ ಗೋಚರಿಸುವ ಸುಬದ್ಧ ಕ್ರಮ ವ್ಯವಸ್ಥೆ ವ್ಯರ್ಥವೋ ಮಿಥ್ಯವೋ ಅಲ್ಲವೆಂದೂ, ಬದಲಾಗಿ ಅದು ಸರ್ವೋನ್ನತನಾದ, ಪ್ರಪಂಚದ ಸೃಷ್ಟಿಕರ್ತನ ತೇಜೋಮಯ ಮುಖವನ್ನು ತೋರ್ಪಡಿಸುತ್ತದೆಯೆಂದೂ ಬೋಧ್ಯವಾಗುತ್ತದೆ. ಹೀಗೆ, ಸೃಷ್ಟಿಕರ್ತನ ಕುರಿತು ಜ್ಞಾನ ಪಡೆದುದರಿಂದ ಅವರು ಅವನ ಗುಣಗಾನ ಮಾಡುತ್ತಾರೆ : "ಓ ಜಗತ್ಕರ್ತಾ, ನೀನು ಅತ್ಯಂತ ಪರಿಶುದ್ಧನಾಗಿರುವೆ. ನಿನ್ನ ಅಸ್ತಿತ್ವವನ್ನು ಅಲ್ಲಗಳೆಯುವುದಾಗಲಿ ನಿನ್ನ ಬಗ್ಗೆ ಅಯೋಗ್ಯ ಗುಣಗಳನ್ನು ಕಲ್ಪಿಸುವುದಾಗಲಿ ದೂರವುಳಿಯುತ್ತದೆ. ನಿನ್ನನ್ನು ನಿರಾಕರಿಸುವುದು ಒಂದು ನರಕವಾಗಿದೆ. ಯಥಾರ್ಥ ಸುಖ ಮತ್ತು ಆನಂದ ನಿನ್ನಿಂದಲೂ ನಿನ್ನ ಜ್ಞಾನದಿಂದಲೂ ಲಭಿಸುತ್ತದೆ. ನಿನ್ನನ್ನು ಗುರುತಿಸಲು ಸಾಧ್ಯವಾಗದವನು ಇಹದಲ್ಲೇ ನರಕಾಗ್ನಿಗೆ ಎರೆಯಾಗುತ್ತಾನೆ. ದೇವಾ, ನೀನು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು.

ಪವಿತ್ರ ಖುರ್‌ಆನಿನಲ್ಲಿ ಮನುಷ್ಯ ಪ್ರಕೃತಿ ಎಂದು ಕರೆಯಲ್ಪಡುವ ಅಂತ:ಕರಣ ಸಹ ಜ್ಞಾನಸಿದ್ಧಿಯ ಒಂದು ಮಾರ್ಗವಾಗಿದೆ. ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ಫಿತ್ರತಲ್ಲಾಹಿಲ್ಲತೀ ಫತರನ್ನಾಸ ಅಲೈಹಾ" (30:31)

ದಿವ್ಯ ಪ್ರಕೃತಿಯಲ್ಲಿ ಅಥವಾ ಪರಿಶುದ್ಧ ಪ್ರಕೃತಿಯಲ್ಲಿ ಮನುಷ್ಯರು ಸೃಷ್ಟಿಸಲ್ಪಟ್ಟಿದ್ದಾರೆ.

ಮನುಷ್ಯನಲ್ಲಿ ಕಂಡು ಬರುವ ಈ ದಿವ್ಯ ಪ್ರಕೃತಿ, ದೇವನು ಯಾವನೇ ಸಹಭಾಗಿ ಇಲ್ಲದೆ ಸಕಲ ವಸ್ತುಗಳ ಸೃಷ್ಟಿಕರ್ತನಾಗಿ ಜನನ-ಮರಣಕ್ಕೆ ಅತೀತನಾಗಿ ಏಕನಾಗಿರುವನೆಂದು ಭೋಧಿಸಲು ಪ್ರೇರೇಪಿಸುವ ಸಾಕ್ಷಾತ್ ಮನುಷ್ಯ ಪ್ರಕೃತಿಯಲ್ಲದೆ ಬೇರೊಂದಲ್ಲ. ಈ ಮಾನುಷ್ಯ ಪ್ರಕೃತಿಯಿಂದ ಸಿದ್ಧಿಸುವ ಜ್ಞಾನ, ಹೊಗೆಯ ಸಂಬಂಧಿಸಿದ ತಿಳುವಳಿಕೆಯಿಂದ ಮನಸ್ಸು ಬೆಂಕಿಯ ಕುರಿತುಳ್ಳ

ತಿಳುವಳಿಕೆಯನ್ನು ಪಡೆಯುವ ರೀತಿಯಲ್ಲಿ ಪ್ರತ್ಯಕ್ಷದಲ್ಲಿ ಅನುಮಾನಕರವಾಗಿರದಿದ್ದರೂ ಸೂಕ್ಷ್ಮ ರೂಪದಲ್ಲಿ ಅದಕ್ಕೆ ಅನುಮಾನದ ಒಂದು ಛಾಯೆಯಿರುವುದರಿಂದ ಅದನ್ನು ಅನುಮಾನ ಜ್ಞಾನದ ವರ್ಗದಲ್ಲಿ ಸೇರಿಸಲಾಗಿದೆ. ಸರ್ವಶಕ್ತನಾದ ದೇವನು ಪ್ರತಿಯೊಂದು ವಸ್ತುವಿನಲ್ಲಿ ಒಂದೊಂದು ಗುಣ ವಿಶೇಷವನ್ನು ಅಳಪಡಿಸಿರುವನು. ಆ ಅವ್ಯಕ್ತ ಗುಣವನ್ನು ಮಾತಿನಿಂದ ನಿರೂಪಿಸಲು ಸಾಧ್ಯವಿಲ್ಲ. ಆದರೆ, ನಾವು ಆ ವಸ್ತುವಿನ ಕುರಿತು ಆಳವಾದಿ ಪರಿಶೀಲಿಸಿದರೆ ಅದರಲ್ಲಿ ಅಡಕವಾಗಿರುವ ಗುಣವಿಶೇಷವನ್ನು ನಮಗೆ ಗುರುತಿಸಲು ಸಾಧ್ಯ. ಸಂಕ್ಷಿಪ್ತವಾಗಿ, ಆ ಗುಣ ಆ ವಸ್ತುವಿನಲ್ಲಿ, ಹೊಗೆ ಬೆಂಕಿಯೊಂದಿಗಿರುವ ರೀತಿಯಲ್ಲಿ ಅಬೇಧ್ಯವಾಗಿ ಹೆಣೆಯಲ್ಪಟ್ಟಿದೆ. ದೃಷ್ಟಾಂತವಾಗಿ, ನಾವು ದೈವಸತ್ತೆಯ ಕುರಿತು ಚಿಂತನ ಮಾಡುತ್ತಾ ಅವನಿಗಿರಬೇಕಾದ ಗುಣವಿಶೇಷಗಳ ಬಗ್ಗೆ ಯೋಚಿಸುವ ಪಕ್ಷದಲ್ಲಿ, ಅವನು ಜನನ ಮರಣಾದಿ ದುಃಖಗಳಿಗೆ ಗುರಿಯಾಗಬೇಕಾದೀತೇ ಎಂಬ ಊಹೆಯಾಗಲಿ ನಮಗೆ ಎದೆಗುದಿಯುಂಟು ಮಾಡುತ್ತದೆ. ದೇವನ ಕುರಿತು ಆ ರೀತಿಯ ಕಲ್ಪನೆಯನ್ನು ಮನುಷ್ಯ ಪ್ರಕೃತಿ ಅಥವಾ ಅಂತಃಕರಣ ನಿರಾಕರಿಸುತ್ತದೆ. ಅಷ್ಟು ಮಾತ್ರವಲ್ಲ ದೇವನ ಬಗ್ಗೆ ಈ ರೀತಿಯ ವ್ಯಾಖ್ಯೆ ಪಾವನವಾದ ಮನುಷ್ಯ ಪ್ರಕೃತಿಗೆ ಅಸಹ್ಯವಾಗಿ ತೋರಬಹುದು. ಏಕೆಂದರೆ ನಮ್ಮ ಸಕಲ ಪ್ರತ್ಯಾಶೆಗಳ ಆಶ್ರಯವಾಗಿರುವ ಸರ್ವಶಕ್ತನಾದ ದೇವನು ಸರ್ವ ವಿಧ ವಿಕಲತೆ ಮತ್ತು ನ್ಯೂನತೆಗಳಿಗೆ ಅತೀತನಾಗಿ ಸರ್ವಗುಣ ಸಂಪೂರ್ಣನಾಗಿ ಸರ್ವಜ್ಞನಾಗಿರಬೇಕೆಂದು ನಮ್ಮ ಮನಸ್ಸಾಕ್ಷಿ ಹೇಳುತ್ತದೆ. ದೈವವಿಚಾರ ನಮ್ಮ ಹೃದಯದಲ್ಲಿ ಮೂಡುವುದರೊಂದಿಗೆ ಅವನ ದಿವ್ಯ ಸ್ವರೂಪ ಮತ್ತು ಏಕತೆ ಅನ್ಯೋನ್ಯ. ಧೂಮ ಮತ್ತು ಅಗ್ನಿ ಪರಸ್ಪರವಿರುವಂತೆ. ಅಲ್ಲ ಅದಕ್ಕಿಂತ ಎಷ್ಟೋ ಮಿಗಿಲಾದ ರೀತಿಯಲ್ಲಿ ಅವಿಭಾಜ್ಯವಾದ ಒಂದು ಬಂಧ ಇರುವುದಾಗಿ ಅನುಭವವಾಗುತ್ತದೆ. ಆದ್ದರಿಂದ ಅಂತಃಕರಣ ಅಥವಾ ಮನುಷ್ಯ ಪ್ರಕೃತಿ ಮುಖಾಂತರ ಸಿದ್ಧಿಸುವ ತಿಳುವಳಿಕೆಯನ್ನು ಅನುಮಾನ ಜ್ಞಾನದಲ್ಲಿ ಸೇರಿಸಲಾಗಿದೆ.

ಪ್ರಸ್ತುತ ಜ್ಞಾನಮಾರ್ಗಕ್ಕಿಂತ ಮಿಗಿಲಾದ "ಐನುಲ್ ಯಖೀನ್" ಅಥವಾ ದೃಷ್ಟಿ ಮುಖಾಂತರ ಲಭಿಸುವ ಜ್ಞಾನ ಅಧಿಕ ದೃಢತರದ್ದಾಗಿದೆ. ಎಂದರೆ, ಒಂದು ವಸ್ತುವಿಗೆ ಸಂಬಂಧಿಸಿದ ನಮ್ಮ ತಿಳುವಳಿಕೆಗೆ ಮಧ್ಯಸ್ಥವಾಗಿ ಬೇರೇನೂ ಇಲ್ಲದೆ ಆ ವಸ್ತುವಿನಿಂದಲೇ ನೇರಾಗಿ ಸಿದ್ಧಿಸುವ ಜ್ಞಾನವಾಗಿದೆ. ಉದಾಹರಣೆಗೆ, ನಾವು ಘ್ರಾಣೇಂದ್ರಿಯ ಮೂಲಕ ಸುಗಂಧ ಅಥವಾ ದುರ್ಗಂಧವನ್ನು ಆಘ್ರಾಣಿಸುತ್ತೇವೆ, ರಸನೇಂದ್ರಿಯ ಮೂಲಕ ರುಚಿಯನ್ನು ತಿಳಿಯುತ್ತೇವೆ, ಸ್ಪರ್ಶೇಂದ್ರಿಯ ಮೂಲಕ ಉಷ್ಣ ಅಥವಾ ತಂಪನ್ನು ಗೊತ್ತುಮಾಡುತ್ತೇವೆ. ಈ ಬಗೆಯ ತಿಳುವಳಿಕೆಗಳೆಲ್ಲಾ "ಐನುಲ್ ಯಖೀನ್" ಎಂಬ ವರ್ಗದಲ್ಲಿ ಸೇರುತ್ತವೆ. ಆದರೆ ಪರಲೋಕಕ್ಕೆ ಸಂಬಂಧಿಸಿ ನಾವು ದೃಢ ಜ್ಞಾನ ಗಳಿಸುವುದು, ನಮಗೆ ನೇರವಾಗಿ ದೈವಿಕ ಪ್ರಬೋಧನೆ ಲಭಿಸುವಾಗ, ನಾವು ದೇವನ ಸ್ಪಷ್ಟವಾದ ಶಬ್ದಗಳನ್ನು ಶ್ರವಿಸುವಾಗ, ನಾವು ಅವನ ದಿವ್ಯ ಮಹಾತ್ಮೆಗಳ ಪ್ರಕಟಣೆಗಳನ್ನು ದರ್ಶಿಸುವಾಗ ಎಂಬೀ ಸಂದರ್ಭಗಳಲ್ಲಾಗಿದೆ. ದೈವಿಕ ಪ್ರಬೋಧನೆಯ ಮೂಲಕ ನಮಗೆ ಪರಿಪೂರ್ಣವಾದ ದೈವಿಕಜ್ಞಾನ ಸಿದ್ಧಿಸುತ್ತದೆ. ಈ ಜ್ಞಾನಪೀಯೂಷಕ್ಕಾಗಿ ನಮ್ಮ ಹೃದಯಾಂತರಾಳದಲ್ಲಿ ಒಂದು ಬಗೆಯ ತೃಷೆಯಿರುವುದಾಗಿ ಅನುಭವವಾಗುತ್ತದೆ. ಆಧ್ಯಾತ್ಮಿಕ ದಾಹವನ್ನು ಶಮನಗೊಳಿಸಲಿಕ್ಕೆ ದೇವನು ಮೊದಲೇ ಮಾರ್ಗಗಳನ್ನು ಸಿದ್ಧಗೊಳಿಸಿಲ್ಲವಾಗಿದ್ದರೆ ಈ ಆಧ್ಯಾತ್ಮ ತೃಷ್ಣೆಯನ್ನು ನಮ್ಮ ಅಂತರಂಗದಲ್ಲಿ ಅವನು ನಿಕ್ಷೇಪಿಸಿರುವುದರ ಪ್ರಯೋಜನವೇನು? ಪರಲೋಕ ಜೀವಿತದ ಕ್ಷೇಮಕ್ಕೆ ಕಾರಣವಾದ ಐಹಿಕ ಜೀವಿತದಲ್ಲಿ ಸತ್ಯಸ್ವರೂಪನೂ ಸರ್ವಸಂಪೂರ್ಣನೂ ಸರ್ವಶಕ್ತನೂ ಸಜೀವನೂ ಆಗಿರುವ ದೇವನ ಸಂಬಂಧಿಸಿ ಬರೇ ಕಟ್ಟು ಕತೆಗಳನ್ನು ಅವಲಂಬಿಸಿಕೊಂಡಿರುವ ವಿಶ್ವಾಸವನ್ನು ಕೈಗೊಂಡು ನಾವು ತೃಪ್ತಿಪಟ್ಟುಕೊಳ್ಳಬೇಕೇ ಅಥವಾ ದೇವನ ಕುರಿತು ಇಷ್ಟರವರೆಗೆ ಅಪೂರ್ಣವೂ ನ್ಯೂನವೂ ಆದ ಜ್ಞಾನದ ಹೊರತು ಬೇರೇನನ್ನೂ ಪ್ರದಾನ ಮಾಡಲು ಅಪರ್ಯಾಪ್ತವಾದ ವೈಚಾರಿಕ ಅನ್ವೇಷಣೆಯಲ್ಲಿ ಸಂತೃಪ್ತರಾಗಬೇಕೇ? ಯಥಾರ್ಥ ದೈವಭಕ್ತರೂ ದೈವಪ್ರೇಮಿಗಳೂ ತಮ್ಮ ಪ್ರಾಣಪ್ರಿಯನಾದ ಆ ಪವಿತ್ರ ಸತ್ತೆಯ ಶಬ್ದಮಾಧುರ್ಯವನ್ನು ಆಸ್ವಾದಿಸಲಿಕ್ಕೆ ಆಶಿಸುವುದಿಲ್ಲವೇ? ದೇವನಿಗಾಗಿ ಸರ್ವಸ್ವವನ್ನು ಪರಿತ್ಯಜಿಸಿ, ಹೃದಯ ಮತ್ತು ಪ್ರಾಣವನ್ನು ಅವನಿಗರ್ಪಿಸಿದವರು ಆ ಸತ್ಯ ಪ್ರಭಾ ಕೇಂದ್ರದ ಪ್ರಕಾಶಿಸುವ ಮುಖವನ್ನು ದರ್ಶಿಸದೆ, ಕಾಂತಿಹೀನವಾದ ಬೆಳಕಿನಲ್ಲಿ ಇದ್ದುಕೊಳ್ಳಲು ಇಷ್ಟಪಡುವರೇ? ಸಜೀವ ದೇವನ ಮಾಧುರ್ಯಭರಿತ ಶಬ್ದದ ಮೂಲಕ "ನಾನಿ

ದ್ದೇನೆ" ಎಂದು ಲೋಕಕ್ಕೆ ಅರುಹುವುದು ಭೌತಿಕ ತತ್ವ ಜ್ಞಾನಿಗಳ ವಿಚಾರಸರಣಿಗಿಂತ ಎಷ್ಟಕ್ಕೂ ಮಹತ್ತರವಾದುದಲ್ಲವೇ ? ವಾಸ್ತವದಲ್ಲಿ, ದೇವನ ಅಸ್ತಿತ್ವವನ್ನು ರುಜುಪಡಿಸುವರೆ ಅಪೂರ್ಣ ವಿಚಾರವಾದವನ್ನು ಪಶಾತ್ರ ಆಶ್ರಯಿಸಿ ಆ ತತ್ವವಾದಿಗಳು ರಚಿಸಿದ ಕೃತಿಗಳನ್ನೆಲ್ಲಾ ಒಂದು ಕಡೆಯಲ್ಲೂ ದೇವನಿದ್ದಾನೆಂದು ತೋರಿಸುವ "ಅನಲ್ ಮೌಜೂದ್" ಎಂಬ ಅವನ ಸ್ಪಷ್ಟವಾದ ವಚನವನ್ನು ಇನ್ನೊಂದು ಕಡೆಯಲ್ಲೂ ಇಟ್ಟು ತುಲನೆ ಮಾಡುವುದಾದರೆ ಆ ಎಲ್ಲಾ ಗ್ರಂಥಗಳೂ ದೇವನ ಮುಂದೆ ನಗಣ್ಯವೆಂದು ತೋರಬಹುದು. ತತ್ವಜ್ಞಾನಿಗಳೆಂದು ಕರೆಯಲ್ಪಟ್ಟರೂ ಅಂಧಕಾರದಲ್ಲಿ ಚಲಿಸುವ ಅವರಿಂದ ಯಾವ ಪ್ರಕಾಶವನ್ನು ನಮಗೆ ನಿರೀಕ್ಷಿಸಲಿಕ್ಕೆ ಸಾಧ್ಯ ?

ಸಂಕ್ಷಿಪ್ತವಾಗಿ ಹೇಳುವುದಾದರೆ, ಸತ್ಯಾನ್ವೇಷಕರಿಗೆ ಸರ್ವಜ್ಞನಾದ ದೇವನು ತನ್ನ ಸಂಬಂಧಿಸಿ ಪೂರ್ಣ ತಿಳುವಳಿಕೆಯನ್ನು ನೀಡುವರೆ ಉದ್ದೇಶಿಸಿದ್ದರೆ, ಅವರನ್ನು ಜ್ಞಾನಪ್ರಬುದ್ಧರನ್ನಾಗಿ ಮಾಡಲಿಕ್ಕೆ ತನ್ನ ದಿವ್ಯ ವಾಣಿ ಮತ್ತು ಸಂಬೋಧನೆಯ ಕವಾಟವನ್ನು ಅವನು ತೆರೆದಿಟ್ಟಿರುವನೆಂಬುದು ನಿಶ್ಚಯ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಸತ್ಯಾನ್ವೇಷಕರಿಗೆ ಕಲಿಸುವ ಒಂದು ಪ್ರಾರ್ಥನೆ ಈ ರೀತಿ ಇದೆ:

> "ಇಹ್ದಿನಸ್ಸಿರಾತಲ್ ಮುಸ್ತಕೀಮ - ಸಿರಾತಲ್ಲದ್ದೀನ ಅನ್‌ಅಮ್ತ ಅಲೈಹಿಂ" (1:6,7).
>
> ಓ ದೇವಾ, ನೀನು ನಮ್ಮನ್ನು ಸ್ಥಿರತೆಯ ಮಾರ್ಗದಲ್ಲಿ,ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ ನಡೆಸು.

ಇಲ್ಲಿ ಅನುಗ್ರಹಗಳು ಎಂಬುದರ ತಾತ್ಪರ್ಯ ದೇವನಿಂದ ಮನುಷ್ಯನಿಗೆ ನೇರವಾಗಿ ಲಭಿಸುವ ದಿವ್ಯ ವಾಣಿ (ಇಲ್‌ಹಾಂ), ದಿವ್ಯ ಪ್ರಕಟಣೆ ಮೊದಲಾದ ಆಧ್ಯಾತ್ಮಿಕ ಜ್ಞಾನಗಳಾಗಿವೆ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

> "ಇನ್ನಲ್ಲದೀನ ಖಾಲೂ ರಬ್ಬುನಲ್ಲಾಹು ಸುಮ್ಮಸ್ತಕಾಮೂ ತತನಸ್ಸಲು ಅಲೈಹಿಮುಲ್ ಮಲಾಇಕತು ಅಲಾತಖಾಫೂ ವಲಾ ತಹ್‌ಸನೂವ ಅಬ್ಶಿರೂ ಬಿಲ್ ಜನ್ನತಿಲ್ಲತೀ ಕುನ್ತುಂ ತೂಅದೂನ್" (41:31).
>
> ಸತ್ಯ ದೇವನನ್ನು ನಂಬಿಕೊಂಡು ಪೂರ್ಣ ಭಕ್ತಿಯನ್ನು ಕೈಗೊಂಡು ಸ್ಥಿರಚಿತ್ತರಾಗಿರುವವರ ಬಳಿಗೆ ದೇವಚರರು ಇಳಿದು ಬಂದು ಹೀಗೆ ಸಂದೇಶ ನೀಡುವರು: ನೀವು ಭಯಪಡುವುದಾಗಲಿ ವ್ಯಥೆಗೊಳ್ಳುವುದಾಗಲಿ ಬೇಡ. ನಿಮಗೆ ವಾಗ್ದಾನವಿತ್ತ ಸ್ವರ್ಗ ನಿಮಗಿರುವುದರಿಂದ ಸಂತೋಷ ಪಡಿರಿ.

ಈ ಪವಿತ್ರ ವಾಕ್ಯದಲ್ಲಿ ದೇವದಾಸರಾದ ಭಕ್ತ ಜನರಿಗೆ ಭಯ ಮತ್ತು ದು:ಖದ ಸಂದರ್ಭಗಳಲ್ಲಿ ದೈವಿಕ ವಾಣಿ (ಇಲ್‌ಹಾಂ) ಲಭಿಸುವುದೆಂದೂ ಅವರಿಗೆ ಆಶ್ವಾಸನೆ ನೀಡಲಿಕ್ಕೆ ದೇವದೂತರು ಪ್ರತ್ಯಕ್ಷಗೊಳ್ಳುವರೆಂದೂ ಸ್ಪಷ್ಟವಾಗಿ ಪ್ರಸ್ತಾವಿಸಲಾಗಿದೆ. ಇದೇ ಪ್ರಕಾರ ಪವಿತ್ರ ಖುರ್‌ಆನ್ ಬೇರೆಂದೆಡೆಯಲ್ಲಿ ಹೀಗೆ ಹೇಳುತ್ತದೆ:

> "ಲಹುಮುಲ್ ಬುಶ್ರಾ ಫಿಲ್ ಹಯಾತಿದ್ದುನ್ಯಾ ವ ಫಿಲ್ ಆಖಿರತಿ" (10:65).
>
> ದೇವನಲ್ಲಿ ಅನುರಕ್ತರಾದ ಭಕ್ತಜನರಿಗೆ ಅವನ ಪವಿತ್ರ ವಾಣಿಯ ಮೂಲಕ ಐಹಿಕ ಜೀವಿತದಲ್ಲೂ ಮುಂದಿನ ಜೀವಿತದಲ್ಲೂ ಶುಭಸಮಾಚಾರ ಲಭಿಸುವುದು.

(ಮುಂದುವರಿಯುವುದು)

**Read Ahmadiyya Periodicals in different languages to study different religions.**

# BADR

URDU WEEKLY

Single Copy : 0-40 Paise
Annual Subscription : Rs. 20/-

Apply to : The Manager,
"BADR" Urdu Weekly, P. O. QADIAN-143 516 [Punjab]

# MINARET

ENGLISH QUARTERLY JOURNAL

Single Copy : Rs. 1-50
Annual Subscription : Rs. 6/-

Apply to : Mr. M. P. Koyatty
Minaret Accounting Section
14/346, Francis Road
CALICUT-670 003 [Kerala]

# SATYADOOTHAN

MALAYALAM MONTHLY

Single Copy : Re. 1-00
Annual Subscription : Rs. 10/-

Apply to : The Manager
Satyadoothan Monthly
CANNANORE-670 001

# SAMADHANA VAZHI

TAMIL MONTHLY

Single Copy : 0-50 Paise
Annual Subscription : Rs. 6/-

Apply to : The Manager
Samadhana Vazhi Monthly
3, United India Colony
Kodambakkam
MADRAS-600 024

## 500 ವರ್ಷಗಳ ಬಳಿಕ


# ಸ್ಪೈನಿನಲ್ಲಿ ಪ್ರಥಮ ಮಸೀದಿ



ಕಳೆದ ವರ್ಷ ಅಕ್ಟೋಬರ್ 9ರಂದು ಅಹ್ಮದಿಯಾ ಜಮಾಅತಿನ ತೃತೀಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್‌ರವರು ಸ್ಪೈನಿನ ಕೊರ್ಡೋವಾದಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾಗುವ ಮಸೀದಿಗೆ ಶಿಲಾನ್ಯಾಸ ಗೈಯ್ದ ಚಾರಿತ್ರಿಕ ಸಂಭವದ ಬಳಿಕ ನಮಾಜು ಮಾಡುತ್ತಿದ್ದಾಗ. 500 ವರ್ಷಗಳ ದೀರ್ಘ ಅಂತರದ ಬಳಿಕ ಸ್ಪೈನಿನಲ್ಲಿ ನಿರ್ಮಿಸಲ್ಪಡುವ ಪ್ರಥಮ ಮಸೀದಿ ಇದಾಗಿದೆ. ಏಕದೇವೋಪಾಸಕರಾದ ಯಾರಿಗೂ ಪ್ರಾರ್ಥನೆ ಸಲ್ಲಿಸಲು ಈ ಮಸೀದಿ ಮುಕ್ತವೆಂದು ಖಲೀಫರು ಸಾರಿದರು.

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly, Oct. 1981 / Ikha 1360

## English Translation of the HOLY QUR'AN with Arabic Text & Extensive Index




**Price : Rs. 15-00**

**Postal Charge Extra**

### AHMADIYYA ENGLISH LITERATURE

1 INTRODUCTION TO THE STUDY OF HOLY QUR'AN 15-00
by Hazrath Mirza Bashiruddin Mahamud Ahmad

2 THE TEACHINGS OF ISLAM 6-00
by Hazrath Mirza Ghulam Ahmad

3 JESUS IN INDIA 2-25
by Hazrath Mirza Ghulam Ahmad

4 CHARACTERISTICS OF THE QUR'ANIC TEACHINGS 1-00
by Hazrath Mirza Bashiruddin Mahamud Ahmad

5 WHERE DID JESUS DIE ? 2-25
by J. D. Shams, Ex-Imam, London Mosque

**Write to : NAZIR DAWAT-O-TABLIGH, Qadian [Punjab]-143 516**

Edited and Published by Muhammad Yusuf on behalf of Jamath Ahmadiyya
at 10-23/1008, Ansari Road, Bunder, Mangalore-575 001
Printed at Karavali Printers, Azizuddin Road, Bunder, Mangalore-575 001.